ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 19 ಶನಿವಾರ 2022


ಸಂಪುಟ: 43 | ಸಂಚಿಕೆ: 212 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ ಛೂಮಂತ್ರ... ಛೂಮಂತ್ರ...



ಗೋವೆಯಲ್ಲಿ ಆಚರಿಸಿದ ದೀಪಾವಳಿ–3

ಪೋರ್ಚುಗೀಸ್ ಆಡಳಿತದ ಕುರುಹುಗಳ ನಡುವೆ ಮೈದಳೆದು ಬಂದ ನರಕಾಸುರ

■ ಪುಟ–4

ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಂದ

ಪಂಚರತ್ನ ಯಾತ್ರೆಗೆ ಅದ್ದೂರಿ ಚಾಲನೆ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸಾರಥ್ಯ ● ನವೆಂಬರ್ 1 ರಿಂದ ವಿಧ್ಯುಕ್ತವಾಗಿ ಆರಂಭ ● ಪಾದಯಾತ್ರೆ ಮಳೆ ಕಾರಣದಿಂದ ತಾತ್ಕಾಲಿಕ ಮುಂದೂಡಿಕೆ ಆಗಿತ್ತು ● ನಂಜುಂಡೇಶ್ವರ, ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸಿದ ನಂತರ ಮತ್ತೆ ಕೋಲಾರ ಜಿಲ್ಲೆ ಮುಳಬಾಗಿಲು ಕುರುಡುಮಲೆಯಿಂದ ಯಾತ್ರೆ ಪ್ರಾರಂಭ

ಪಂಚರತ್ನ


- ಆರೋಗ್ಯ ಭಾಗ್ಯ
- ವಸತಿ
- ಉದ್ಯೋಗ
- ನೀರಾವರಿ
- ಕೃಷಿ ಸೌಕರ್ಯ



ಕೋಲಾರ, ನ.18– ಜೆಡಿಎಸ್‌ನ ಮೊದಲ ಪಂಚರತ್ನ ಯಾತ್ರೆಗೆ ಅದ್ದೂರಿ ಸಮಾವೇಶದ ಮೂಲಕ ಚಾಲನೆ ನೀಡಲಾಗಿದೆ. ಮಳೆಯಿಂದ ಎರಡು ಬಾರಿ ಮುಂದೂಡಲಾಗಿದ್ದ ಪಂಚರತ್ನ ಯಾತ್ರೆಗೆ ಶುಕ್ರವಾರ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಚಾಲನೆ ನೀಡಿದರು.

ರಾಜ್ಯದ ಮೂಡಣ ಹೆಬ್ಬಾಗಿಲು ಎಂದು ಕರೆಯಲ್ಪಡುವ ಕೋಲಾರ ಜಿಲ್ಲೆಯ ಮುಳಬಾಗಿಲು ಹೊರ ಹೊಲಯದ ರಾಷ್ಟ್ರೀಯ ಹೆದ್ದಾರಿ ಬಳಿ ನಿರ್ಮಿಸಲಾಗಿದ್ದ ಬೃಹತ್ ವೇದಿಕೆ ಕಾರ್ಯಕ್ರಮದಲ್ಲಿ ಮೊದಲ ಪಂಚರತ್ನ ಯಾತ್ರೆಗೆ ಅದ್ದೂರಿ ಚಾಲನೆ ನೀಡಲಾಗಿದೆ. ನವೆಂಬರ್ 1 ರಂದು ಮುಳಬಾಗಿಲು ಬಳಿಯ ಕುರುಡುಮಲೆ ವಿನಾಯಕ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸಿ ಪಂಚರತ್ನ ಯಾತ್ರೆಗೆ ಚಾಲನೆ ನೀಡಲಾಗಿತ್ತು. ಆದರೆ, ನಿರಂತರ ಮಳೆ ಹಿನ್ನೆಲೆಯಲ್ಲಿ ಕೊನೆಯ ಕ್ಷಣದಲ್ಲಿ ಸಮಾವೇಶ ಹಾಗೂ ಯಾತ್ರೆಗೆ ಚಾಲನೆ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು. ಶುಕ್ರವಾರ ಮಧ್ಯಾಹ್ನ ಎರಡೂವರೆ ಗಂಟೆಗೆ ಜೆಡಿಎಸ್ ಮುಖಂಡರು ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವೇದಿಕೆ ಕಾರ್ಯಕ್ರಮಕ್ಕಾಗಿ 40 ಎಕರೆ ಪ್ರದೇಶದಲ್ಲಿ ಜರ್ಮನ್ ಟೆಂಟ್ ವ್ಯವಸ್ಥೆಯನ್ನು ಮಾಡಲಾಗಿದ್ದು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಿಂದ ಬಸ್‌ಗಳ ಮೂಲಕ



❝ ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್, ಬಿಜೆಪಿ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ಎರಡೂ ರಾಷ್ಟ್ರೀಯ ಪಕ್ಷಗಳು ತಮಿಳುನಾಡಿನ ಪರ ನಿಲುವು ಹೊಂದಿವೆ. ಹಿಂದೆ ಮನಮೋಹನ್ ಸಿಂಗ್, ಈಗ ಮೋದಿ ತಮಿಳುನಾಡು ರಾಜ್ಯದೊಂದಿಗೆ ಕೈಜೋಡಿಸಿವೆ. – ಎಚ್.ಡಿ.ದೇವೇಗೌಡ, ಜೆಡಿಎಸ್ ವರಿಷ್ಠ.

ಜನರನ್ನು ಕರೆತರಲಾಗಿದ್ದು ಸಮಾವೇಶದಲ್ಲಿ ಒಂದು ಲಕ್ಷಕ್ಕೂ ಅಧಿಕ ಜನರು ಭಾಗಿಯಾಗಿದ್ದು ಎಲ್ಲರಿಗೂ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಸಹ ಮಾಡಲಾಗಿತ್ತು.

ಎಚ್.ಡಿ.ದೇವೇಗೌಡರು ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿ, ಕೇಂದ್ರದ ಮೋದಿ ಸರ್ಕಾರ ತಮಿಳುನಾಡಿನ ಓಲೈಕೆಗಾಗಿ ನಮ್ಮ ಪಾಲಿನ ನೀರನ್ನು ತಮಿಳುನಾಡಿಗೆ ಬಿಟ್ಟು ಕೊಡುತ್ತಿದೆ. ನಮ್ಮ ನಾಡಿನ ಅಭಿವೃದ್ಧಿಗೆ ಪಂಚರತ್ನ ಯೋಜನೆ ಸಿದ್ಧಪಡಿಸಿದ್ದು, ಇವುಗಳ ಅನುಷ್ಠಾನಕ್ಕೆ ಕುಮಾರಸ್ವಾಮಿ ಅವರನ್ನು ಬೆಂಬಲಿಸಿ, ಅಧಿಕಾರ ನೀಡಿ ಎಂದು ವಿನಂತಿಸಿದರು. ಇನ್ನು ನಿಖಿಲ್ ಕುಮಾರಸ್ವಾಮಿ ಮಾತನಾಡಿ 1994ರಲ್ಲಿ ದೇವೇಗೌಡರು ಕುರುಡುಮಲೆ ವಿನಾಯಕನಿಗೆ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರ ನಡೆಸಿ, ಜೆಡಿಎಸ್ ಅಧಿಕಾರಕ್ಕೆ ತಂದಿದ್ದರು. ಅದೇ ರೀತಿ ಈ ಬಾರಿಯೂ ವಿನಾಯಕನ ಸನ್ನಿಧಾನದಿಂದ ಯಾತ್ರೆ ಪ್ರಾರಂಭಿಸಿದ್ದೇವೆ. ಈ ಬಾರಿ ರಾಜ್ಯದಲ್ಲಿ ▶ 8ನೇ ಪುಟಕ್ಕೆ

ಪಕ್ಷದ ಜ್ಯೋತಿಷಿ ಹೆಚ್.ಡಿ.ರೇವಣ್ಣ ಜೆಡಿಎಸ್ ಪಟ್ಟಿಗೆ ತಡೆ!

ಮೈಸೂರು, ನ.18–2023ರ ವಿಧಾನಸಭಾ ಚುನಾವಣೆಗೆ ಜೆಡಿಎಸ್‌ನಿಂದ ಸ್ಪರ್ಧಿಸುವ 100 ಅಭ್ಯರ್ಥಿಗಳ ಪಟ್ಟಿ ಸಿದ್ಧವಿದೆ. ಆದರೆ, ಪಕ್ಷದ ಜ್ಯೋತಿಷಿ ಹೆಚ್.ಡಿ.ರೇವಣ್ಣ, ಪಟ್ಟಿ ಬಿಡುಗಡೆ ದಿನ ಪ್ರಶಸ್ತವಾಗಿಲ್ಲ ಎಂದು ತಕರಾರು ತೆಗೆದಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಚಾಮುಂಡಿ ಬೆಟ್ಟದಲ್ಲಿ ದೇವಿ ದರ್ಶನ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನಲ್ಲಿ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ಚರ್ಚಿಸಿ, ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಕುರಿತು ನಿರ್ಧರಿಸಲಾಗುವುದು. ದೇವೇಗೌಡರೇ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಲಿದ್ದಾರೆ ಎಂದು ತಿಳಿಸಿದರು. ಕಳೆದ ಬಾರಿ ಕುಮಾರಪರ್ವ ಚಾಮುಂಡೇಶ್ವರಿ ಕ್ಷೇತ್ರದಿಂದ ಆರಂಭಿಸಲಾಗಿತ್ತು. ಮುಂಬರುವ 2023ರ ಚುನಾವಣಾ ಪ್ರಚಾರವೂ ಇಲ್ಲಿಂದಲೇ ಶುರುವಾಗಲಿದೆ. ಪಂಚರತ್ನ ರಥಯಾತ್ರೆ ಮುಂಬರುವ ಮಾರ್ಚ್‌ನಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಮಾರೋಪಗೊಳ್ಳಲಿದೆ.

ಮೈಸೂರಲ್ಲಿ ಉದ್ದಿಮೆ ಸ್ಥಾಪನೆಗೆ ದೇಶ–ವಿದೇಶ ಉದ್ಯಮಿಗಳ ತೀವ್ರಾಸಕ್ತಿ

● ಇತ್ತೀಚಿನ ಹೂಡಿಕೆದಾರರ ಸಮಾವೇಶದಲ್ಲಿ ಎರಡರಿಂದ ಮೂರು ಲಕ್ಷ ಕೋಟಿ ಹೂಡಿಕೆ ಒಪ್ಪಂದ ● ವಿದ್ಯುತ್ ಚಾಲಿತ ವಾಹನಗಳ ಉತ್ಪಾದನಾ ಘಟಕ ಸ್ಥಾಪನೆ ● ಇದರಿಂದ ಒಂದು ಲಕ್ಷ ಉದ್ಯೋಗಾವಕಾಶ ದೊರೆಯುವ ಭರವಸೆ



ಬೆಂಗಳೂರು, ನ.18(ಕೆಎಂಶಿ)– ರಾಷ್ಟ್ರ ಮತ್ತು ವಿಶ್ವದ ಬೃಹತ್ ಉದ್ದಿಮೆದಾರರು ಮೈಸೂರಿನಲ್ಲಿ ಬಂಡವಾಳ ಹೂಡಲು ಮುಂದಾಗಿದ್ದಾರೆ. ಇತ್ತೀಚೆಗೆ ನಗರದಲ್ಲಿ ನಡೆದ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಎರಡರಿಂದ ಮೂರು ಲಕ್ಷ ಕೋಟಿ ರೂ. ಮೈಸೂರಿನಲ್ಲಿ ಬಂಡವಾಳ ಹೂಡಲು ಉದ್ದಿಮೆದಾರರು ರಾಜ್ಯ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಬೃಹತ್ ಉದ್ದಿಮೆಗಳು ಮೈಸೂರಿನಲ್ಲಿ ತಲೆ ಎತ್ತುವುದರಿಂದ ಸ್ಥಳೀಯವಾಗಿ ಒಂದು ಲಕ್ಷ ಉದ್ಯೋಗ ▶ 8ನೇ ಪುಟಕ್ಕೆ

ವೋಟರ್ ಐಡಿ ಅಕ್ರಮ: 'ಚಿಲುಮೆ'ಯ ನಾಲ್ವರು ಬಂಧನ

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮ ಸಂಬಂಧ ಮಲ್ಲೇಶ್ವರಂ ಚಿಲುಮೆ ಸಂಸ್ಥೆಯ ಮೇಲೆ ಹಲಸೂರು ಗೇಟ್ ಪೊಲೀಸರು ದಾಳಿ ನಡೆಸಿ, ಪರಿಶೀಲನೆ ನಡೆಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಈ ಸಂಬಂಧ ಚಿಲುಮೆ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಗೆ ಸೇರಿದ ರೇಣುಕಾ ಪ್ರಸಾದ್, ಧರ್ಮೇಶ್, ಸುಧಾಕರ್ ಮತ್ತು ರಕ್ಷಿತ್ ಎಂಬುವರನ್ನು ಬಂಧಿಸಿ ತೀವ್ರ ವಿಚಾರಣೆ ನಡೆಸಿದ್ದಾರೆ. ಇನ್ನು ಚಿಲುಮೆ ಸಂಸ್ಥೆಗೆ ಐಡಿ ಕಾರ್ಡ್ ನೀಡಿದ್ದ ಮಹದೇವಪುರ ವಲಯದ ಆರ್‌ಓ ಚಂದ್ರಶೇಖರ್‌ರನ್ನು ಸಸ್ಪೆಂಡ್ ಮಾಡಲಾಗಿದೆ. ಬೆಂಗಳೂರಿನ ▶ 8ನೇ ಪುಟಕ್ಕೆ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ

● ಸಂಸದ ಪ್ರತಾಪ್ ಸಿಂಹ ಕಿಡಿನುಡಿ ● ಸ್ನಾತಕೋತ್ತರ ಪದವೀಧರರು ಲಂಚ ಕೊಟ್ಟು 'ಡಿ' ಗ್ರೂಪ್ ನೌಕರಿ ಹಿಡಿದಿದ್ದಾರೆ ● ಕೆ–ಸೆಟ್‌ನಲ್ಲಿ ಪಾಸ್ ಮಾಡಿಸುವುದಾಗಿ 4ರಿಂದ 6 ಲಕ್ಷ ರೂ. ಲಂಚ ವಸೂಲಿ ● ಪ್ರತಿಭಾವಂತರಿಗೆ ಮೋಸ ಆಗಬಾರದು ಎಂದು ಕೆ–ಸೆಟ್ ತಡೆದಿದ್ದೇನೆ ● ಎಸ್.ಎಂ.ಕೃಷ್ಣ ಒಬ್ಬರೇ ದೂರದೃಷ್ಟಿವುಳ್ಳ ಮುಖ್ಯಮಂತ್ರಿ; ಹಾಗಾಗಿ ಅವರ ಗೌರವಿಸುತ್ತೇನೆ



ಮೈಸೂರು,ನ.18–ಮೈಸೂರು ವಿಶ್ವವಿದ್ಯಾಲಯದ ಪರಿಸ್ಥಿತಿ ತೀವ್ರ ಹದಗೆಟ್ಟಿದ್ದು, ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ಕಿಡಿಕಾರಿದರು.

ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಎಜುಕೇರ್ ಐಟಿಇಎಸ್, ವುಮೆನ್ ಕ್ಯಾನ್ ಫೌಂಡೇಶನ್ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಮಹಿಳಾ ಉದ್ಯೋಗ ಮೇಳ ಮತ್ತು ಮಹಿಳೆಯರು ಉತ್ಪಾದಿಸಿದ ಉತ್ಪನ್ನಗಳ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಮೈಸೂರು ವಿವಿ ಎಷ್ಟು ಕೆಟ್ಟು ಹೋಗಿದೆ ಎಂದರೆ ಮಾಸ್ಟರ್ ಡಿಗ್ರಿ ಮಾಡಿದ 1,300 ಮಂದಿ ಮೈಸೂರು ವಿವಿಯಲ್ಲಿ ಲಂಚ ಕೊಟ್ಟು ಡಿ ಗ್ರೂಪ್ ನೌಕರರಾಗಿ 12 ಸಾವಿರ ರೂ. ಸಂಬಳಕ್ಕೆ ಸೇರಿಕೊಂಡಿದ್ದಾರೆ ಎಂದು ಆರೋಪಿಸಿದರು. ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆಯಾದ ಕೆ–ಸೆಟ್ ಪರೀಕ್ಷೆಯಲ್ಲೂ ಲಂಚಗುಳಿತನ ನುಸುಳಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, 4 ರಿಂದ 6 ಲಕ್ಷ ರೂ. ಲಂಚ ಪಡೆದು ಕೆ–ಸೆಟ್ ಪರೀಕ್ಷೆಯಲ್ಲಿ ಪಾಸ್ ಮಾಡಿಕೊಡುತ್ತಾರೆ. ಪ್ರತಿಭಾವಂತ ಮಕ್ಕಳಿಗೆ ಮೋಸ ಆಗಬಾರದು. ಅವರಿಗೆ ಆದ್ಯತೆ ಸಿಗಬೇಕು ಎಂಬ ಉದ್ದೇಶದಿಂದ ಯುಜಿಸಿಯ ಜಗದೀಶ್ ಕುಮಾರ್ ಅವರ ಬಳಿ ಈ ವಿಷಯ ಪ್ರಸ್ತಾಪಿಸಿ, ಕಳೆದ ಒಂದೂವರೆ ವರ್ಷದಿಂದ ಕೆ–ಸೆಟ್ ಪರೀಕ್ಷೆ ಆಗದಂತೆ ತಡೆದಿದ್ದೇನೆ ಎಂದು ಪ್ರತಾಪ್ ಸಿಂಹ ತಿಳಿಸಿದರು. 2 ಅಥವಾ 4ನೇ ತರಗತಿ ಓದಿರುವವರು ರಿಯಲ್ ಎಸ್ಟೇಟ್ ಮಾಡುತ್ತಿದ್ದಾರೆ. ಮಾಸ್ಟರ್ ಡಿಗ್ರಿ ಮಾಡಿರುವ ನಾನೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡಬಹುದಿತ್ತು. ಆದರೆ, ನಾನು ಅದಕ್ಕಾಗಿ ಇಲ್ಲಿಗೆ ಬಂದಿಲ್ಲ. ಮೈಸೂರಿನ ಜನ ನಾನು ಇಲ್ಲಿಗೆ ▶ 8ನೇ ಪುಟಕ್ಕೆ

ಕೋಲಾರ, ವರುಣಾ, ಬಾದಾಮಿ– ಈ ಮೂರರಲ್ಲೇ ಒಂದೆಡೆ ಸ್ಪರ್ಧೆ

● ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ
● ಈ ಬಾರಿ ಒಂದೇ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ
● ನಾಮಪತ್ರ ಸಲ್ಲಿಸುವಾಗ ಎಲ್ಲಿ ಅಂತ ಪ್ರಕಟಿಸುತ್ತೇನೆ



ಮೈಸೂರು,ನ.18(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೋಲಾರ, ವರುಣಾ ಹಾಗೂ ಬಾದಾಮಿ ಕ್ಷೇತ್ರ– ಇವುಗಳಲ್ಲಿ ಯಾವುದಾದರೂ ಒಂದು ಕ್ಷೇತ್ರದಲ್ಲಿ ಸ್ಪರ್ಧಿಸುವುದಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದ ಬಳಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು. ರಾಜ್ಯದ ವಿವಿಧ ಕ್ಷೇತ್ರಗಳಿಂದ ಸ್ಪರ್ಧೆಗೆ ಆಹ್ವಾನ ಬಂದಿತ್ತು. ಆದರೆ ನಾನು ಮೂರು ಕ್ಷೇತ್ರಗಳನ್ನು ಒಳಗೊಂಡಿರುವ ಶಾರ್ಟ್ ಲಿಸ್ಟ್ ಮಾಡಿಕೊಂಡಿದ್ದೇನೆ. ಹಲವು ದಿನಗಳಿಂದ ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತೆ ಪಕ್ಷದ ಕಾರ್ಯಕರ್ತರು, ಹಿತೈಷಿಗಳು, ಮುಖಂಡರು ಆಹ್ವಾನಿಸುತ್ತಲೇ ಇದ್ದರು. ಎಲ್ಲರೂ ಪ್ರೀತಿಯಿಂದ ಆಹ್ವಾನಿಸುತ್ತಿದ್ದರು. ಆದರೆ ನಾನು ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂದು ಶಾರ್ಟ್ ಲಿಸ್ಟ್ ಮಾಡಿಕೊಂಡಿದ್ದೇನೆ. ಕೋಲಾರ, ಬಾದಾಮಿ, ವರುಣಾ ಕ್ಷೇತ್ರವುಳ್ಳ ಪಟ್ಟಿ ಸಿದ್ಧಪಡಿಸಲಾಗಿದೆ. ಚುನಾವಣೆ ಘೋಷಣೆ ಮಾಡಿದಾಗ ಯಾವ ▶ 8ನೇ ಪುಟಕ್ಕೆ

ಜೆಡಿಎಸ್ ಪಂಚರತ್ನ... ಅಷ್ಟರತ್ನ... ದಶರತ್ನ... ಏನಾದರೂ ಮಾಡಿಕೊಳ್ಳಲಿ

ಜೆಡಿಎಸ್ ಪಂಚರತ್ನ ಯಾತ್ರೆ ನಡೆಸುತ್ತಿರುವ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮಾಜಿ ಸಿಎಂ ಸಿದ್ದರಾಮಯ್ಯ, ಅದು ಜೆಡಿಎಸ್‌ನ ಕಾರ್ಯಕ್ರಮ. ಅವರ ಪಕ್ಷದ ಕಾರ್ಯಕ್ರಮದ ಬಗ್ಗೆ ಮಾತನಾಡುವುದಿಲ್ಲ. ಅವರು ಯಾವ ರತ್ನವನ್ನಾದರೂ ಮಾಡಿಕೊಳ್ಳಲಿ ನಮ್ಮ ಅಭ್ಯಂತರವಿಲ್ಲ. ಪಂಚರತ್ನ, ಅಷ್ಟರತ್ನ, ದಶರತ್ನ ಮಾಡಿಕೊಳ್ಳಲಿ. ಅವರ ಪಕ್ಷದ ಕಾರ್ಯಕ್ರಮಕ್ಕೆ ಆಕ್ಷೇಪಿಸುವುದಿಲ್ಲ. ಮರುಜನ್ಮ ಎಂಬ ಪದ ಬಳಕೆಗೆ ಆಕ್ಷೇಪ ವ್ಯಕ್ತಪಡಿಸಿ, ಪತ್ರಕರ್ತರು ಪದ ಬಳಕೆ ಮಾಡುವಾಗ ಜವಾಬ್ದಾರಿ ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

2023ರ ಜನವರಿ ಒಳಗಾಗಿ ಕಬಿನಿ 2ನೇ ಹಂತದ ಯೋಜನೆ ಪೂರ್ಣ: ಇದರಿಂದ 120 ಎಂಎಲ್‌ಡಿ ನೀರು ಪೂರೈಕೆ

ಇದರೊಂದಿಗೆ ಕೆ.ಆರ್.ವಿಧಾನಸಭಾ ಕ್ಷೇತ್ರ ಬೋರ್‌ವೆಲ್ ಮುಕ್ತವಾಗಲಿದೆ: ಶಾಸಕ ಎಸ್.ಎ.ರಾಮದಾಸ್

ಮೈಸೂರು, ನ.18(ಆರ್‌ಕೆ)–ಮೈಸೂರು ನಗರಕ್ಕೆ 120 ಎಂಎಲ್‌ಡಿ ನೀರು ಪೂರೈಸುವ ಕಬಿನಿ 2ನೇ ಹಂತದ ಯೋಜನೆ 2023ರ ಜನವರಿ ಅಂತ್ಯಕ್ಕೆ ಪೂರ್ಣಗೊಳ್ಳುವುದು ಎಂದು ಶಾಸಕ ಎಸ್.ಎ. ರಾಮದಾಸ್ ತಿಳಿಸಿದ್ದಾರೆ.

ಗುರುವಾರ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಉಪ ಮೇಯರ್ ಡಾ. ಜಿ.ರೂಪಾ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಅವರೊಂದಿಗೆ ಬಿದರಗೂಡುವಿನಲ್ಲಿ ಕಬಿನಿ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಸುದ್ದಿಗಾರರಿಗೆ ಇದರ ಪ್ರಗತಿ ಬಗ್ಗೆ ಮಾಹಿತಿ ನೀಡಿದರು.

ಜಾಕ್‌ವೆಲ್ ಪಾಯಿಂಟ್‌ನಿಂದ ಪ್ರಸ್ತುತ ದಿನಕ್ಕೆ 60 ಎಂಎಲ್‌ಡಿ ನೀರು ಮೈಸೂರು ನಗರಕ್ಕೆ ಪೂರೈಕೆಯಾಗುತ್ತಿದ್ದು, ಅದನ್ನು 120 ಎಂಎಲ್‌ಡಿ ಸಾಮರ್ಥ್ಯಕ್ಕೆ ಹೆಚ್ಚಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ





ಶಾಸಕ ಎಸ್.ಎ.ರಾಮದಾಸ್ ಗುರುವಾರ ಮೈಸೂರಿಗೆ ನೀರು ಸರಬರಾಜಾಗುವ ಕಬಿನಿ 2ನೇ ಹಂತದ ಯೋಜನೆ ಕಾಮಗಾರಿ ಪರಿಶೀಲಿಸಿದರು. ಉಪ ಮೇಯರ್ ಡಾ.ಜಿ.ರೂಪಾ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಹಾಗೂ ಇತರರಿದ್ದಾರೆ. ಬಲಚಿತ್ರದಲ್ಲಿ ಮೈಸೂರಿಗೆ ನೀರು ಸರಬರಾಜಾಗುವ ಯೋಜನೆಯ ವಿವರಣೆ ನೀಡುತ್ತಿರುವ ಶಾಸಕ ಎಸ್.ಎ.ರಾಮದಾಸ್ ಅವರನ್ನು ಕಾಣಬಹುದು.

(ಮುಡಾ)ವು ಕಾಮಗಾರಿ ನಡೆಸುತ್ತಿದ್ದು, 2023ರ ಜನವರಿ ಒಳಗಾಗಿ ಯೋಜನೆ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

ದಿನಕ್ಕೆ 120 ರಿಂದ 180 ಎಂಎಲ್‌ಡಿ ನೀರು ಪೂರೈಸಬಲ್ಲ ಈ ಯೋಜನೆಯಲ್ಲಿ ಈಗ ಕೇವಲ 60 ಎಂಎಲ್‌ಡಿ ಮಾತ್ರ ಮೈಸೂರು ನಗರದ ಕೆ.ಆರ್.ಕ್ಷೇತ್ರದ ದಕ್ಷಿಣ ಭಾಗದ ವಸತಿ ಬಡಾವಣೆಗಳಿಗೆ ಸರಬರಾಜಾಗುತ್ತಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ಕಾಮಗಾರಿ ಕೈಗೆತ್ತಿಕೊಂಡಿದ್ದು, ಬೇಡಿಕೆಗನುಗುಣವಾಗಿ ಜನರಿಗೆ ನೀರು ಕೊಡಲು ಈ ಯೋಜನೆಯಿಂದ ಸಾಧ್ಯವಾಗುತ್ತದೆ ಎಂದು ರಾಮದಾಸ್ ನುಡಿದರು.

1,200 ಹೆಚ್‌ಪಿ ಸಾಮರ್ಥ್ಯದ ಪಂಪಿಂಗ್ ಮೋಟಾರ್ ಅಳವಡಿಸಲು ಮುಡಾ ನಿರ್ಧರಿಸಿದ್ದು, ಇದರಿಂದ ಯಾವುದೇ ಅಡೆತಡೆ ಇಲ್ಲದೆ 120 ಎಂಎಲ್‌ಡಿ ನೀರನ್ನು ಪಂಪ್ ಮಾಡಬಹುದಾಗಿದೆ. ಕಾಮಗಾರಿ ಮುಗಿಯುತ್ತಿದ್ದಂತೆಯೇ ತಮ್ಮ ಕ್ಷೇತ್ರಕ್ಕೆ ಸಮೃದ್ಧಿಯಾಗಿ ಕುಡಿಯುವ ನೀರು ಪೂರೈಸಬಹುದು. ಶೇ.70ರಷ್ಟು ಟ್ಯೂಬ್ ಮಾಡ್ಯೂಲ್ ಕೆಲಸ ಹಾಗೂ ಶೇ.40ರಷ್ಟು ರ್‍ಯಾಪಿಡ್ ಸ್ಯಾಂಡ್ ಫಿಲ್ಟರ್ ಕಾಮಗಾರಿ ಪೂರ್ಣಗೊಂಡಿದೆ ಎಂದು ವಿವರಿಸಿದರು.

ಈ ಯೋಜನೆ ಮುಕ್ತಾಯಗೊಳ್ಳುತ್ತಿದ್ದಂತೆಯೇ ಕೆ.ಆರ್. ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಹಲವು ಬಡಾವಣೆಗಳಿಗೆ ಕಬಿನಿ ನೀರು ಪೂರೈಸಬಹುದಾಗಿದ್ದು, ಇದರಿಂದ ಇಡೀ ಕೆಆರ್.ಕ್ಷೇತ್ರ ಬೋರ್‌ವೆಲ್‌ಗಳಿಂದ ಮುಕ್ತವಾಗಲಿದೆ. ಈಗ ಕ್ಷೇತ್ರದಲ್ಲಿ ಕೊಳವೆ ಬಾವಿಗಳಿಂದ 20 ಎಂಎಲ್‌ಡಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ ಎಂದು ರಾಮದಾಸ್ ನುಡಿದರು.

ಚಿಲುಮೆ ಮೂಲಕ ಮತದಾರರ ಮಾಹಿತಿಯನ್ನು ದುರ್ಬಳಕೆ ಮಾಡಿದ್ದರೆ ನಮ್ಮನ್ನು ಬಂಧಿಸಲಿ

● ಸರ್ಕಾರಕ್ಕೆ ಡಿ.ಕೆ.ಶಿವಕುಮಾರ್ ಸವಾಲು ● ಡಿವಿಸಿ ತನಿಖೆ ವಿರೋಧಿಸಿ ಚುನಾವಣಾ ಆಯೋಗಕ್ಕೆ ದೂರು



ಬೆಂಗಳೂರು, ನ.18(ಕೆಎಂಶಿ)–ನಮ್ಮ ಅವಧಿಯಲ್ಲಿ ಚಿಲುಮೆ ಸಂಸ್ಥೆ ಮೂಲಕ ಮತದಾರರ ಮಾಹಿತಿ ದುರ್ಬಳಕೆ ಮಾಡಿದ್ದರೆ ನಮ್ಮನ್ನು ಬಂಧಿಸಲಿ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸವಾಲು ಹಾಕಿದ್ದಾರೆ.

ನಮ್ಮ ಅವಧಿಯಲ್ಲಿ ಯಾವ ಅಧಿಕಾರಿ, ಮಂತ್ರಿಗಳು ಅದಕ್ಕೆ ಅವಕಾಶ ನೀಡಿದ್ದರೋ ನನಗೆ ಗೊತ್ತಿಲ್ಲ. ಇದು ಗಂಭೀರ ಅಪರಾಧವಾಗಿದೆ. ಚುನಾವಣಾ ಆಯೋಗವು ಈ ವಿಚಾರವನ್ನು ಡಿವಿಸಿಗೆ (ವಿಭಾಗೀಯ ಅಧಿಕಾರಿ) ನೀಡಿದ್ದು, ಇದು ಡಿವಿಸಿಯಿಂದ ತನಿಖೆಯಾಗುವ ವಿಚಾರವಲ್ಲ. ನಾಳೆ ನಾವು ರಾಜ್ಯ ಚುನಾವಣಾ ಆಯೋಗದ ಅಧಿಕಾರಿಗಳನ್ನು ಭೇಟಿ ಮಾಡಲು ಸಮಯ ಕೇಳಿದ್ದೇವೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಚಿಲುಮೆ ಸಂಸ್ಥೆಗೆ ನೀಡಿದ್ದ ಅನುಮತಿ ಆದೇಶವನ್ನು ಗೌರವ್ ಗುಪ್ತಾ ಅವರು ಏಕಾಏಕಿ ಹಿಂಪಡೆದಿದ್ದಾರೆ. ಆದರೆ ಈಗಾಗಲೇ ಈ ಸಂಸ್ಥೆಯ ಸುಮಾರು 7–8 ಸಾವಿರ ಸಿಬ್ಬಂದಿ ಮನೆ, ಮನೆಗೆ ಹೋಗಿ ಮತದಾರರ ಮಾಹಿತಿ ಕಲೆ ಹಾಕಿದ್ದಾರೆ. ಮತ್ತೊಂದೆಡೆ ಕೆಲವರು ತಮ್ಮ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಹೇಳುತ್ತಿರುವ ವರದಿಗಳನ್ನು ಮಾಧ್ಯಮಗಳಲ್ಲಿ ನೋಡಿದೆ.

ಈ ಸಂಸ್ಥೆಯ ಕಾರ್ಯವ್ಯಾಪ್ತಿ ಏನಿದೆ ಎಂದು ನಮ್ಮ ಬಳಿ ಮಾಹಿತಿ ಇದೆ. ಈ ಬಗ್ಗೆ ಅಲ್ಲಿ ಕೆಲಸ ಮಾಡುತ್ತಿದ್ದವರಿಂದಲೇ ಮಾಹಿತಿ ಕಲೆ ಹಾಕಿದ್ದೇನೆ. ಅವರು ಜನಪ್ರತಿನಿಧಿಗಳ ಬಳಿ ಹೋಗಿ ನಾವು ನಿಮ್ಮನ್ನು ಗೆಲ್ಲಿಸುತ್ತೇವೆ ಎಂದು ಪ್ರತಿ ವಾರ್ಡ್‌ನಲ್ಲಿ ಕಾರ್ಪೊರೇಟರ್ ಬಳಿ 1 ಕೋಟಿ ಹಣ ಕೇಳಿದ ಬಗ್ಗೆ ಹಲವರು ಮಾಹಿತಿ ನೀಡಿದ್ದಾರೆ. ಈ ವಿಚಾರದಲ್ಲಿ ನಾವು ಕೂಡ ನಮ್ಮದೇ ಆದ ತನಿಖೆ ಮಾಡಿದ್ದೇವೆ.

ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಉಡಾಫೆಯಾಗಿ ಮಾತನಾಡಬಾರದು. ಮುಖ್ಯಮಂತ್ರಿಗಳು ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿದ್ದು, ಅವರು ಈ ವಿಚಾರದಲ್ಲಿ ಹೆಚ್ಚಿನ ಜವಾಬ್ದಾರಿ ಹೊಂದಿರಬೇಕು.



ಯಾವ ಕ್ಷೇತ್ರಗಳಲ್ಲಿ, ಎಷ್ಟು ವಾರ್ಡ್‌ಗಳಲ್ಲಿ ಮಾಹಿತಿ ಕಲೆ ಹಾಕಿದ್ದಾರೆ, ಖಾಲಿ ಮನೆ, ನಿವೇಶನಗಳನ್ನು ಗುರುತಿಸಿ ಅವುಗಳ ದುರ್ಬಳಕೆಗೆ ಹೇಗೆ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಗೊತ್ತಿದೆ. ರಾಜ್ಯ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿ, ಈ ಸಂಸ್ಥೆಗೆ ಅನುಮತಿ ಆದೇಶ ನೀಡಿದ್ದಾರೆ. ಆದರೂ ಆಯೋಗದವರು ಯಾಕೆ ಕ್ರಮ ಕೈಗೊಂಡಿಲ್ಲ?

ನಾವು ಪೊಲೀಸ್ ಆಯುಕ್ತರಿಗೆ ಕೊಟ್ಟಿರುವ ದೂರಿನ ಮಾಹಿತಿಯನ್ನು ಇ–ಮೇಲ್ ಮೂಲಕ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದೇವೆ. ನಾಳೆ ಮಧ್ಯಾಹ್ನ ಚುನಾವಣಾ ಆಯೋಗದ ಅಧಿಕಾರಿಗಳನ್ನು ನಾನು, ಸಿದ್ದರಾಮಯ್ಯ ಹಾಗೂ ಇತರ ನಾಯಕರು ಭೇಟಿ ಮಾಡಲಿದ್ದೇವೆ ಎಂದು ಹೇಳಿದರು.

ಈ ಸಂಸ್ಥೆಗಳ ನಿರ್ದೇಶಕ ರವಿಕುಮಾರ್ ಬಿಟ್ಟು ಬಿಎಲ್‌ಒ ಆಗಿ ಸಮೀಕ್ಷೆ ಮಾಡಿದ ಸಿಬ್ಬಂದಿ ಮೇಲೆ ಎಫ್‌ಐಆರ್ ದಾಖಲಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ಅವರಿಗೆ ರಕ್ಷಣೆ ನೀಡುತ್ತಿದ್ದಾರೆ. ಇದನ್ನೇ ನಾವು ಹೇಳುತ್ತಿರುವುದು. ಆ ಗುರುತಿನ ಚೀಟಿ ಮಾಡಿದವರು ಯಾರು, ಈ ಗುರುತಿನ ಚೀಟಿ ವಿತರಣೆ ಮಾಡಿರುವ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಅಧಿಕಾರಿಗಳ ವಿರುದ್ಧವೂ ಎಫ್‌ಐಆರ್ ಆಗಬೇಕು. ಸರ್ಕಾರಿ ಹುದ್ದೆಯನ್ನು ಬೇರೆಯವರಿಗೆ ನೀಡಲು ಸಾಧ್ಯವಿಲ್ಲ. ನಾನು ಮುಖ್ಯಮಂತ್ರಿ ಹಾಗೂ ಸರ್ಕಾರಿ ಅಧಿಕಾರಿ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಸರ್ಕಾರದ ಅವಧಿಯಲ್ಲಿ ನಾನು, ಅಥವಾ ಕುಮಾರಸ್ವಾಮಿ ಅಥವಾ ಬೆಂಗಳೂರಿನ ಯಾವುದೇ ಸಚಿವರು, ಶಾಸಕರು ಈ ಕೆಲಸ ಮಾಡಿದ್ದರೆ ನಮ್ಮ ವಿರುದ್ಧವೂ ಕ್ರಮ ಕೈಗೊಳ್ಳಲಿ. ಈ ವಿಚಾರದಿಂದಲೂ ದೇಶದ ಮುಂದೆ ರಾಜ್ಯದ ಮಾನ ಹರಾಜಾಗುತ್ತಿದೆ. ಮುಖ್ಯಮಂತ್ರಿಗಳು ಇದರ ಗಂಭೀರತೆ ಅರಿಯಬೇಕು.

ಮತದಾನದ ಹಕ್ಕು ಮೂಲಭೂತ ಹಕ್ಕಾಗಿದ್ದು, ಅದನ್ನು ಕಸಿಯುವ ಅಕ್ರಮ ಮಾಡಲಾಗಿದೆ. ಚುನಾವಣೆಯಲ್ಲಿ ಸೋಲುತ್ತೇವೆ ಎಂಬ ಭಯದಿಂದ ಇಂತಹ ಅಕ್ರಮಕ್ಕೆ ಮುಂದಾಗಿರುವುದು ಪ್ರಜಾಪ್ರಭುತ್ವ ವ್ಯವಸ್ಥೆ, ಮತದಾರರಿಗೆ ಮಾಡಿರುವ ಅಪಮಾನ. ಈ ಸಮಯದಲ್ಲಿ ನಾನು ಜೆಡಿಎಸ್, ಕಮ್ಯುನಿಸ್ಟ್, ರೈತ ಸಂಘ ಹಾಗೂ ನಮ್ಮ ಪಕ್ಷದವರೂ ಬೂತ್‌ಗಳಿಗೆ ಹೋಗಿ ಮತದಾರರ ಪಟ್ಟಿಯನ್ನು ಪರಿಶೀಲಿಸಿಕೊಳ್ಳಿ. ಅನೇಕರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ.

ಅಧಿಕಾರಿಗಳು, ಬಿಎಲ್‌ಓಗಳ ಮೂಲಕ ಈ ರೀತಿ ಅಕ್ರಮ ಮಾಡಲಾಗುತ್ತಿದೆ ಎಂದು ಸಂದೇಶ ನೀಡಲು ಬಯಸುತ್ತೇನೆ. ನಮ್ಮ ಪಕ್ಷದವರಿಗೆ ಪ್ರತಿ ಬೂತ್‌ನಲ್ಲಿ ಏಜೆಂಟರನ್ನು ನೇಮಿಸಲು ಹಕ್ಕು ನೀಡಲಾಗಿದೆ. ನೀವು ಬಿಎಲ್‌ಎಗಳ ಮೂಲಕ ಮಾಹಿತಿ ನೀಡಿ ಮತದಾರರ ಪಟ್ಟಿ ಪರಿಶೀಲಿಸಿಕೊಳ್ಳಿ. 26 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದ್ದು, 14 ಲಕ್ಷ ಹೆಸರನ್ನು ಹೊಸದಾಗಿ ಸೇರಿಸಲಾಗಿದೆ ಎಂದು ಅವರೇ ಹೇಳಿದ್ದಾರೆ. ಯಾರ ಹೆಸರು ಕೈ ಬಿಟ್ಟು, ಯಾರ ಹೆಸರು ಸೇರಿಸಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ಹೀಗೆ ಮಾಡಲಾಗಿದೆ.

ಹೀಗಾಗಿ ಕಾರ್ಯಕರ್ತರು ಬಹಳ ಜಾಗರೂಕರಾಗಿ ಈ ಬಗ್ಗೆ ಗಮನಹರಿಸಬೇಕು. ಪ್ರತಿ ಕ್ಷೇತ್ರದಲ್ಲಿ ತಮ್ಮ ವಿರುದ್ಧ ಇರುವ ಮತದಾರರ ಹೆಸರನ್ನು ಪಟ್ಟಿಯಿಂದ ಕೈಬಿಟ್ಟು, ಅಕ್ರಮವಾಗಿ ಚುನಾವಣೆ ಗೆಲ್ಲಲು ಹೊರಟಿದ್ದಾರೆ ಎಂದು ತಿಳಿಸಿದರು.

ನವೋದ್ಯಮಗಳಿಗೆ ಬೂಸ್ಟರ್ ಕಿಟ್

9 ಸಂಸ್ಥೆಗಳೊಂದಿಗೆ ಕರ್ನಾಟಕ ಇನ್ನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿ ಒಡಂಬಡಿಕೆ



ಬೆಂಗಳೂರು, ನ.18(ಕೆಎಂಶಿ)–ನವೋದ್ಯಮಗಳ ಬೆಳವಣಿಗೆಗೆ ಇಂಬು ನೀಡುವ ನಿಟ್ಟಿನಲ್ಲಿ ಮತ್ತು ರಚನಾತ್ಮಕ ನೆರವು ನೀಡುವ ಉದ್ದೇಶದ ಬೂಸ್ಟರ್ ಕಿಟ್ ಉಪಕ್ರಮಕ್ಕೆ ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಚಾಲನೆ ನೀಡಿದರು. ಒಟ್ಟು ಒಂಬತ್ತು 9 ಸಂಸ್ಥೆಗಳ ಜತೆಗೆ ಕರ್ನಾಟಕ ಇನ್ನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿ (ಕಿಟ್ಸ್) ವ್ಯವಸ್ಥಾಪಕ ನಿರ್ದೇಶಕ ಮೀನಾ ನಾಗರಾಜ ಅವರು ಸರ್ಕಾರದ ಪರವಾಗಿ ಸಹಿ ಹಾಕಿದರು.

ಈ ಸಂಬಂಧವಾಗಿ ಗೂಗಲ್, ಪೇಟಿಎಂ, ಹೆಚ್‌ಡಿಎಫ್‌ಸಿ, ರೇಜರ್ ಪೇ, ಮೈಕ್ರೋಸಾಫ್ಟ್, ಗೆಯ್ನ್, ದಯಾನಂದ ಸಾಗರ್ ಉದ್ಯಮಶೀಲತಾ ಮತ್ತು ವಾಣಿಜ್ಯ ಪರಿಪೋಷಣಾ ಕೇಂದ್ರ, ಎಡಬ್ಲ್ಯು ಎಸ್ ಮತ್ತು ಸ್ಟಾರ್ಟ್‌ಗರ್ ವೆಂಚರ್ಸ್ ಜತೆಗೆ ಐಟಿ-ಬಿಟಿ ಇಲಾಖೆ ಮತ್ತು ಕರ್ನಾಟಕ ಇನ್ನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿಗಳು (ಕಿಟ್ಸ್) ಸಚಿವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಅಂಕಿತ ಹಾಕಿದವು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಕರ್ನಾಟಕ ಸ್ಟಾರ್ಟ್‌ಅಪ್ ಸೆಲ್‌ನಲ್ಲಿ ನೋಂದಣಿ ಮಾಡಿಕೊಂಡಿರುವ ನವೋದ್ಯಮಗಳಿಗೆ ಇನ್ನುಮುಂದೆ ಹೆಚ್‌ಡಿಎಫ್‌ಸಿ, ಪೇಟಿಎಂ ಮತ್ತು ರೇಜರ್ ಪೇ ಸಂಸ್ಥೆಗಳ ಮೂಲಕ ಬ್ಯಾಂಕಿಂಗ್ ಹಾಗೂ ಫಿನ್‌–ಟೆಕ್ ಸೇವೆಗಳು ಸಿಗಲಿವೆ. ಜತೆಗೆ ಸ್ಟಾರ್ಟ್‌–ಅಪ್ ಉಪಕ್ರಮದಡಿ ಹೆಚ್ಚಿನ ಮಾರುಕಟ್ಟೆ ಪ್ರಸ್ತುತಿ, ಬೇಡಿಕೆ ಸೃಷ್ಟಿ ಮತ್ತು ವ್ಯಾಪಾರ–ವಹಿವಾಟುಗಳ ಸುಸ್ಥಿರ ಬೆಳವಣಿಗೆ ಸಾಧ್ಯವಾಗಲಿದೆ ಎಂದರು.

ಹಾಗೆಯೇ, ಟೆಲಿಗ್ಲೋಬಲ್ ಅಕ್ಸಲರೇಟರ್ ಫಾರ್ ಇನ್ನೋವೇಶನ್ ನೆಟ್‌ವರ್ಕ್ (ಗೆಯ್ನ್) ಜತೆಗಿನ ಒಡಂಬಡಿಕೆಯಿಂದ ನವೋದ್ಯಮಗಳಿಗೆ ವೇಗವರ್ಧಿತ ಬೆಂಬಲ, ದಯಾನಂದ ಸಾಗರ್ ಸಂಸ್ಥೆಯ ಮೂಲಕ ಪರಿಪೋಷಣೆಯ ಸಹಾಯ, ಸ್ಟಾರ್ಟ್‌ಗರ್ ವೆಂಚರ್ಸ್ ಮೂಲಕ ಮಹಿಳಾ ಉದ್ಯಮಿಗಳಿಗೆ ಅಗತ್ಯ ಮಾರ್ಗದರ್ಶನ ಮತ್ತು ಎಡಬ್ಲ್ಯು ಎಸ್ ಆಕ್ಟಿವೇಟ್ ಹಾಗೂ ಮೈಕ್ರೋಸಾಫ್ಟ್ ಜತೆಗಿನ ಒಡಂಬಡಿಕೆಗಳಿಂದ ಕ್ಲೌಡ್ ಆಧಾರಿತ ಸೇವೆಗಳ ಬೆಂಬಲ ಸುಗಮವಾಗಿ ದೊರೆಯಲಿವೆ ಎಂದು ಅವರು ವಿವರಿಸಿದರು. ಬೂಸ್ಟರ್ ಕಿಟ್ ಉಪಕ್ರಮದಿಂದಾಗಿ ನವೋದ್ಯಮಗಳಿಗೆ ಅತ್ಯಾಧುನಿಕ ಕಚೇರಿ ಮೂಲಸೌಲಭ್ಯ, ಪ್ರಯೋಗಾಲಯ, ಪರಿಣತರ ಅನುಭವಗಳು, ಅಗತ್ಯ ನಿಧಿ ಕೂಡ ಲಭ್ಯವಾಗಲಿವೆ. ರಾಜ್ಯದ ಆರ್ಥಿಕತೆಯ ಬೆಳವಣಿಗೆಯಲ್ಲಿ ನವೋದ್ಯಮಗಳು ನಿರ್ಣಾಯಕ ಪಾತ್ರ ವಹಿಸಬೇಕಾಗಿದ್ದು, ಡಿಜಿಟಲ್ ಅರ್ಥವ್ಯವಸ್ಥೆಗೆ ಇನ್ನೂ ಹೆಚ್ಚಿನ ಕೊಡುಗೆ ನೀಡಬೇಕಾದ ಅಗತ್ಯವಿದೆ ಎಂದು ಸಚಿವರು ನುಡಿದರು.

ಕಂಡಲ್ಲಿ ಕಸ ಹಾಕುವ ಹೇಸಿಗೆ ಜನರು!



ಮೈಸೂರು, ನ.18(ಜಿಎ)– 'ನಾಯಿ ಬಾಲ ಡೊಂಕು' ಎಂಬಂತೆ ಸ್ವಚ್ಛತೆ ಕುರಿತು ಎಷ್ಟೇ ಜಾಗೃತಿ ಮೂಡಿಸಿದರು ಅವಿವೇಕಿಗಳಂತೆ ವರ್ತಿಸುತ್ತಿರುವ ಸೋಗಲಾಡಿ ಜನರಿಂದ ಮೈಸೂರಿನಲ್ಲಿ ಅಶುಚಿತ್ವ ತಾಂಡವವಾಡುತ್ತಿದೆ. ಇದಕ್ಕೆ ಮೈಸೂರಿನ ಮಂಜುನಾಥಪುರದ ಬಳಿಯ ಗುರುದ್ವಾರ ಹಿಂಬದಿ ರಸ್ತೆಯೇ ಸಾಕ್ಷಿ. ಸಂಪೂರ್ಣ ಹಾಳಾಗಿದ್ದ ಈ ರಸ್ತೆಗೆ ಇತ್ತೀಚೆಗಷ್ಟೇ ಡಾಂಬರ್ ಹಾಕಲಾಗಿದೆ. ಈ ರಸ್ತೆ ಬದಿ ಮೊದಲು ಹೇಸಿಗೆ ಮನಸ್ಥಿತಿಯ ಜನರು ಕಸ ಸುರಿಯುತ್ತಿದ್ದರು. ಈಗ ರಸ್ತೆ ಡಾಂಬರೀಕರಣವಾಗಿದ್ದು, ಸ್ವಚ್ಛವಾಗಿ ಕಂಗೊಳಿಸುತ್ತಿದೆ. ಈಗಲೂ ತಮ್ಮ ಹಳೇ ಚಾಳಿ ಮುಂದುವರೆಸಿರುವ ಹೀನ ಜನ, ವಾಹನ ಸಂಚಾರವಿಲ್ಲದಿದ್ದಾಗ ಕಸ ಸುರಿದು ಹೋಗುತ್ತಿದ್ದಾರೆ. ನಿತ್ಯ ನೂರಾರು ಮಂದಿ ಪೌರಕಾರ್ಮಿಕರು ಶಕ್ತಿ ಮೀರಿ ಕಸ ವಿಲೇವಾರಿ ಮಾಡುತ್ತಿದ್ದರೂ ಕೆಲ ಬುದ್ಧಿಗೇಡಿಗಳಿಂದ ಕಸಕ್ಕೆ ಮುಕ್ತಿ ಇಲ್ಲದಂತಾಗಿದೆ. ರಸ್ತೆಯ ಎರಡು ಬದಿಯಲ್ಲಿ ವರ್ಷಗಳಿಂದಲೂ ಬಿದ್ದಿರುವ ಬೃಹತ್ ಸಿಮೆಂಟ್ ಪೈಪ್‌ಗಳ ನಡುವೆ ಆಳೆತ್ತರ ಗಿಡ–ಗಂಟಿಗಳು ಬೆಳೆದು ನಿಂತಿದ್ದು, ಇದರ ನಡುವೆಯೇ ಕಸದ ರಾಶಿ ಬಿದ್ದಿದೆ. ಈ ರಸ್ತೆ ಬದಿಗೆ ಚೀಲಗಟ್ಟಲೇ ಕಸ ತಂದು ನಿತ್ಯವೂ ಹಾಕಲಾಗುತ್ತಿದೆ.

ಚೆಲ್ಲಾಪಿಲ್ಲಿ: ಪ್ಲಾಸ್ಟಿಕ್ ಚೀಲಗಳಿಂದ ಹಸಿ ಕಸ–ಒಣ ಕಸವನ್ನು ತುಂಬಿಕೊಂಡು ಬಿಸಾಡುವುದರಿಂದ ಆಹಾರ ಹುಡುಕುತ್ತಾ ಕಸದ ಪ್ಲಾಸ್ಟಿಕ್ ಚೀಲಗಳಿಗೆ ಬಾಯಿಹಾಕುವ ಬೀದಿನಾಯಿಗಳು ರಸ್ತೆಯಲ್ಲೆಲ್ಲಾ ಕಸವನ್ನು ಹರಡುತ್ತಿವೆ. ಹಾಗಾಗಿ ರಸ್ತೆ ಸಂಪೂರ್ಣವಾಗಿ ಕಸಮಯವಾಗಿದ್ದು, ಮೂಗು ಮುಚ್ಚಿಕೊಂಡರೂ ತಿರುಗಾಡಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದುರ್ವಾಸನೆ, ಸೊಳ್ಳೆಗಳ ಕಾಟಕ್ಕೆ ಸುತ್ತಮುತ್ತಲ ಹಿರಿಯ ನಾಗರಿಕರು, ಮಹಿಳೆಯರು, ಮಕ್ಕಳು ಈ ರಸ್ತೆಯಲ್ಲಿ ತಿರುಗಾಡುವುದನ್ನೇ ಬಿಟ್ಟಿದ್ದಾರೆ. ಇಷ್ಟರ ಮೇಲೂ ಪಾಲಿಕೆ ಅಧಿಕಾರಿಗಳು ಇತ್ತ ಗಮನಹರಿಸಿ ಸೂಕ್ತಕ್ರಮ ತೆಗೆದುಕೊಳ್ಳದಿದ್ದರೆ, ದಂಡ ವಿಧಿಸದಿದ್ದಲ್ಲಿ ಸಂಚರಿಸುವವರು ನರಕಯಾತನೆ ಪಡಬೇಕಿದೆ.

ನಾಳೆ ವಿದ್ಯುತ್ ನಿಲುಗಡೆ

ಮೈಸೂರು, ನ.18– ತುರ್ತು ನಿರ್ವಹಣಾ ಕೆಲಸದ ನಿಮಿತ್ತ ನವೆಂಬರ್ 20ರ ಭಾನುವಾರದಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಹೆಬ್ಬಾಳ್ 1 ಮತ್ತು 2ನೇ ಹಂತ, ಎಂ.ಜಿ.ಕೊಪ್ಪಲು, ಅಭಿಷೇಕ್ ಸರ್ಕಲ್, ಮಾದೇಗೌಡ ವೃತ್ತ, ಮಯೂರ ವೃತ್ತ, ಸಂಕ್ರಾಂತಿ ವೃತ್ತ, ಕಾವೇರಿ ವೃತ್ತ, ಕಿತ್ತೂರುರಾಣಿ ಚೆನ್ನಮ್ಮ ವೃತ್ತ, ಲಕ್ಷ್ಮೀಕಾಂತನಗರ, ಜಯಮ್ಮ ವೃತ್ತ, ಕುಂಬಾರಕೊಪ್ಪಲು, ಸೂರ್ಯ ಬೇಕರಿ ವೃತ್ತ, ವಿಜಯನಗರ ರೈಲ್ವೇ ಲೇಔಟ್, ಕೆಂಡಗಣ್ಣಮ್ಮ ಬಡಾವಣೆ, ಸುಭಾಷ್‌ನಗರ, ಮೇಟಗಳ್ಳಿ ವ್ಯಾಪ್ತಿ, ಬಿ.ಎಂ.ಶ್ರೀನಗರ, ಕರಕುಶಲನಗರ, ಮಥುರನಗರ, ಜಿ.ಆರ್.ಎಸ್ ಫ್ಯಾಂಟಸಿ ಪಾರ್ಕ್, ಬೆಳಗೊಳ ಕೈಗಾರಿಕಾ ಪ್ರದೇಶ, ಮೇಟಗಳ್ಳಿ ಕೈಗಾರಿಕಾ ಪ್ರದೇಶ, ಲೋಕನಾಯಕನಗರ, ಭೈರವೇಶ್ವರನಗರ, ಚಾಮುಂಡೇಶ್ವರಿ ರೈಲ್ವೇ ಲೇಔಟ್, ಕೆ.ಆರ್.ಎಸ್‌ರಸ್ತೆ, ವಾಣಿವಿಲಾಸ ಬಡಾವಣೆ ವ್ಯಾಪ್ತಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಇಂದು ಗಿರಿಜನ ಉತ್ಸವ–2022

ಮೈಸೂರು, ನ.18– ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಗಿರಿಜನ ಉಪಯೋಜನೆಯಡಿ ಗಿರಿಜನ ಉತ್ಸವ–2022 ಹೆಚ್.ಡಿ.ಕೋಟೆ ತಾಲೂಕಿನ ಭೀಮನಕೊಲ್ಲಿ–ಕೆಂಚಹಳ್ಳಿ ಗ್ರಾಮದಲ್ಲಿ ನವಂಬರ್ 19 ಶನಿವಾರ ಮಧ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಉಸ್ತುವಾರಿ ಹಾಗೂ ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ನೆರವೇರಿಸಿದರೆ, ಕಂದಾಯ ಸಚಿವರಾದ ಆರ್.ಅಶೋಕ್ ಉಪಸ್ಥಿತರಿರುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೆಚ್.ಡಿ.ಕೋಟೆ ಶಾಸಕ ಸಿ.ಅನಿಲ್ ಕುಮಾರ್ ವಹಿಸುವರು. ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರು, ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು, ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಎಂ.ಡಿ.ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮದ್ದು–ಗುಂಡುಗಳ ವಾರ್ಷಿಕ ತರಬೇತಿ ಕಾರ್ಯಾಗಾರ

ನ.19, 21ರಂದು ಜನಸಂಚಾರ ನಿಷೇಧ

ಮೈಸೂರು, ನ.18(ಆರ್‌ಕೆಬಿ)– ರೈಲ್ವೆ ರಕ್ಷಣಾದಳ ಮೈಸೂರು ವಿಭಾಗದ ಅಧಿಕಾರಿ, ಸಿಬ್ಬಂದಿ ವರ್ಗ, ಮಂಡ್ಯ ಜಿಲ್ಲೆಯ ದೊಡ್ಡಬ್ಯಾಡರಹಳ್ಳಿಯಲ್ಲಿ ನ.19 ಮತ್ತು 21ರಂದು 2ನೇ ಹಾಗೂ ಕೊನೆಯ ಹಂತದ ಮದ್ದುಗುಂಡುಗಳ ವಾರ್ಷಿಕ ತರಬೇತಿ ಕಾರ್ಯಾಗಾರ ಆಯೋಜಿಸಿದ್ದು, ಈ ವ್ಯಾಪ್ತಿಯಲ್ಲಿ ಸಾಕು ಪ್ರಾಣಿ ಹಾಗೂ ಜನಸಂಚಾರವನ್ನು ನಿಷೇಧಿಸಲಾಗಿದೆ. ಸಾರ್ವಜನಿಕರು ಸಹಕರಿಸುವಂತೆ ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಸಿಸಿ ಸ್ಟಾಲ್ ಪ್ರದರ್ಶನ

ಮೈಸೂರು, ನ.18–2022ರ ನವೆಂಬರ್ 18 ರಂದು ಮೈಸೂರಿನ ಆಲ್ ಇಂಡಿಯಾ ರೇಡಿಯೋ ಆವರಣದಲ್ಲಿ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾರ್ವಜನಿಕರ ಅನುಕೂಲಕ್ಕಾಗಿ ಎನ್‌ಸಿಸಿ ಸಂಸ್ಥೆಯು ನಡೆಸುವ ಪ್ರಮುಖ ಚಟುವಟಿಕೆಗಳನ್ನು ಬಿಂಬಿಸುವ ವಿಶೇಷವಾದ ಎನ್‌ಸಿಸಿ ಸ್ಟಾಲ್ ಅನ್ನು ಪ್ರದರ್ಶಿಸಲಾಯಿತು.

ಸ್ಟಾಲ್‌ನ ಕೆಲವು ಮುಖ್ಯಾಂಶಗಳು: ಫೈರಿಂಗ್, ಡ್ರಿಲ್, ಸಮಾಜ ಸೇವೆ ಮತ್ತು ಇತರ ರಾಷ್ಟ್ರೀಯ ಕಾರ್ಯಕ್ರಮಗಳಂತಹ ಎನ್‌ಸಿಸಿ ನಡೆಸುವ ವಿವಿಧ ತರಬೇತಿ ಚಟುವಟಿಕೆಗಳನ್ನು ಪ್ರದರ್ಶಿಸುವ ಮಾಹಿತಿ ಫಲಕ. ರಕ್ಷಣಾ ಪಡೆಗಳಲ್ಲಿ ಎನ್‌ಸಿಸಿ ಕೆಡೆಟ್‌ಗಳಿಗೆ ಅವಕಾಶಗಳನ್ನು ತೋರಿಸುವ ಮಾಹಿತಿ ಫಲಕ. ತರಬೇತಿ ನೀಡಲು ಬಳಸಲಾಗುವ ವಿವಿಧ ಫೈರಿಂಗ್ ವೆಪನ್ ಉಪಕರಣಗಳು, ಎನ್‌ಸಿಸಿ ಕೆಡೆಟ್‌ಗಳು ತರಬೇತಿ ನೀಡಲು ಬಳಸುವ ವಿಮಾನಗಳು ಮತ್ತು ಹಡಗುಗಳ ಮಾದರಿಗಳ ಪ್ರದರ್ಶನ, ಎನ್‌ಸಿಸಿ ಕೆಡೆಟ್‌ಗಳಿಗೆ, ಈ ಉಪಕ್ರಮವು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಎನ್‌ಸಿಸಿಗೆ ಸೇರುವ ಪ್ರಾಮುಖ್ಯತೆಯ ಬಗ್ಗೆ ಆಸಕ್ತಿಯನ್ನು ಹುಟ್ಟುಹಾಕುತ್ತದೆ. ಇದು ಯುವಜನರು ರಾಷ್ಟ್ರ ನಿರ್ಮಾಣದಲ್ಲಿ ಭಾಗವಹಿಸಲು ಮೆಟ್ಟಿಲಾಗಿ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದೆ.

ನ.22ರಿಂದ ಪುಸ್ತಕ ಪ್ರದರ್ಶನ

ಮೈಸೂರು, ನ.18– 2020ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಏಕಗವಾಕ್ಷಿ ಯೋಜನೆಯಡಿ ಮತ್ತು 2022ರಲ್ಲಿ ಪ್ರಥಮ ಮುದ್ರಣಗೊಂಡ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿಯಲ್ಲಿ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳನ್ನು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಮುಂದೆ ಆಯ್ಕೆಗಾಗಿ ಮಂಡಿಸಲಾಗಿತ್ತು. ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಯಾದ ಹಾಗೂ ಆಯ್ಕೆಯಾಗದ ಕನ್ನಡ ಪುಸ್ತಕಗಳ ಪ್ರದರ್ಶನವನ್ನು ನ.22ರಿಂದ 24ರವರೆಗೆ 'ಗ್ರಂಥಾಂಗಣ' ಬೆಂಗಳೂರಿನ ಹಂಪಿನಗರದ ಪಶ್ಚಿಮ ವಲಯದಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ ಏರ್ಪಡಿಸಲಾಗಿದೆ.

ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು, ವಿತರಕರು ಮತ್ತು ಪುಸ್ತಕ ಮಾರಾಟಗಾರರು ಆಕ್ಷೇಪಣೆಗಳಿದ್ದಲ್ಲಿ ನ.30ರೊಳಗಾಗಿ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇಲ್ಲಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸಬಹುದಾಗಿದೆ.

ನಾಳೆ ಕನ್ನಡ ಸ್ವರಗಾನಾಮೃತ

ಮೈಸೂರು,ನ.18(ಆರ್‌ಕೆಬಿ)–ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಮೆಲೋಡಿ ಸಿಂಗರ್ಸ್ ಗ್ರೂಪ್ ವತಿಯಿಂದ ನ.20ರಂದು ಸಂಜೆ 4 ಗಂಟೆಗೆ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ 'ಕನ್ನಡ ಸ್ವರಗಾನಾಮೃತ' ಕನ್ನಡ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ. ಗ್ರೂಪ್‌ನ ಮುಖ್ಯಸ್ಥ ಮೋಹನ್‌ಕುಮಾರ್ ಅವರು ಶುಕ್ರವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮಕ್ಕೆ ಉಪಮೇಯರ್ ಡಾ.ಜಿ. ರೂಪ, ರಾಮಕೃಷ್ಣಾಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ, ವಿಶ್ರಾಂತ ಪ್ರಾಂಶುಪಾಲ ಪ್ರೊ.ಕೃಷ್ಣೇಗೌಡ, ಸಯ್ಯದ್ ಇಸಾಕ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಭಾಸ್ಕರ್‌ರಾವ್, ಕೆ.ಜೆ.ಶೇಖರ್, ಶಿವಣ್ಣ ಉಪಸ್ಥಿತರಿದ್ದರು.

'ಪಾಲಿಕೆ ಅದಾಲತ್': ಒಟ್ಟು 202 ಅರ್ಜಿ ಸ್ವೀಕಾರ

ಮೈಸೂರು, ನ.18(ಆರ್‌ಕೆಬಿ)– ಮೈಸೂರು ನಗರಪಾಲಿಕೆ ಆವರಣದಲ್ಲಿ ಆಯೋಜಿಸಿರುವ 'ಪಾಲಿಕೆ ಅದಾಲತ್'ನಲ್ಲಿ ಶುಕ್ರವಾರ 44 ಅರ್ಜಿಗಳು ಸ್ವೀಕೃತಗೊಂಡಿದ್ದು, ಕಳೆದ ಐದು ದಿನಗಳ ಅವಧಿಯಲ್ಲಿ ಒಟ್ಟು 202 ಅರ್ಜಿಗಳು ಸ್ವೀಕೃತಗೊಂಡಿವೆ. ಶುಕ್ರವಾರ ಕಂದಾಯ ಶಾಖೆಯಲ್ಲಿ 13, ನಗರ ಯೋಜನಾ ಶಾಖೆಯಲ್ಲಿ 6, ಆಶ್ರಯ ಶಾಖೆಯಲ್ಲಿ 8, ಅಭಿವೃದ್ಧಿ ಮತ್ತು ತಾಂತ್ರಿಕ ಶಾಖೆಯಲ್ಲಿ 7, ಒಳಚರಂಡಿ ವಿಭಾಗ ಮತ್ತು ವಾಣಿವಿಲಾಸ ನೀರು ಸರಬರಾಜು, ಬಡತನ ನಿರ್ಮೂಲನಾ ಶಾಖೆಗಳಲ್ಲಿ ತಲಾ 4, ಲೆಕ್ಕಪತ್ರ ಮತ್ತು ಆಡಳಿತ ಶಾಖೆಯಲ್ಲಿ 2 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಋಷಿ ಮನೀಷಿಗಳು, ಲೇಖನ ದಾ. ಶ್ರೀ ರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಶಂಕರ್ ಶ್ಯಾನುಭೋಗ್, 9.00 ಕನ್ನಡ ಕಜ್ಞಾಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಬನ್ನೂರು ಕೆಂಪಮ್ಮ ಮತ್ತು ತಂಡ, 1.20 ಭಾವಗೀತೆ–ವೃಂದಗಾನ, 3.30 ಮಕ್ಕಳ ಮಂಟಪ–ಮುಖಾಮುಖಿ, ಇಂಗ್ಲೀಷ್ ಭಾಷಾ ಕಲಿಕೆ ಕುರಿತು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಲಿರುವವರು ಸದಾನಂದ ಆರ್., 4.00 ನಾಟಕ, 4.30 ನೆನಪಿನಂಗಳ, ಪ್ರಸ್ತುತಿ– ಎಸ್.ಲಕ್ಷ್ಮೀನಾರಾಯಣ, 6.50 ಕೃಷಿರಂಗ "ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.15 ಶಿಕ್ಷಣದಲ್ಲಿ ಕನ್ನಡ–ಸಿ.ಎಸ್. ಶಿವಸ್ವಾಮಿ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ವಿದ್ಯಾಸಾಗರ್ ಪ್ರಸಾದ್ ವಿಶ್ರ–ಗಾಯನ, ಪಂಡಿ ನಕುಲ್ ಮಿಶ್ರ–ತಬಲ ಸೋಲೋ, 10.30 ಸವಿನೆನಪು

ಇಂದಿನ ಪಂಚಾಂಗ

19.11.2022 ಶನಿವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ : ಉಫ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಮತ್ತು ತಲೆನೋವಿನ ಬಗ್ಗೆ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರೋಟರಿ ಮೈಸೂರು ಮಿಡ್‌ಟೌನ್ :** ಬಾಂಧವ್ಯ–2022, ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ರೋ. ಹೆಚ್.ಆರ್. ಕೇಶವ್, ಅಂತಾರಾಷ್ಟ್ರೀಯ ಪ್ಯಾರಾ ಪಟು ಆರ್.ಟಿ. ಪ್ರಸನ್ನಕುಮಾರ್, ಉಪ ಪೊಲೀಸ್ ಅಧೀಕ್ಷಕ ಎಸ್.ಎನ್. ಸಂದೇಶ್‌ಕುಮಾರ್, ಸ್ಥಳ: ಓವಲ್ ಮೈದಾನ, ಮೈಸೂರು ವಿಶ್ವವಿದ್ಯಾನಿಲಯ, ಬೆಳಗ್ಗೆ 9ಕ್ಕೆ.

■ **ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ (ಇಂಡಿಯಾ), ಮೈಸೂರು ಚಾಪ್ಟರ್, ಎಸ್‌ಕೆ ಸೂಪರ್ ಟಿಎಂಟಿ ಸ್ಟೀಲ್, ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು:** ಕ್ಯಾಟಲಿಸ್ಟ್–2022 ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕ್ವಿಜ್ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಎಸ್‌ಕೆ ಸೂಪರ್ ಟಿಎಂಟಿ ಸ್ಟೀಲ್ ಜನರಲ್ ಮ್ಯಾನೇಜರ್ ಎ.ಎಸ್. ಉಪಾಧ್ಯಾಯ, ಗೌರವ ಅತಿಥಿಗಳು: ಪಿ.ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಕಾಲೇಜು ಪ್ರಿನ್ಸಿಪಾಲ್ ಡಾ.ಬಿ.ಸದಾಶಿವೇಗೌಡ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಕೆಂಪೇಗೌಡ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಕಾಲೇಜು ಆವರಣ, ಬೆಳಗ್ಗೆ 9.15ಕ್ಕೆ.

■ **ಡಾ. ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗ, ಪ್ರಣವ್ ಪಿಕ್ಚರ್ಸ್ :** 2ನೇ ವರ್ಷದ ಮೈಸೂರು ಅಂತರಾಷ್ಟ್ರೀಯ ಚಲನಚಿತ್ರೋತ್ಸವ, ಮುಖ್ಯ ಅತಿಥಿಗಳು: ಚಲನಚಿತ್ರ ನಟ ಮಂಡ್ಯ ರಮೇಶ್, ನಿರ್ದೇಶಕರಾದ ಪ್ರವೀಣ್ ಕೃಪಾಕರ್, ನಾಗೇಂದ್ರ ಅರಸ್, ಟ್ರಾಫಿಕ್ ವಾರ್ಡನ್ ಆರ್ಗನೈಸೇಷನ್‌ನ ಮಾಲಿನಿ ಪಾಲಾಕ್ಷ, ಸ್ಥಳ: ರಮಾ ಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಬೆಳಗ್ಗೆ 9.30ಕ್ಕೆ

■ **ಲೇಖಿಕಾ ಸಾಹಿತ್ಯ ವೇದಿಕೆ:** ಕನ್ನಡ ಕಾವ್ಯೋತ್ಸವ–ಸಾವಿತ್ರಮ್ಮ ಅಪ್ಪಯ್ಯ ಹಿರಿಯ ಸಾಧಕಿ ಪ್ರಶಸ್ತಿ ಪ್ರದಾನ, ಸಾಹಿತ್ಯ ಸಖಿ ಕವನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಉದ್ಘಾಟನೆ: ಪತ್ರಕರ್ತೆ ಶೈಲಜಾ ಸುರೇಶ್, ಮುಖ್ಯ ಅತಿಥಿಗಳು: ಹಿರಿಯ ವಿದ್ವಾಂಸರಾದ ಡಾ.ವೈ.ಸಿ.ಭಾನುಮತಿ, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಪ್ರೊ. ಎಂ.ಎ. ಶ್ರೀನಿವಾಸ, ಸ್ಥಳ: ಮಹಾರಾಣಿ ಮಹಿಳಾ ಕಲಾ ಕಾಲೇಜು, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕೆ. ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು :** 67ನೇ ಕನ್ನಡ ರಾಜ್ಯೋತ್ಸವ ಆಚರಣೆ, ಉದ್ಘಾಟನೆ : ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಹ ಪ್ರಾಧ್ಯಾಪಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಸಂಘದ ಗೌರವ ಕಾರ್ಯದರ್ಶಿ ಪಿ. ವಿಶ್ವನಾಥ್, ಉಪಸ್ಥಿತರು : ಶ್ರೀಶೈಲ ರಾಮಣ್ಣವರ್, ಡಾ. ಎಂ. ಶಿವಲಿಂಗೇಗೌಡ, ಸ್ಥಳ: ಸಾಹುಕಾರ ಚನ್ನಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

* **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸ್ನೇಹ ಸಿಂಚನ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀಚಿದಾನಂದ ಸ್ವಾಮೀಜಿ, ಉದ್ಘಾಟನೆ : ಉಪಮೇಯರ್ ಡಾ. ಜಿ. ರೂಪ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಎಂ. ಶಾರದ, ಉಪಸ್ಥಿತರು : ಉಪ ಪ್ರಾಂಶುಪಾಲ ಡಾ. ಜಿ. ಪ್ರಸಾದಮೂರ್ತಿ, ಡಾ. ಎನ್.ಜಿ. ಲೋಕೇಶ್, ಸ್ಥಳ: ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಮಂಡಲ ಪೂಜಾ ಮಹೋತ್ಸವ, ಮಹಾಗಣಪತಿ ಹೋಮ, ಉಷಪೂಜೆ, ಪಂಚಗವ್ಯಂ, ಪಂಚಕಂ, ಕಳಸಪೂಜಾ, ಶಿವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ತಮಾನ ಪೂಜ, ದೀಪಾರಾಧನೆ, ಅತ್ತಾಳಪೂಜ, ಶ್ರೀ ಭೂತ ಬಲಿ ವಿಳಕ್ಕು, ಅನೇಕ ವಿಶೇಷ ಪೂಜೆಗಳು, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, ಬೆಳಗ್ಗೆ 10ರಿಂದ.

■ **ಸದ್ವಿದ್ಯಾ ಸೆಮಿ–ರೆಸಿಡೆನ್ಷಿಯಲ್ ಪದವಿಪೂರ್ವ ಕಾಲೇಜು :** ಸಾಮೋದ–2022, ಮುಖ್ಯ ಅತಿಥಿಗಳು : ರಾಯಚೂರು ವಿವಿ ಕುಲಪತಿ ಪ್ರೊ. ಹರೀಶ್ ರಾಮಸ್ವಾಮಿ, ಅಧ್ಯಕ್ಷತೆ : ಕಾವೇರಿ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಪ್ರೊ. ವಿ.ಕೆ. ಗೋಪಾಲಾಚಾರ್, ಉಪಸ್ಥಿತರು : ಟ್ರಸ್ಟ್ ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಸಾಂಸ್ಕೃತಿಕ ಕಾರ್ಯಕ್ರಮಗಳು :ಸರ್ವಂ ಶ್ರೀ ಕೃಷ್ಣಮಯಂ, ವೇಣು ನಿನಾದ, ಅಗ್ರತಾ, ಪ್ರಕೃತಿ–ಪ್ರಸ್ತುತಿ, ಚಿತ್ತ–ಚಿತ್ತಾರ, ಯೋಗ–ಸುಯೋಗ, ತಪೋಭಂಗ, ಗಾನ ಮಾಧುರ್ಯ, ಸ್ಥಳ: ಪ್ರೊ. ಅರ್ಕನಾಥ್ ರಂಗ ಮಂಟಪ, ಬೆಳಗ್ಗೆ 10 ರಿಂದ.

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವದ ಅಂಗವಾಗಿ ಏಕಾದಶ ಭೂರುದ್ರರ ವಿಶೇಷ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಕೆ.ಆರ್. ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ಭಾವನೆಗಳ ಅನಾವರಣಕ್ಕೊಂದು ವೇದಿಕೆ, ಮೈಸೂರು ಸಾಹಿತ್ಯ ದಾಸೋಹ :** ವಾರ್ಷಿಕೋತ್ಸವ ಮತ್ತು ಕನ್ನಡ ರಾಜ್ಯೋತ್ಸವ, ಉದ್ಘಾಟನೆ: ಆಕಾಶವಾಣಿ ವಿಶ್ರಾಂತ ಉಪನಿರ್ದೇಶಕರಾದ ಶ್ರೀಮತಿ ಜಿ. ರಾಜಲಕ್ಷ್ಮೀ ಶ್ರೀಧರ್, ಅಧ್ಯಕ್ಷತೆ: ಲೇಖಕ ರಂಗನಾಥ್ ಮೈಸೂರು, ಮುಖ್ಯ ಅತಿಥಿಗಳು: ಪ್ರಾಚ್ಯ ವಿದ್ಯಾ ಸಂಶೋಧನಾಲಯ ನಿರ್ದೇಶಕ ಡಾ.ಎಸ್.ಶಿವರಾಜಪ್ಪ, ಸ್ಥಳ: ಶ್ರೀ ಮರುಳಸಿದ್ದೇಶ್ವರ ಸಮುದಾಯ ಭವನ, ನ್ಯಾಯಾಲಯದ ಎದುರು, ಜಯನಗರ, ಬೆಳಗ್ಗೆ 10.30ಕ್ಕೆ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಹೃದ್ರೋಗ ವೈದ್ಯರಿಂದ ಆರೋಗ್ಯ ತಪಾಸಣೆ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10.30 ರಿಂದ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** 61ನೇ ರಾಷ್ಟ್ರೀಯ ಔಷಧ ಸಪ್ತಾಹದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಡೆಪ್ಯುಟಿ ಡ್ರಗ್ಸ್ ಕಂಟ್ರೋಲರ್ ಡಾ. ಎ. ರಾಮ್‌ಕಿಶನ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಟಿ.ಎಂ. ಪ್ರಮೋದ್ ಕುಮಾರ್, ಗೌರವ ಅತಿಥಿಗಳು:ಡಾ.ಎಂ.ಮಂಜುನಾಥ್, ಪ್ರಾಂಶುಪಾಲ ಡಾ. ಹನುಮಂತಚಾರ್ ಜೋಷಿ, ಸ್ಥಳ: ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಳಗ್ಗೆ 11 ರಿಂದ.

■ **ರಾಹುಲ್ ಶಿಕ್ಷಣ ಸಂಸ್ಥೆಗಳು, ರಮಾಬಾಯಿನಗರ, ಮಹದೇವಪುರ :** ಬೆಳಗ್ಗೆ 11ಕ್ಕೆ ರಜತ ಮಹೋತ್ಸವ, ಉದ್ಘಾಟನೆ : ಸಂಸದ ವಿ. ಶ್ರೀನಿವಾಸ ಪ್ರಸಾದ್, ಅಧ್ಯಕ್ಷತೆ : ವಕೀಲ ಓ. ಶ್ಯಾಮ್‌ಭಟ್, ಸ್ಮರಣ ಸಂಚಿಕೆ ಬಿಡುಗಡೆ: ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಡಾ. ಹೆಚ್. ನಾಗೇಶ್, ಮುಖ್ಯ ಅತಿಥಿಗಳು:ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಮಲ್ಲಿಕಾರ್ಜುನಪ್ಪ, ಮಧ್ಯಾಹ್ನ 12.15ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು, ಉದ್ಘಾಟನೆ : ಶ್ರೀ ಮಾತಾ ಅಮೃತಾನಂದಮಯಿ ಮಠದ ಶ್ರೀ ರಾಮಕೃಷ್ಣ ಸ್ವಾಮೀಜಿ, ಅಧ್ಯಕ್ಷತೆ : ಭೂಗೋಳಶಾಸ್ತ್ರ ವಿಭಾಗದ ಅಧ್ಯಕ್ಷೆ ಪ್ರೊ. ಪಿ. ಜಯಶ್ರೀರಾಮ್, ಮುಖ್ಯ ಅತಿಥಿಗಳು : ಬಿಇಒ ಶ್ರೀಮತಿ ಮಲ್ಲೇಶ್ವರಿ, ಉಪ ಪೊಲೀಸ್ ಆಯುಕ್ತೆ ಗೀತಾ ಪ್ರಸನ್ನ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಐಟಿ ಅಡಿಷನಲ್ ಕಮೀಷನರ್ ಕಿರಣ್, ಡಾ.ಎನ್.ಎಸ್. ಮೋಹನ್, ಸೋಮಶೇಖರ್, ಸ್ಥಳ: ಮಹದೇವಪುರ ಶಾಲೆ ಆವರಣ.

■ **ಗೀತಾ ಶಿಶು ಶಿಕ್ಷಣ ಸಂಘ :** ಪ್ರೊ. ಬಿ.ಎಸ್. ಪಂಡಿತ್ ಸ್ಮಾರಕ ಸಂಗೀತಗೋಷ್ಠಿ, ಹಿಂದೂಸ್ಥಾನಿ ಗಾಯಕ ಸಿದ್ಧಾರ್ಥ ಬೆಳ್ಮಣ್ಣು ಅವರಿಂದ ಹಿಂದೂಸ್ಥಾನಿ ಸಂಗೀತ, ಪಂಡಿತ್ ರವೀಂದ್ರ ಯಾವಗಲ್–ತಬಲಾ, ಪಂಡಿತ್ ವ್ಯಾಸಮೂರ್ತಿ ಕಟ್ಟಿ –ಹಾರ್ಮೋನಿಯಂ, ಸ್ಥಳ: ಎಂ. ಗೋವಿಂದರಾವ್ ಸ್ಮಾರಕ ಸಭಾಂಗಣ, ಜೆಎಸ್‌ಎಸ್‌ಎಸ್ ಮಹಿಳಾ ತಾಂತ್ರಿಕ ಮಹಾವಿದ್ಯಾಲಯ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 11 ರಿಂದ.

■ **ಮೈಸೂರು ನಗರ ಪೊಲೀಸ್ :** ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪ್ರಾದೇಶಿಕ ಆಯುಕ್ತ ಡಾ. ಜಿ.ಸಿ. ಪ್ರಕಾಶ್, ಸ್ಥಳ: ಪೊಲೀಸ್ ಕವಾಯತು ಮೈದಾನ, ನಗರ ಸಶಸ್ತ್ರ ಮೀಸಲು ಪಡೆ, ಸಂಜೆ 4ಕ್ಕೆ.

■ **ರಂಗಾಯಣ, ಕದಂಬ ರಂಗ ವೇದಿಕೆ :** ಕೃಷ್ಣಗಾರುಡಿ ರಂಗಕರ್ಮಿ ಎಲ್. ಕೃಷ್ಣಪ್ಪ–75 ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭ, ಗ್ರಂಥ ಬಿಡುಗಡೆ : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಗ್ರಂಥ ಕುರಿತು ಮಾತನಾಡುವವರು : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಸಿ.ವಿ. ಶ್ರೀಧರಮೂರ್ತಿ, ಅಧ್ಯಕ್ಷತೆ : ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಉಪಸ್ಥಿತರು : ಚಲನಚಿತ್ರ ನಟಿ ಶ್ವೇತಾ ಶ್ರೀವಾತ್ಸವ್, ರಂಗಕರ್ಮಿ ಎಲ್. ಕೃಷ್ಣಪ್ಪ, ಸ್ಥಳ: ರಂಗಾಯಣ ಬಿ.ವಿ. ಕಾರಂತ ರಂಗಚಾವಡಿ, ಸಂಜೆ 4.30ಕ್ಕೆ

■ **ಮಧುರಗಾನ ಕಲಾವೃಂದ:** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ರಸಸಂಜೆ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ರಂಗಾಂತರಂಗ, ಮೈಸೂರು:** ಡಾ.ಬೆಸಗರಹಳ್ಳಿ ರಾಮಣ್ಣರಿಗೆ ನಮಸ್ಕಾರ, ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು, ಕಥಾರಂಗ ಪ್ರಯೋಗ, ಹಾಡುಗಳು:ಡಾ. ಕೆವೈ. ನಾರಾಯಣಸ್ವಾಮಿ, ರಂಗವಿನ್ಯಾಸ ಹೆಚ್.ಕೆ ದ್ವಾರಕನಾಥ್, ನಿರ್ದೇಶನ: ಸಿ.ಬಸವಲಿಂಗಯ್ಯ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ

■ **ಶ್ರೀ ಉತ್ತರಾದಿ ಮಠ :** ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ಯ ಜೋಷಿ ಅವರಿಂದ ಭಗವದ್ಗೀತೆ ಅಧ್ಯಾಯ–1 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30 ರಿಂದ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಹೈದರಾಬಾದ್‌ನಲ್ಲಿ ವಿಷಾನಿಲ ಸೋರಿಕೆ: 25ಕ್ಕೂ ಹೆಚ್ಚು ಮಂದಿ ಅಸ್ವಸ್ಥ

ಎನ್‌ಡಿಆರ್‌ಎಫ್‌ನಿಂದ ಕಾರ್ಯಾಚರಣೆ

ಹೈದರಾಬಾದ್, ನ.18– ನೆರೆಯ ತೆಲಂಗಾಣದಲ್ಲಿ ಮತ್ತೊಂದು ವಿಷಾನಿಲ ಸೋರಿಕೆ ಪ್ರಕರಣ ವರದಿಯಾಗಿದ್ದು, ಘಟನೆಯಲ್ಲಿ 25ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ ಎಂದು ತಿಳಿದುಬಂದಿದೆ.



ಹೈದರಾಬಾದ್ ನಗರದ ಪಶ್ಚಿಮ ಮಾರೇಡಪಲ್ಲಿಯಲ್ಲಿರುವ ಕಸ್ತೂರಿ ಬಾ ಸರ್ಕಾರಿ ಕಾಲೇಜಿನಲ್ಲಿ ವಿಷಕಾರಿ ಅನಿಲ ಸೋರಿಕೆಯಾಗಿದ್ದು, ಸುಮಾರು ಹತ್ತು ವಿದ್ಯಾರ್ಥಿಗಳು ಸೇರಿದಂತೆ 25 ಮಂದಿ ತೀವ್ರ ಅಸ್ವಸ್ಥರಾಗಿದ್ದಾರೆ ಎಂದು ತಿಳಿದುಬಂದಿದೆ. ಕೂಡಲೇ ಕಾಲೇಜು ಸಿಬ್ಬಂದಿ ಅವರನ್ನು ಗಾಂಧಿ ಆಸ್ಪತ್ರೆ ಹಾಗೂ ಸ್ಥಳೀಯ ಖಾಸಗಿ ಆಸ್ಪತ್ರೆಗಳಿಗೆ ಕರೆದೊಯ್ದು ಚಿಕಿತ್ಸೆ ಕೊಡಿಸುತ್ತಿದ್ದಾರೆ. ಕಾಲೇಜಿನ ಲ್ಯಾಬ್‌ನಲ್ಲಿ ಈ ಅವಘಡ ಸಂಭವಿಸಿದೆ ಎಂದು ಹೇಳಲಾಗಿದ್ದು, ಮಾಹಿತಿ ತಿಳಿಯುತ್ತಲೇ ಅಗ್ನಿಶಾಮಕ, ಪೊಲೀಸ್ ಮತ್ತು ಎನ್‌ಡಿಆರ್‌ಎಫ್ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಕಾರ್ಯಾಚರಣೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಮೇಲ್ನೋಟಕ್ಕೆ ಕಸ್ತೂರಿ ಬಾ ಸರ್ಕಾರಿ ಕಾಲೇಜಿನ ಲ್ಯಾಬ್‌ನಿಂದಲೇ ರಾಸಾಯನಿಕ ಅನಿಲ ಸೋರಿಕೆಯಾಗಿದೆ ಎಂದು ಹೇಳಲಾಗಿದ್ದು, ಅನಿಲ ಸೋರಿಕೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ಆರಂಭಿಸಿದ್ದಾರೆ. ಯಾವ ಅನಿಲ ಸೋರಿಕೆಯಾಗಿದೆ ಎಂಬುದನ್ನು ಪರಿಶೀಲಿಸಲು ವಿಧಿವಿಜ್ಞಾನ ತಂಡಗಳು ಸ್ಥಳಕ್ಕೆ ಧಾವಿಸಿವೆ.

ವಿದೇಶಿ ನಿಯೋಗದಿಂದ ಮೈಸೂರು ನಗರ ಆಡಳಿತ ನಿರ್ವಹಣೆ ಅಧ್ಯಯನ

ಉತ್ತರ ಅಮೆರಿಕ, ಏಷಿಯಾ, ಆಫ್ರಿಕನ್ ರಾಷ್ಟ್ರಗಳ 22 ಪ್ರತಿನಿಧಿಗಳಿಂದ ಅಧ್ಯಯನ ಪ್ರವಾಸ

ಮೈಸೂರು, ನ.18(ಆರ್‌ಕೆ)–ಉತ್ತರ ಅಮೆರಿಕ, ಏಷಿಯನ್ ಮತ್ತು ಆಫ್ರಿಕಾ ರಾಷ್ಟ್ರಗಳ 22 ಮಂದಿ ಪ್ರತಿನಿಧಿಗಳು ಇಂದು ಮೈಸೂರು ನಗರ ಪಾಲಿಕೆ ಕಚೇರಿಗೆ ಭೇಟಿ ನೀಡಿ, ಇಲ್ಲಿನ ಆಡಳಿತ ಹಾಗೂ ನಗರ ನಿರ್ವಹಣೆ ಕುರಿತಂತೆ ಅಧ್ಯಯನ ನಡೆಸಿದರು.



ಹೈದರಾಬಾದ್‌ನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಷ್ಟ್ರೀಯ ಸಂಸ್ಥೆ (National Institute of Rural Development and Panchayat Raj) ಹಾಗೂ ಸೆಂಟರ್ ಫಾರ್ ಗುಡ್ ಗವರ್ನೆನ್ಸ್ ಅಂಡ್ ಪಾಲಿಸಿ ಅನಾಲಿಸಿಸ್ (CGGPA) ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ತರಬೇತಿ ಕಾರ್ಯಕ್ರಮದ ಅಂಗವಾಗಿ ಮೈಸೂರಿಗೆ ಆಗಮಿಸಿರುವ ವಿದೇಶೀ ಪ್ರತಿನಿಧಿಗಳ ನಿಯೋಗದ 22 ಮಂದಿ ಸದಸ್ಯರನ್ನು ಉಪ ಮೇಯರ್ ಡಾ. ಜಿ.ರೂಪಾ ಅವರು ಮೈಸೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು.

ವಿದೇಶಗಳ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಪಾಲಿಕೆ ಕಚೇರಿಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಮೈಸೂರು ನಗರದ ನಿರ್ವಹಣೆಗೆ ಅನುಸರಿಸುತ್ತಿರುವ ವಿಧಾನ, ಕಾರ್ಯವೈಖರಿ ಬಗ್ಗೆ ಪರಿಸರ ಇಂಜಿನಿಯರ್ ಮೈತ್ರಿ ಅವರು ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ವಿವರಿಸಿದರು.

ಜಾಂಬಿಯಾ ದೇಶದ ಗ್ರಾಮೀಣಾಭಿವೃದ್ಧಿ ಇಲಾಖೆಯ ಫಾನುಯೆಲ್ ಚಾವ ಅವರ ನೇತೃತ್ವದ ತಂಡದಲ್ಲಿ ಅರ್ಜೆಂಟೈನ, ಕ್ಯೂಬಾ, ಕೀನ್ಯಾ, ಉಗಾಂಡ, ಮಾಲ್ಡೀವ್ಸ್, ಶ್ರೀಲಂಕಾ, ಮೊಜಾಂಬಿಕ್, ಸೌತ್ ಸೂಡನ್, ತಜಕಿಸ್ತಾನ್, ಮಾಲವಿ, ಘಾನ, ಎಥಿಯೋಪಿಯ, ಬಾಂಗ್ಲಾದೇಶ, ನೈಜೀರಿಯಾ ರಾಷ್ಟ್ರಗಳ ಪ್ರತಿನಿಧಿಗಳು ಅಧ್ಯಯನ ಪ್ರವಾಸದಲ್ಲಿದ್ದಾರೆ.

ಮೈಸೂರು ನಗರ ಪಾಲಿಕೆಯು ನಗರದ ಸ್ವಚ್ಛತೆ, ಘನ ತ್ಯಾಜ್ಯ ನಿರ್ವಹಣೆ, ಮನೆ–ಮನೆಯಿಂದ ಕಸ ಸಂಗ್ರಹ ವಿಧಾನ, ಕಸ ವಿಂಗಡಣೆ, ವಿಲೇವಾರಿ, ಮರು ಬಳಕೆ, ಕಟ್ಟಡ ತ್ಯಾಜ್ಯ ವಿಲೇವಾರಿ, ಕಸ ಗುಡಿಸುವ ಯಂತ್ರದ ಕಾರ್ಯಾಚರಣೆ, ಬಯೋ ಮತ್ತು ಮೆಡಿಕಲ್ ವೇಸ್ಟ್, ಇ–ವೇಸ್ಟ್ ವಿಲೇವಾರಿ, ಶೂನ್ಯ ತ್ಯಾಜ್ಯ ನಿರ್ವಹಣೆ ಘಟಕದ ಕಾರ್ಯವೈಖರಿ, ಮೈಸೂರಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತಂತೆ ಮೈತ್ರಿ ಅವರು ವಿವರಣೆ ನೀಡಿದರು.

ಮೈಸೂರಲ್ಲಿ ಪೌರಕಾರ್ಮಿಕರಿಗಾಗಿ ವಿಶ್ರಾಂತಿ ಗೃಹ, ಶೌಚಾಲಯ ನಿರ್ಮಾಣ, ಕಲ್ಯಾಣ ಕಾರ್ಯಕ್ರಮಗಳು, ಇಲ್ಲಿನ ರಸ್ತೆ, ಮಳೆ ನೀರು ಚರಂಡಿ, ಒಳ ಚರಂಡಿ, ಕುಡಿಯುವ ನೀರು ಪೂರೈಕೆ, ಪಾರ್ಕ್, ಶೌಚಾಲಯಗಳಂತಹ ಮೂಲ ಸೌಕರ್ಯ ಪೂರೈಸುತ್ತಿರುವ ಕುರಿತಂತೆ ಹಾಗೂ ಪಾರಂಪರಿಕ ಕಟ್ಟಡಗಳು, ಹಸಿರು ವಾತಾವರಣ ಕಾಪಾಡುವಲ್ಲಿ ಪಾಲಿಕೆ ಅನುಸರಿಸುತ್ತಿರುವ ಕ್ರಮದ ಬಗ್ಗೆಯೂ ಮಾಹಿತಿ ಒದಗಿಸಲಾಯಿತು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದ ವಿವಿಧ ಯೋಜನೆಗಳಡಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾಮಗಾರಿಗಳು, ಪ್ರಧಾನಮಂತ್ರಿ ಆವಾಸ್, ಪ್ರಧಾನಮಂತ್ರಿ ಗ್ರಾಮ್ ಸಡಾಕ್, ರಾಜೀವ್ ಗಾಂಧಿ ವಸತಿ ಯೋಜನೆಗಳ ಅನುಷ್ಠಾನ, ಸ್ವಚ್ಛ ಭಾರತ್ ಮಿಷನ್, ಪ್ರಧಾನಮಂತ್ರಿ ಉಜ್ವಲ ಯೋಜನೆಗಳ ಮೂಲಕ ನಾಗರಿಕರಿಗೆ ವಿವಿಧ ಸೌಲಭ್ಯಗಳ ವಿತರಣೆ ಕುರಿತಂತೆಯೂ ಮೈತ್ರಿ ಅವರು ವಿದೇಶೀ ಪ್ರತಿನಿಧಿಗಳಿಗೆ ವಿವರ ನೀಡಿದರು.

ಪಾಲಿಕೆ ಹೆಚ್ಚುವರಿ ಉಪ ಆಯುಕ್ತ ಸೋಮಶೇಖರ್, ಉಪ ಆಯುಕ್ತೆ (ಆಡಳಿತ) ಎಂ.ಕೆ.ಸವಿತಾ, ಕಂದಾಯ ಉಪ ಆಯುಕ್ತ ದಾಸೇಗೌಡ, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ, ಮುಖ್ಯ ಲೆಕ್ಕಾಧಿಕಾರಿ ಕವಿತಾ ಸೇರಿದಂತೆ ಹಲವರು ಈ ಸಂದರ್ಭ ಉಪಸ್ಥಿತರಿದ್ದರು.

ಮಹಾರಾಣಿ ವಾಣಿಜ್ಯ ಕಾಲೇಜಲ್ಲಿ ನಡೆದ ಉದ್ಯೋಗ ಮೇಳದಲ್ಲಿ 200ಕ್ಕೂ ಅಧಿಕ ಮಹಿಳೆಯರಿಗೆ ಉದ್ಯೋಗ ಭಾಗ್ಯ





ಮೈಸೂರು, ನ.18(ಎಂಟಿವೈ)– ಮೈಸೂರಿನ ಪಡುವಾರಹಳ್ಳಿ ಬಳಿಯ ಮಹಾರಾಣಿ ವಾಣಿಜ್ಯ ಕಾಲೇಜಿನ ಆವರಣದಲ್ಲಿ ಎಜುಕೇರ್ ಐಟಿಇಎಸ್ ಕೌಶಲ್ಯ ತರಬೇತಿ ಕೇಂದ್ರ ಮತ್ತು ವುಮೆನ್ ಕ್ಯಾನ್ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಮಹಿಳಾ ಉದ್ಯೋಗ ಮೇಳದಲ್ಲಿ 200ಕ್ಕೂ ಹೆಚ್ಚು ಮಂದಿ ಮಹಿಳೆಯರಿಗೆ ಉದ್ಯೋಗ ಭಾಗ್ಯ ಒಲಿಯಿತು.

ಮಹಿಳಾ ಸಬಲೀಕರಣದ ಹಿನ್ನೆಲೆಯಲ್ಲಿ ಶುಕ್ರವಾರ ನಡೆದ ಮಹಿಳಾ ಉದ್ಯೋಗ ಮೇಳ ಹಾಗೂ ಮಹಿಳಾ ಉದ್ಯಮಿಗಳ ಉತ್ಪನ್ನಗಳ ವಸ್ತು ಪ್ರದರ್ಶನಕ್ಕೆ ಸಂಸದ ಪ್ರತಾಪ ಸಿಂಹ ಚಾಲನೆ ನೀಡಿ, ಶುಭ ಕೋರಿದರು.

ಮೇಳದಲ್ಲಿ 90ಕ್ಕೂ ಹೆಚ್ಚು ಕಂಪನಿಗಳು ಪಾಲ್ಗೊಂಡಿದ್ದವು. 8ನೇ ತರಗತಿಯಿಂದ ವಿವಿಧ ಉನ್ನತ ಶಿಕ್ಷಣ ಪಡೆದ 18 ವರ್ಷದಿಂದ 45 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಉದ್ಯೋಗ ಅರಸಿ ಬಂದಿದ್ದರು. ಉಳಿದ ಉದ್ಯೋಗ ಆಕಾಂಕ್ಷಿಗಳಿಗೆ ಎರಡನೆ ಸುತ್ತಿನ ಸಂದರ್ಶನ ನಡೆಸಿ, ಆಯ್ಕೆ ಮಾಡುವುದಾಗಿ ಭರವಸೆ ನೀಡಲಾಯಿತು. ವಿಕಲಚೇತನ ಮಹಿಳೆಯರಿಗೆ ಉದ್ಯೋಗಕ್ಕಾಗಿ 3 ಕಂಪನಿಗಳು ಸಂದರ್ಶನ ನಡೆಸಿದವು. ಬೆಳಗ್ಗೆ 10ರಿಂದ ಮಧ್ಯಾಹ್ನದವರೆಗೂ ಮೇಳ ನಡೆಯಿತು. ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ಯುವತಿಯರು, ಮಹಿಳೆಯರು ಹೆಸರನ್ನು ನೋಂದಾಯಿಸಿ, ಮುಂದಿನ ದಿನಗಳಲ್ಲಿ ಆಯೋಜಿಸುವ ಉದ್ಯೋಗ ಮೇಳದ ಬಗ್ಗೆ ಮಾಹಿತಿ ಕೋರಿದರು.

ವಿವಿಧೆಡೆಯಿಂದ ಆಗಮಿಸಿದ್ದ ಮಹಿಳಾ ಉದ್ಯಮಿಗಳು ತಮ್ಮ ಸಂಸ್ಥೆಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ನಡೆಸುವ ಮೂಲಕ ಗಮನ ಸೆಳೆದರು. ಅಲಂಕಾರಿಕ ವಸ್ತುಗಳ ಖರೀದಿಗೆ ವಿದ್ಯಾರ್ಥಿಗಳು ಮುಗಿಬಿದ್ದರು. ಅದರಲ್ಲಿ, ಅಲಂಕಾರಿಕ ಬ್ಯಾಗ್, ಓಲೆ, ಮಣಿ ಸರ, ಉಡುಪು, ಹೊಸ ವಿನ್ಯಾಸದ ಉಡುಪು, ಸೀರೆ ಸೇರಿದಂತೆ ಇನ್ನಿತರ ವಸ್ತುಗಳ ಮಾರಾಟ ಬಿರುಸಾಗಿ ಸಾಗಿತು.

ಈ ಸಂದರ್ಭದಲ್ಲಿ ಎಜುಕೇರ್ ಐಟಿಇಎಸ್‌ನ ವ್ಯವಸ್ಥಾಪಕ ನಿರ್ದೇಶಕಿ ರಚನಾ ಮಹೇಶ್, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಆರ್–ಪ್ರೊಸೆಸ್ ಔಟ್ ಸೋರ್ಸಿಂಗ್ ಸರ್ವೀಸ್ ಪ್ರೈ.ಲಿ.ನ ಸವಿತಾ ಮಲ್ಲಪ್ಪ, ಮೇಳದ ಸ್ವಯಂಸೇವಕರಾದ ಫಿಜಾ ರಫೀಕ್, ಶೋಭಾರಮೇಶ್, ನಂದಿನಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಆರ್‌ಎಂಎನ್‌ಹೆಚ್–ಕಾರಂಜಿಕೆರೆ ಪ್ರವೇಶ ಸರಾಗ!

ಮೈಸೂರು, ನ.18(ಎಂಟಿವೈ)– ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯ (ಆರ್‌ಎಂಎನ್‌ಹೆಚ್) ಆವರಣದಿಂದ ಕಾರಂಜಿಕೆರೆಗೆ ಪ್ರವಾಸಿಗರು ಸರಾಗವಾಗಿ ಸಾಗಲು ಸಹಕಾರಿಯಾಗುವಂತೆ ಈ ಹಿಂದೆ ಇದ್ದ ಮಾರ್ಗವನ್ನು ಇಂದು ಪುನಃ ಮುಕ್ತಗೊಳಿಸಲಾಯಿತು.



ಕಾರಂಜಿಕೆರೆಗೆ ಭೇಟಿ ನೀಡುವವರಿಗೆ ಸಹಕಾರಿಯಾಗಲೆಂದು ಕಳೆದ 2–3 ದಶಕದ ಹಿಂದೆಯೇ ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತು ಸಂಗ್ರಹಾಲಯ ಆವರಣದಲ್ಲಿ ಗೇಟ್‌ವೊಂದನ್ನು ವ್ಯವಸ್ಥೆ ಮಾಡಲಾಗಿತ್ತು. ಸಿದ್ದಾರ್ಥನಗರ, ನಜರ್‌ಬಾದ್, ಟೆರಿಷಿಯನ್ ಕಾಲೇಜು ಸುತ್ತಮುತ್ತಲ ನಿವಾಸಿಗಳು ಈ ಗೇಟ್ ಮೂಲಕ ಕಾರಂಜಿಕೆರೆ ಪ್ರವೇಶಿಸಿ, ವಾಯುವಿಹಾರ ನಡೆಸುತ್ತಿದ್ದರು. ಆದರೆ, ನಾನಾ ಕಾರಣಕ್ಕೆ 15 ವರ್ಷದ ಹಿಂದೆ ವಸ್ತು ಸಂಗ್ರಹಾಲಯ ಆವರಣದಲ್ಲಿರುವ ಗೇಟ್ ಮುಚ್ಚಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಕಾರಂಜಿಕೆರೆಯ ಗೇಟ್ ತೆರೆಯುವಂತೆ ಸಾರ್ವಜನಿಕ ವಲಯದಿಂದ ಒತ್ತಡ ಬಂದ ಹಿನ್ನೆಲೆಯಲ್ಲಿ ಮ್ಯೂಸಿಯಂ ಆವರಣದ ಗೇಟ್ ಅನ್ನು ಮತ್ತೆ ತೆರೆಯಲಾಗಿದೆ.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮ್ಯೂಸಿಯಂ ಆವರಣದ ಗೇಟ್ ತೆರೆಯುವ ಮೂಲಕ ಜನ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು. ಈ ವೇಳೆ ಮಾತನಾಡಿದ ಅವರು, ವಸ್ತು ಸಂಗ್ರಹಾಲಯ ನೋಡಲು ವಿವಿಧೆಡೆಯಿಂದ ಪ್ರವಾಸಿಗರು ಹಾಗೂ ವಿದ್ಯಾರ್ಥಿಗಳು ಆಗಮಿಸುತ್ತಾರೆ. ಕಾರಂಜಿಕೆರೆ ನೋಡಲು ಆಸೆಪಟ್ಟರೂ, ಗೇಟ್ ಮುಚ್ಚಿದ್ದರಿಂದ ನಿರಾಸೆಯಿಂದ ಅಲ್ಲಿಂದಲೇ ವಾಪಸ್ಸಾಗುತ್ತಿದ್ದರು. ಈ ಹಿನ್ನೆಲೆಯಲ್ಲಿ ಇಂದು ಗೇಟ್ ತೆರೆಯಲಾಗಿದೆ ಎಂದರು.

ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ ಮಾತನಾಡಿ, ಮ್ಯೂಸಿಯಂಗೆ ಬರುವ ಪ್ರವಾಸಿಗರು ಬಳಸಿ, ಕಾರಂಜಿಕೆರೆ ವೀಕ್ಷಿಸಲು 2 ಕಿ.ಮೀ. ಸಾಗಬೇಕಾಗಿತ್ತು. ಇದರಿಂದ ಪ್ರವಾಸಿಗರಿಗೆ ತ್ರಾಸದಾಯಕ, ಅಧಿಕ ಖರ್ಚು, ಜೊತೆಗೆ ವಾಯುಮಾಲಿನ್ಯಕ್ಕೆ ಕಾರಣವಾಗಿತ್ತು. ವಿಜ್ಞಾನ ವಸ್ತು ಸಂಗ್ರಹಾಲಯಕ್ಕೆ ಹೆಚ್ಚಿನ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ಈ ಗೇಟ್ ತೆರೆದಿರುವುದು ಅನುಕೂಲವಾಗಿದೆ. ಅಲ್ಲದೆ, ಎರಡೂ ಗೇಟ್‌ನಿಂದಲೂ ಪ್ರವಾಸಿಗರು ಪ್ರವೇಶಿಸಬಹುದಾಗಿರುವುದರಿಂದ ಪಾರ್ಕಿಂಗ್ ಸಮಸ್ಯೆಯೂ ನಿವಾರಣೆಯಾಗಲಿದೆ. ಮ್ಯೂಸಿಯಂ ಸಮೀಪವೇ ಚಿಟ್ಟೆ ಪಾರ್ಕ್ ಪ್ರಗತಿಯಲ್ಲಿದ್ದು, ಕೆಲವೇ ದಿನಗಳಲ್ಲಿ ಚಿಟ್ಟೆ ಪಾರ್ಕ್ ಆಕರ್ಷಣೀಯ ಕೇಂದ್ರವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ, ವಿಜ್ಞಾನ ವಸ್ತು ಸಂಗ್ರಹಾಲಯದ ವಿಜ್ಞಾನಿಗಳಾದ ಅರ್ಜುನ್ ತಿವಾರಿ, ವಿಜಯ್, ಪ್ರಾಧಿಕಾರದ ಸದಸ್ಯರಾದ ಗೋಕುಲ್ ಗೋವರ್ಧನ್, ಜ್ಯೋತಿ ಹಾಗೂ ಇನ್ನಿತರರು ಇದ್ದರು.



ಮೈಸೂರಿನ ಮಂಡಿಮೊಹಲ್ಲಾದ ಅಕ್ಬರ್ ರಸ್ತೆಯಲ್ಲಿ ಶಾಸಕರ ವಿಶೇಷ ಎಸ್‌ಎಫ್‌ಸಿ ಅನುದಾನದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡಿರುವ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಶಾಸಕ ಎಲ್.ನಾಗೇಂದ್ರ ಪರಿಶೀಲನೆ ನಡೆಸಿದರು. ಈ ವೇಳೆ ಲೋಕೋಪಯೋಗಿ ಇಲಾಖೆ ಅಭಿಯಂತರೆ ದೀಪಿಕಾ, ಮೈಸೂರು ಮಹಾನಗರ ಪಾಲಿಕೆ ಸದಸ್ಯರಾದ ರಮಣಿ, ಎಂ.ಡಿ.ನಾಗರಾಜು, ಮುಖಂಡರುಗಳಾದ ವಿಜಿಕುಮಾರ್, ರಾಜು, ಕೆಂಪಣ್ಣ ರವಿ, ಮೈಲಾರ ಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಪುರುಷೋತ್ತಮ್, ಚಿಕ್ಕಣ್ಣ ಹಾಗೂ ಇನ್ನಿತರರಿದ್ದರು.

ಮೈಸೂರಲ್ಲಿ ವಸತಿ ಸಚಿವಾಲಯದ ಜಂಟಿ ಕಾರ್ಯದರ್ಶಿ ರೂಪಾ ಮಿಶ್ರಾರಿಂದ

ಕೇಂದ್ರ ಪುರಸ್ಕೃತ ಯೋಜನೆಗಳ ಪರಿಶೀಲನೆ

ಮೈಸೂರು, ನ.18(ಆರ್‌ಕೆ)– ಹೌಸಿಂಗ್ ಅಂಡ್ ಅರ್ಬನ್ ಅಫೇರ್ ಮಿನಿಸ್ಟ್ರಿ ಜಂಟಿ ಕಾರ್ಯದರ್ಶಿ ರೂಪಾ ಮಿಶ್ರಾ ಅವರು ಮೈಸೂರಿನ ವಿವಿಧೆಡೆ ಕೇಂದ್ರ ಸರ್ಕಾರದ ಅನುದಾನದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಇಂದು ಪರಿಶೀಲಿಸಿದರು.



ಗುರುವಾರ ರಾತ್ರಿ ಮೈಸೂರಿಗೆ ಆಗಮಿಸಿ ಮೆಟ್ರೊಪೋಲ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ಅವರು, ಇಂದು ಬೆಳಗ್ಗೆ ಯಾದವಗಿರಿಯ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ಇದ್ದ ಗಾರ್ಬೇಜ್ ವಲ್ನರ್‌ಬಲ್ ಪಾಯಿಂಟ್ (GVP) ಅಭಿವೃದ್ಧಿಪಡಿಸಿ ಸೌಂದರ್ಯೀಕರಣಗೊಳಿಸಿರುವುದನ್ನು ಪರಿಶೀಲಿಸಿದರು. ನಂತರ ವಿವಿ ಮೊಹಲ್ಲಾದ ಜಿವಿಪಿ, ಹೆಬ್ಬಾಳಿನ ಇನ್‌ಫೋಸಿಸ್ ಸಮೀಪ ಕಾರ್ಯನಿರ್ವಹಿಸುತ್ತಿರುವ ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ (STP), ಕೆಸರೆ ಬಳಿ ನಿರ್ಮಿಸುತ್ತಿರುವ ಘನ ತ್ಯಾಜ್ಯ ನಿರ್ವಹಣಾ ಘಟಕ (SWP), ವಿದ್ಯಾರಣ್ಯಪುರಂನ ಸಿವೇಜ್ ಫಾರಂಗೂ ಭೇಟಿ ನೀಡಿ ಪರಿಶೀಲಿಸಿದ ಜಂಟಿ ಕಾರ್ಯದರ್ಶಿಗಳಿಗೆ ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತರೆಡ್ಡಿ ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.

ನಂತರ ಸಂಜೆ ರೂಪಾ ಮಿಶ್ರಾ ಅವರು ಬೆಂಗಳೂರಿಗೆ ತೆರಳಿದರು. ಪಾಲಿಕೆ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ರಂಜಿತ್ ಕುಮಾರ್, ಕೆ.ಜೆ. ಸಿಂಧು, ಅಭಿವೃದ್ಧಿ ಅಧಿಕಾರಿಗಳಾದ ಮಂಜುನಾಥ, ಹೇಗಾನಂದ್, ಮಂಜುನಾಥ್, ಪರಿಸರ ಇಂಜಿನಿಯರ್‌ಗಳಾದ ನವೀನ್, ಮೃತ್ಯುಂಜಯ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ವೃದ್ಧಾಶ್ರಮದ ವೆಬ್‌ಸೈಟ್ ಬಿಡುಗಡೆ

ಮೈಸೂರು, ನ.18(ಆರ್‌ಕೆಬಿ)– ರಮೇಶ್ ಎಂಬುವವರು ನಡೆಸುತ್ತಿರುವ ಮಡಿಕೇರಿ ಸಮೀಪದ ಸುಂಟಿಕೊಪ್ಪದಲ್ಲಿರುವ ವೃದ್ಧಾಶ್ರಮ ವಿಕಾಸ್ ಜನಸೇವಾ ಟ್ರಸ್ಟ್ ವೆಬ್‌ಸೈಟ್ ಅನ್ನು ವಕೀಲ ಉಮೇಶ್ ಶುಕ್ರವಾರ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿದರು.

ಈ ವೇಳೆ ಅವರು ಮಾತನಾಡಿ, ಎಸ್– ಇಂಡಿಯಾ ಸಾಫ್ಟ್‌ವೇರ್ ಟೆಕ್ನಾಲಜೀಸ್ ಲಿಮಿಟೆಡ್ ಸಂಸ್ಥೆ ಈ ವೆಬ್‌ಸೈಟ್ ನಿರ್ಮಿಸಿದೆ. ಯಾರಾದರೂ ಈ ವೃದ್ಧಾಶ್ರಮಕ್ಕೆ ನೆರವು ನೀಡಬಯಸಿದಲ್ಲಿ ಇದರಿಂದ ಅನುಕೂಲವಾಗಲಿದೆ. ಆಸಕ್ತರು www.vikasjanaseva.info ಈ ವೆಬ್‌ಸೈಟ್ ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ರಮೇಶ್, ನಾಗೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯ ಸ್ನೇಕ್‌ಶ್ಯಾಂ, ಜಗದೀಶ್, ಮೊನಾಲಿಸಾ ಉಪಸ್ಥಿತರಿದ್ದರು.

ನಾಳೆ ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ

ಮೈಸೂರು, ನ.18(ಆರ್‌ಕೆಬಿ)– ಮೈಸೂರಿನ ಶ್ಯಾದನಹಳ್ಳಿ ಮುಖ್ಯರಸ್ತೆಯಲ್ಲಿರುವ ಶ್ರೀ ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಸಮಾರಂಭ ಮತ್ತು ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ ಕಾರ್ಯಕ್ರಮ ನ.20 ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಂ.ಕೆ.ಶ್ರೀಧರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸಂಘವನ್ನು ಉದ್ಘಾಟಿಸುವರು. ಮೇಟಗಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಹರೀಶ್‌ಬಾಬು, ಮಹಾರಾಜ ಕಾಲೇಜಿನ ನಿವೃತ್ತ ಉಪನ್ಯಾಸಕ ಟಿ.ಎನ್.ಪಂಚಾಕ್ಷರಿ, ನೈರುತ್ಯ ರೈಲ್ವೆ ನೌಕರ ಗೃಹ ನಿರ್ಮಾಣ ಸಂಘದ ಅಧ್ಯಕ್ಷ ಧರ್ಮೇಗೌಡ ಇನ್ನಿತರರು ಭಾಗವಹಿಸುವರು. ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 9.30ರಿಂದ ಆರೋಗ್ಯ ತಪಾಸಣಾ ಶಿಬಿರ, ಮಕ್ಕಳ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ ಎಂದು ಹೇಳಿದರು. ಮೂಲ ಸೌಕರ್ಯಗಳಿಂದ ವಂಚಿತವಾಗಿರುವ ಬಡಾವಣೆಯಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚುತ್ತಿದ್ದು, ಮನೆ ನಿರ್ಮಾಣದ ಸಾಮಗ್ರಿಗಳ ಕಳವು ಹೆಚ್ಚುತ್ತಿದೆ. ಈ ಬಗ್ಗೆ ಶಾಸಕರು ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಗಮನಕ್ಕೆ ತರಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಎಂ.ಶಿವಕುಮಾರ್, ಸುಬ್ರಹ್ಮಣಿ, ಪಿ.ನಿರಂಜನ, ಪರಮೇಶ್ ಉಪಸ್ಥಿತರಿದ್ದರು.

ಸ್ಕೂಟರ್ ಡಿಕ್ಕಿಯಲ್ಲಿದ್ದ 2 ಲಕ್ಷ ಕಳವು

ಮೈಸೂರು, ನ.18–ಸ್ಕೂಟರ್‌ನ ಡಿಕ್ಕಿಯಲ್ಲಿಟ್ಟಿದ್ದ 2 ಲಕ್ಷ ರೂ.ಗಳನ್ನು ಕಳವು ಮಾಡಲಾಗಿದೆ. ಈ ಘಟನೆ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿ ನಡೆದಿದೆ.

ಯರಗನಹಳ್ಳಿಯ ಪಾಪಣ್ಣ ಲೇಔಟ್ ನಿವಾಸಿ, ಗುತ್ತಿಗೆದಾರ ಸಿದ್ದಶೆಟ್ಟಿ(46) ಹಣ ಕಳೆದುಕೊಂಡವರಾಗಿದ್ದು, ಇವರ ಸ್ನೇಹಿತ ನರಸಿಂಹಮೂರ್ತಿ ಎಂಬುವರು ನೀಡಿದ್ದ 2 ಲಕ್ಷ ರೂ.ಗಳನ್ನು ಸ್ಕೂಟರ್ ಡಿಕ್ಕಿಯಲ್ಲಿಟ್ಟು, ಇವರು ನ.15ರಂದು ಮಧ್ಯಾಹ್ನ 3.15ರ ಸುಮಾರಿನಲ್ಲಿ ದೇವರಾಜ ಅರಸು ರಸ್ತೆಯ ಡಾಲ್ಫಿನ್ ಬೇಕರಿಯಲ್ಲಿ ಕೇಕ್ ಖರೀದಿಸಿ ಹಿಂದಿರುಗುವಷ್ಟರಲ್ಲಿ ಖದೀಮರು ಹಣ ಕಳವು ಮಾಡಿದ್ದಾರೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂದಾಯ ಸಚಿವರ ಜಿಲ್ಲಾ ಪ್ರವಾಸ

ಮೈಸೂರು, ನ.18– ಕಂದಾಯ ಸಚಿವ ಆರ್.ಅಶೋಕ್ ಅವರು ನವೆಂಬರ್ 18 ರಂದು ಸಂಜೆ 6.30 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕಿಗೆ ಭೇಟಿ ನೀಡಿ ವಾಸ್ತವ್ಯ ಹೂಡಿದ್ದಾರೆ. ನವೆಂಬರ್ 19 ರಂದು ಬೆಳಿಗ್ಗೆ 10.30 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕಿನ ಭೀಮನಕೊಲ್ಲಿ–ಕೆಂಚನಹಳ್ಳಿ ಗ್ರಾಮದಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮದಲ್ಲಿ ಭಾಗವಹಿಸುವುದರೊಂದಿಗೆ ಅಲ್ಲೇ ವಾಸ್ತವ್ಯ ಹೂಡುವರು ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಕ್ಸ್ ಪ್ಯಾಕ್‌ಗಾಗಿ ಅಲ್ಲ, ಆರೋಗ್ಯ ವೃದ್ಧಿಗಷ್ಟೇ ಜಿಮ್ ಮಾಡಿ

ಸಾಹಸಿ ಯುವಕರಿಗೆ ಸಂಸದ ಪ್ರತಾಪ್ ಸಿಂಹ ಕಿವಿಮಾತು





ಮೈಸೂರು, ನ.18(ಜಿಎ)–ಸಿಕ್ಸ್ ಪ್ಯಾಕ್ ತೋರಿಸಲು ಜಿಮ್ ಮಾಡಬೇಡಿ, ಆರೋಗ್ಯ ವೃದ್ಧಿಸಿಕೊಳ್ಳಲು ಜಿಮ್ ಮಾಡಿ ಎಂದು ಸಂಸದ ಪ್ರತಾಪ್ ಸಿಂಹ ಸಲಹೆ ನೀಡಿದರು.

ಮೈಸೂರು ಜಿಮ್ ಅಂಡ್ ಫಿಟ್‌ನೆಸ್ ಮಾಲೀಕರ ಸಂಘ ಹಾಗೂ ನಾರಾಯಣ ಹೃದಯಾಲಯದ ವತಿಯಿಂದ ವಿಜಯ ವಿಠಲ ವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ 'ನಮ್ಮ ಮೈಸೂರು ಫಿಟ್ ಮೈಸೂರು' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮೈಸೂರನ್ನು ನಾವು ಸಾಂಸ್ಕೃತಿಕ ನಗರಿ, ಯೋಗ ನಗರಿ ಎಂದು ಹೇಗೆ ಕರೆಯುತ್ತೇವೋ ಹಾಗೇ ಕುಸ್ತಿಗೂ ವಿಶೇಷ ಸ್ಥಾನಮಾನವನ್ನು ನೀಡಿದ್ದು, ಎಲ್ಲಾ ವಿಭಾಗದಲ್ಲಿ ಮೈಸೂರಿನ ಅನೇಕ ಮಹನೀಯರು ತಮ್ಮದೇ ಆದ ಛಾಪು ಮೂಡಿಸಿದ್ದಾರೆ ಎಂದರು.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ದಸರಾ ಆಚರಣೆ ಆರಂಭವಾಗಿತ್ತು. ತದನಂತರ ಆ ಸಂಸ್ಕೃತಿಯನ್ನು ಮೈಸೂರಿಗೆ ತಂದ ಹೆಗ್ಗಳಿಕೆ ನಮ್ಮ ಮಹಾರಾಜರಿಗೆ ಸಲ್ಲುತ್ತದೆ. ಮಹಾರಾಜರ ಕಾಲದಿಂದಲ್ಲೂ ಕುಸ್ತಿ ಪಟುಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದು, ಇಡೀ ರಾಜ್ಯದಲ್ಲಿಯೇ ಅತೀ ಹೆಚ್ಚು ಶ್ರೀರಾಮ ಮಂದಿರ ಮತ್ತು ಗರಡಿ ಮನೆಗಳನ್ನು ಮೈಸೂರು ಹೊಂದಿದೆ. ಅದರಂತೆ ಇಂದು ಮೈಸೂರಿನಲ್ಲಿ ಅನೇಕ ಫಿಟ್‌ನೆಸ್ ಸೆಂಟರ್‌ಗಳು ನಿರ್ಮಾಣವಾಗಿವೆ.


ಜೀವನದಲ್ಲಿ ಮನೆ,ಆಸ್ತಿ ಮಾಡಬೇಕು ಎಂದು ಆಸೆ ಇಟ್ಟುಕೊಳ್ಳುತ್ತೇವೆ. ಆದರೆ, ಇದಕ್ಕೆಲ್ಲ ಮುಖ್ಯವಾಗಿ ಬೇಕಿರುವುದು ಆರೋಗ್ಯ ಬದುಕಿರುವಷ್ಟು ದಿನ ಆಸ್ಪತ್ರೆ ಕಡೆ ಮುಖ ಮಾಡದಂತೆ ನಮ್ಮ ಆರೋಗ್ಯವನ್ನು ಕಾಪಾಡಿಕೊಂಡರೆ, ಜೀವನದಲ್ಲಿ ಏನು ಬೇಕಾದರೂ ಸಾಧಿಸಬಹುದು. ಕಳೆದ ಒಂದು ವರ್ಷದ ಹಿಂದೆ ನಮ್ಮೆಲ್ಲರ ನೆಚ್ಚಿನ ನಟ ಪುನೀತ್‌ರಾಜ್‌ಕುಮಾರ್ ಸೇರಿದಂತೆ ವಿವಿಧ ನಟರು ನಿಧನರಾದ ನಂತರ ಜಿಮ್‌ಗೆ ಹೋಗಬೇಕೇ ಇಲ್ಲವೇ ಎಂಬುದರ ಬಗ್ಗೆ ಆತಂಕ ಸೃಷ್ಟಿಯಾಗಿತ್ತು. ಈ ಅಪನಂಬಿಕೆಯನ್ನು ಜಾಗೃತಿ ಮೂಲಕ ದೂರ ಮಾಡಲು 'ನಮ್ಮ ಮೈಸೂರು ಫಿಟ್ ಮೈಸೂರು' ಸಂಸ್ಥೆ ಮುಂದಾಗಿದೆ ಎಂದರು.

ಈ ಕ್ಷೇತ್ರದ ಶಾಸಕರಾದ ನಾಗೇಂದ್ರ ಅವರು ಉತ್ತಮ ಕೆಲಸಗಳನ್ನು ಮಾಡುತ್ತಿದ್ದು, ಸೋರುತ್ತಿದ್ದ ಕೆಆರ್ ಆಸ್ಪತ್ರೆಯನ್ನು ಸರಿಪಡಿಸಲು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ 89 ಕೋಟಿ ರೂ. ಹಣವನ್ನು ತಂದಿದ್ದಾರೆ. ಕ್ಯಾನ್ಸರ್ ಆಸ್ಪತ್ರೆ ಎಂದರೆ ಮೈಸೂರಿನಲ್ಲಿ ಇದ್ದಿದ್ದು, ಭಾರತ್ ಕ್ಯಾನ್ಸರ್ ಆಸ್ಪತ್ರೆ ಒಂದೇ. ಆದರೆ, ಈಗ ಕಿದ್ವಾಯಿ ಆಸ್ಪತ್ರೆ ನಿರ್ಮಾಣವಾಗಲಿದೆ ಎಂದು ಶಾಸಕ ನಾಗೇಂದ್ರರನ್ನು ಕೊಂಡಾಡಿದರು.

ನಾನು ಜಿಮ್ ಮಾಡಿದ್ದೇನೆ. ಜಿಮ್ ಮಾಡುವುದರಿಂದ ದೇಹಕ್ಕೆ ಯಾವುದೇ ಅಡ್ಡ ಪರಿಣಾಮವಿಲ್ಲ. ಆದರೆ, ಅದು ಅತೀ ಆಗಬಾರದು ಅಷ್ಟೇ. ಗರಡಿ ಮನೆಯಲ್ಲಿ ಕಸರತ್ತು, ವಾಕಿಂಗ್, ಯೋಗ ಸೇರಿದಂತೆ ಇತರ ವ್ಯಾಯಾಮ ಮಾಡಿದಾಗ ದಣಿವಾಗುತ್ತದೆ. ಆಗಲೇ ನಾವು ಮಾಡಿದ ವ್ಯಾಯಾಮಕ್ಕೆ ಫಲ ಸಿಕ್ಕಂತೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಬೇರೆ ಜಿಲ್ಲೆಗಳಿಗೆ ಹೋಲಿಕೆ ಮಾಡಿದರೆ, ಮೈಸೂರಿನಲ್ಲಿ ಅತೀ ಹೆಚ್ಚು ಫಿಟ್‌ನೆಸ್ ಸೆಂಟರ್‌ಗಳಿದ್ದು, ಇದು ಒಳ್ಳೆಯ ಬೆಳವಣಿಗೆ. ನಾನು ಅವರೊಟ್ಟಿಗೆ ಯಾವಾಗಲೂ ಇರುತ್ತೇನೆ. ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್, ಮೈಸೂರು ಯೋಗ ಫೆಡರೇಶನ್ ಅಧ್ಯಕ್ಷ ಶ್ರೀಹರಿ, ನಾರಾಯಣ ಹೃದಯಾಲಯದ ಹೃದ್ರೋಗ ತಜ್ಞ ಡಾ. ಕೇಶವ ಮೂರ್ತಿ, ಮೈಸೂರು ಜಿಮ್ ಮತ್ತು ಫಿಟ್‌ನೆಸ್ ಮಾಲೀಕರ ಸಂಘದ ಅಧ್ಯಕ್ಷ ಎಂ.ಎಸ್. ಹರ್ಷ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ದುಬೈನಲ್ಲಿ ನಡೆದ ಅಂತರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ಶಶಾಂಕ್ ಎಂ.ಎಸ್ ಪ್ರಥಮ ಬಹುಮಾನ ಪಡೆದಿದ್ದಾರೆ. ಮೂಲತಃ ಮರಟಿಕ್ಯಾತನಹಳ್ಳಿಯವರಾಗಿದ್ದು, ಹಾಲಿ ಬೋಗಾದಿ 2ನೇ ಹಂತದಲ್ಲಿ ವಾಸವಿರುವ ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್ ಪುತ್ರ. ಇವರು ಸುನಿಲ್ ಕುಮಾರ್ ಅವರಿಂದ ತರಬೇತಿ ಪಡೆದು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕ (ರೈಲ್ವೆ ನಿಲ್ದಾಣಕ್ಕೆ ಹೋಗಿ) : ಸ್ವಾಮಿ ಒಂದು ರಿಟರ್ನ್ ಟಿಕೆಟ್ ಕೊಡಿ
ಕೌಂಟರ್‌ನಲ್ಲಿದ್ದ ವ್ಯಕ್ತಿ : ಎಲ್ಲಿಗೆ?
ಪ್ರಯಾಣಿಕ : ಇನ್ನೆಲ್ಲಿಗೆ? ಇಲ್ಲಿಗೆ ಕೊಡಿ!

ಮೈಸೂರು ಮಿತ್ರ
ಶನಿವಾರ, 19 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಬಹಳಷ್ಟು ಜನರು ತಮ್ಮ ಸುತ್ತಲಿರುವವರ ಮೇಲೆ ದರ್ಪ ತೋರಿಸುವುದೇ ನಿರ್ವಹಣೆ ಎಂದು ತಿಳಿದುಕೊಂಡಿದ್ದಾರೆ. –ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಪ್ಪ ಅವ್ವನಂತ ನೆಂಟ್ರಿಲ್ಲ, ಹಿಟ್ಟು ಸೊಪ್ಪಿನಂತ ಊಟವಿಲ್ಲ

ನಿಮ್ಮ ಪತ್ರಗಳು

ಮಾನಸಗಂಗೋತ್ರಿ ಬಯಲು ರಂಗ ಮಂದಿರ ರಸ್ತೆ ದುರಸ್ತಿಗೊಳಿಸಿ



ಮಾನ್ಯರೆ,

ಮೈಸೂರಿನ ಪಡುವಾರಹಳ್ಳಿ ವೃತ್ತದಿಂದ ಬಯಲು ರಂಗಮಂದಿರದ ಕಡೆ ಹೋಗುವ ರಸ್ತೆಪೂರ್ತಿ ಕಿತ್ತು ನಿಂತಿದ್ದು, ದಸರಾಗೂ ಮುನ್ನ ಈ ಗುಂಡಿಗಳಿಗೆ ಜಲ್ಲಿಕಲ್ಲು ಹಾಕಿ ಡಾಂಬರು ಹಾಕದೆ ಹಾಗೇ ಬಿಟ್ಟಿದ್ದರು. ಅಂದಿನಿಂದಲೂ ಇಲ್ಲಿ ಓಡಾಡುವ ವಾಹನ ಸವಾರರು ರಸ್ತೆಯಲ್ಲಿನ ಗುಂಡಿ ಹಾಗೂ ಚೆಲ್ಲಾಪಿಲ್ಲಿಯಾಗಿರುವ ಜಲ್ಲಿ ಕಲ್ಲುಗಳನ್ನು ತಪ್ಪಿಸಿ ಹೋಗಲು ಅಡ್ಡಾದಿಡ್ಡಿ ವಾಹನ ಚಲಾಯಿಸುವ ಪರಿಸ್ಥಿತಿ ನಿರ್ಮಾಣವಾಗಿ, ಹಲವಾರು ಸಣ್ಣಪುಟ್ಟ ಅಪಘಾತಗಳಾಗಿವೆ. ಆದ್ದರಿಂದ, ಯಾವುದೇ ರೀತಿಯ ಸಾವು ನೋವುಗಳಾಗುವ ಮೊದಲು ಸಂಬಂಧಪಟ್ಟವರು ಕೂಡಲೇ ರಸ್ತೆಯನ್ನು ದುರಸ್ತಿಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಬ್ರಾಹ್ಮಣರ ಬಗ್ಗೆ ಅವಹೇಳನಕಾರಿ ಹೇಳಿಕೆಗೆ ಖಂಡನೆ

ಮಾನ್ಯರೆ,

ಇತ್ತೀಚೆಗೆ ಬ್ರಾಹ್ಮಣ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಪ. ಮಲ್ಲೇಶ್ ಎಂಬ ವಿಚಾರವಾದಿ ತಮ್ಮ ನಾಲಿಗೆಯನ್ನು ಹರಿ ಬಿಡುವ ಮೂಲಕ ವಿಕೃತ ಭಾವನೆಯನ್ನು ಹೊರಹಾಕಿದ್ದಾರೆ. ಬೇರ‍್ಯಾವ ಜನಾಂಗದ ಬಗ್ಗೆ ತುಚ್ಛವಾಗಿ ಮಾತನಾಡಲು ಪುಕ್ಕಲುತನ ತೋರುವ ಈ ವ್ಯಕ್ತಿ ಬ್ರಾಹ್ಮಣರನ್ನು ಗುರಿಯಾಗಿಸಿಕೊಂಡು ಮಾತನಾಡಿರುವುದು ಅತ್ಯಂತ ದುರದೃಷ್ಟಕರ. ಬ್ರಾಹ್ಮಣರ ಬಗ್ಗೆ ಪುಂಖಾನು ಪುಂಖವಾಗಿ ನಾಲಿಗೆ ಹರಿಬಿಟ್ಟು ತಮ್ಮ ವಿಕೃತ ಮನೋಭಾವನೆಯನ್ನು ಅನಾವರಣಗೊಳಿಸಿಕೊಂಡು ತನ್ನ ವ್ಯಕ್ತಿತ್ವಕ್ಕೆ ಕಳಂಕ ಹಚ್ಚಿಕೊಂಡಿದ್ದಾರೆ. ಇಂತಹ ನಕಲಿ ಚಿಂತನೆಯ ಡೋಂಗಿ ವಿಚಾರವಾದಿಗಳಿಂದ ಸಮಾಜದಲ್ಲಿ ಇಂದು ಅಶಾಂತಿ, ವೈಮನಸ್ಸು ಮೂಡುತ್ತಿದ್ದು ರಾಜಕೀಯ ನಾಯಕರ ಬಾಲಂಗೋಚಿಗಳಾಗುತ್ತಿರುವುದು ಇವರ ನೈಜ ವಿಚಾರವಾದಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅಲ್ಲೊಬ್ಬ ಶಾಸಕ ಹಿಂದೂ ಪದವೇ ಅಶ್ಲೀಲ ಎಂದರೇ, ಇನ್ನೊಬ್ಬ ಶಾಸಕ ಟಿಪ್ಪುವಿನ ನೂರಡಿ ಪ್ರತಿಮೆಗೆ ಪಣ ತೊಟ್ಟಿದ್ದಾರೆ. ಇನ್ನೊಬ್ಬ ಸ್ವಯಂಘೋಷಿತ "ಚಿಂತಕ" ಬ್ರಾಹ್ಮಣರನ್ನು ಹೀಗಳೆಯುತ್ತಾನೆ. ಇಂತಹವರಿಂದ ಸಮಾಜಕ್ಕೆ ಯಾವುದೇ ಕಿಲುಬು ಕಾಸಿನ ಪ್ರಯೋಜನ ಇಲ್ಲ. ಬ್ರಾಹ್ಮಣ ಸಮುದಾಯ ಇಂತಹ ಚಿಲ್ಲರೆ ಚಿಂತಕರ ವಿರುದ್ಧ ಸಂಘಟಿತವಾಗಿ ಹೋರಾಡಬೇಕಿದೆ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು

ತಾಂಡವಪುರದಲ್ಲಿ ಬಸ್ ನಿಲುಗಡೆಗೆ ಅವಕಾಶ ಕಲ್ಪಿಸಿ

ಮಾನ್ಯರೆ,

ಮೈಸೂರಿನಿಂದ ನಂಜನಗೂಡಿಗೆ, ನಂಜನಗೂಡಿನಿಂದ ಮೈಸೂರಿಗೆ ನಿಮಿಷಕ್ಕೊಂದರಂತೆ ಬಸ್ ವ್ಯವಸ್ಥೆ ಇರುವುದು ಮೇಲ್ನೋಟಕ್ಕೆ ಸರಿಯಷ್ಟೇ. ಆದರೆ ನಂಜನಗೂಡಿನಿಂದ ಮೈಸೂರಿಗೆ ಬರುವ ಬಸ್‌ಗಳು ಮಾರ್ಗ ಮಧ್ಯೆ ಸಿಗುವ ತಾಂಡವಪುರದಲ್ಲಿ ಬೆಳಗಿನ ಸಮಯದಲ್ಲಿ ನಿಲುಗಡೆ (ಸ್ಟಾಪ್) ನೀಡುತ್ತಿಲ್ಲ. ಹಾಗಾಗಿ ವಿದ್ಯಾರ್ಥಿಗಳು ತರಗತಿಗಳಿಗೆ ಸರಿಯಾದ ಸಮಯಕ್ಕೆ ಹೋಗಲಾಗದೇ ಹಾಜರಾತಿಯ ಕೊರತೆ ಉಂಟಾಗುತ್ತಿದೆ. ಇದರ ಬಗ್ಗೆ ಸಂಬಂಧಪಟ್ಟವರಿಗೆ ಮನವಿ ಮತ್ತು ದೂರನ್ನು ನೀಡಿದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ನಾನು ಮೈಸೂರಿನ ಖಾಸಗಿ ಪದವಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ನನ್ನಂತೆಯೇ ನಮ್ಮೂರಿನ (ತಾಂಡವಪುರ) ವಿದ್ಯಾರ್ಥಿಗಳು ಬೆಳಿಗ್ಗೆ ಶಾಲೆ, ಕಾಲೇಜಿಗೆ ಹೋಗುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಸರಿಯಾದ ಬಸ್ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ಅದರಲ್ಲೂ ಮುಖ್ಯವಾಗಿ ಬೆಳಗಿನ ಸಮಯದಲ್ಲಿ ತಾಂಡವಪುರದಲ್ಲಿ ಎಕ್ಸ್‌ಪ್ರೆಸ್ ಬಸ್ ಅಲ್ಲದಿದ್ದರೂ ಸಿಟಿ ಬಸ್ಸನ್ನಾದರೂ ನಿಲುಗಡೆ ಮಾಡಿದರೆ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟವರು ಗಮನಹರಿಸಿ ಬಸ್ ವ್ಯವಸ್ಥೆ ಸರಿಪಡಿಸಬೇಕೆಂದು ಮನವಿ.

– ಶ್ರೇಯ.ಬಿ.ಕದಂ, ತಾಂಡವಪುರ, ವಿದ್ಯಾರ್ಥಿಗಳ ಪರವಾಗಿ

ಪೋಷಕರು, ವಿದ್ಯಾರ್ಥಿಗಳಿಗೆ ಒಂದು ಕಿವಿಮಾತು

ಮಾನ್ಯರೇ,

ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಶಾಲಾ ವಿದ್ಯಾರ್ಥಿಗಳ ಸರಣಿ ಆತ್ಮಹತ್ಯೆಯಂತಹ ಪ್ರಕರಣಗಳು ಆಗಿಂದಾಗ್ಗೆ ವರದಿಯಾಗುತ್ತಿವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಯಾವುದೇ ಸಂದರ್ಭದಲ್ಲಿ, ಸನ್ನಿವೇಶದಲ್ಲೂ ಅತಿರೇಕಕ್ಕೆ ಒಳಗಾಗದೆ, ವಿಚಲಿತರಾಗದೆ ತಮಗೆ ಎದುರಾಗುವ ಸಮಸ್ಯೆಗಳನ್ನು ಮೊದಲಿಗೆ ಪೋಷಕರೊಂದಿಗೆ ಮುಕ್ತವಾಗಿ ಚರ್ಚಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗಿದೆ. ಯಾವುದೇ ಒಬ್ಬ ಸಭ್ಯ ಶಿಕ್ಷಕ/ಶಿಕ್ಷಕಿ ತನ್ನ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲವೊಮ್ಮೆ ಅವರ ತಪ್ಪನ್ನು ತಿದ್ದುವ ಕಾರ್ಯವನ್ನು ಮಾಡುತ್ತಾರೆ. ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು ತಮ್ಮ ತಪ್ಪನ್ನು ಮನಗಂಡು ಅದನ್ನು ತಿದ್ದಿಕೊಳ್ಳುವ ಮಾರ್ಗದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಳ್ಳಬೇಕೇ ವಿನಃ ತಮ್ಮ ಜೀವಕ್ಕೆ ಘಾಸಿಯಾಗುವಂತಹ ಕೃತ್ಯಗಳಲ್ಲಿ ಭಾಗಿಯಾಗಬಾರದು. ಈ ನಿಟ್ಟಿನಲ್ಲಿ ಪೋಷಕರು ಸಹ ಬಹಳ ಜವಾಬ್ದಾರಿಯುತವಾಗಿ ತಮ್ಮ ಮಕ್ಕಳ ದೈನಂದಿನ ಸ್ವಭಾವಗಳ ಮೇಲೆ ಗಮನಹರಿಸಬೇಕಾಗಿರುವುದು ಅನಿವಾರ್ಯವಾಗಿದೆ. ಏಕೆಂದರೆ ಶಾಲೆಯಿಂದ ಮನೆಗೆ ಹಿಂತಿರುಗುವ ಪ್ರತಿ ವಿದ್ಯಾರ್ಥಿಯ ನಡೆ–ನುಡಿ ಸ್ವಭಾವಗಳನ್ನು ಪೋಷಕರು ಆಗಿಂದಾಗ್ಗೆ ಮೇಲ್ವಿಚಾರಣೆ ಮಾಡುವುದರಿಂದ ಇಂತಹ ಘೋರ ಕೃತ್ಯಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಅಲ್ಲದೆ ಪೋಷಕರು ಹಾಗೂ ಶಿಕ್ಷಕರು ವಿದ್ಯಾರ್ಥಿಗಳ ತಪ್ಪನ್ನು ಸರಿಯಾದ ರೀತಿಯಲ್ಲಿ ತಿದ್ದಿ ಅವರ ಮನಸ್ಥಿತಿಗೆ ಅನುಗುಣವಾಗಿ ಅವರು ಮತ್ತೆ ಸರಿಯಾದ ಮಾರ್ಗದಲ್ಲಿ ಕಾರ್ಯ ಪ್ರವೃತ್ತರಾಗಲು ಬೇಕಾದ ಆತ್ಮವಿಶ್ವಾಸವನ್ನು ಮೂಡಿಸುವ ಜವಾಬ್ದಾರಿ ಶಿಕ್ಷಕರ ಮೇಲೆ ಮಾತ್ರವಲ್ಲದೆ ಪೋಷಕರ ಮೇಲೆಯೂ ಇರುತ್ತದೆ. ಬನ್ನಿ ನಾವೆಲ್ಲರೂ ಈ ಮುಗ್ಧ ಹೃದಯಗಳ ಸಂರಕ್ಷಿಸಲು ಹಾಗೂ ಭವಿಷ್ಯದಲ್ಲಿ ಉತ್ತಮ ಸಮಾಜವನ್ನು ಕಟ್ಟಲು ಪ್ರಯತ್ನಿಸೋಣ.

– ಕಿರಣ್ ಕುಮಾರ್ ಎಂ, ಬನ್ನಿಮಂಟಪ, ಮೈಸೂರು.

ತಿದ್ದುಪಡಿ–ಸ್ಪಷ್ಟನೆ

ಬ್ರಾಹ್ಮಣ ಸಮುದಾಯ ಸಂಬಂಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ, ಚಿಂತಕ ಪ.ಮಲ್ಲೇಶ್ ವಿರುದ್ಧ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಜಾತಿ ನಿಂದನೆ ದೂರು ಸಲ್ಲಿಕೆಯಾಗಿದೆಯಷ್ಟೇ. ಆದರೆ ಶುಕ್ರವಾರದ 'ಮೈಸೂರು ಮಿತ್ರ' ಸಂಚಿಕೆಯ ಮುಖಪುಟದಲ್ಲಿ 'ಚಿಂತಕ ಪ.ಮಲ್ಲೇಶ್ ವಿರುದ್ಧ ಜಾತಿ ನಿಂದನೆ ಕೇಸ್ ದಾಖಲು' ಎಂದು ತಪ್ಪಾಗಿ ಪ್ರಕಟವಾಗಿದ್ದು, ಇದಕ್ಕಾಗಿ ವಿಷಾಧಿಸುತ್ತೇವೆ. –ಸಂಪಾದಕ



ಕೆಬಿಜೆಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಗೋವೆಯಲ್ಲಿ ಆಚರಿಸಿದ ದೀಪಾವಳಿ–3

ಪೋರ್ಚುಗೀಸ್ ಆಡಳಿತದ ಕುರುಹುಗಳ ನಡುವೆ ಮೈದಳೆದು ಬಂದ ನರಕಾಸುರ







(ನ.18ರ ಸಂಚಿಕೆಯಿಂದ)

ನಾನು ದಸರಾ ಮಹೋತ್ಸವದ ಸಂದರ್ಭದಲ್ಲಿ ಉತ್ಸವದ ಒಂದು ಭಾಗವಾಗಿ ಆಚರಿಸಲ್ಪಡುವ ರಾಮಲೀಲಾ ಕಾರ್ಯಕ್ರಮವನ್ನು ಕೇಳಿದ್ದೇನೆ, ಓದಿದ್ದೇನೆ ಹಾಗೂ ಟಿವಿಯಲ್ಲಿ ನೋಡಿದ್ದೇನೆ.

ದೆಹಲಿಯಲ್ಲಿ ಪ್ರಸಿದ್ಧ ರಾಮಲೀಲಾ ಮೈದಾನ ಎಂಬುದೊಂದಿದೆ. ಇಲ್ಲಿ ಪ್ರತಿವರ್ಷ ರಾಮಲೀಲಾ ಕಾರ್ಯಕ್ರಮವನ್ನು ಒಂದು ಸಾರ್ವಜನಿಕ ಸಮಾರಂಭವಾಗಿ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಈ ವಾರ್ಷಿಕ ಸಮಾರಂಭದಲ್ಲಿ ಗಣ್ಯರು ಹಾಗೂ ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ಈ ಕಾರ್ಯಕ್ರಮದಲ್ಲಿ ಅತ್ಯಂತ ಕಾತುರತೆಯಿಂದ ಎದುರು ನೋಡುವ ಸನ್ನಿವೇಶವೆಂದರೆ, ಪಟಾಕಿಗಳಿಂದ ತುಂಬಿದ್ದ ರಾಕ್ಷಸರ ರಾಜ, ಲಂಕಾಧಿಪತಿ ರಾವಣನ ಪ್ರತಿಕೃತಿಗೆ ಬೆಂಕಿ ಹಚ್ಚಿ ರಾವಣನ ದಹನ.

ನನಗೆ ಅತೀವ ಅಚ್ಚರಿಯನ್ನು ಉಂಟುಮಾಡುವ ಸಂಗತಿಯೆಂದರೆ, ಗೋವಾದಲ್ಲಿ ಇದೇ ರೀತಿಯ ದೀಪಾವಳಿ ಹಬ್ಬದ ಆಚರಣೆ. ಏಕೆಂದರೆ, ಈ ಹಿಂದೆ ಕೆಲವೊಮ್ಮೆ ಗೋವೆಗೆ ನಾನು ಭೇಟಿ ನೀಡಿದ್ದೆ. ಆದರೆ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹೋಗಿರಲಿಲ್ಲ ಅಷ್ಟೆ. ಹೀಗಾಗಿ ಈ ಹಬ್ಬವನ್ನು ಅಲ್ಲಿಯ ಜನ ಯಾವ ರೀತಿಯಲ್ಲಿ ಆಚರಿಸಿ, ಸಂಭ್ರಮಿಸುತ್ತಾರೆ ಎಂಬುದನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ, ಈ ಬಾರಿ ನಾವು ಗೋವಾದ ಎಲ್ಲೆಡೆ ಸಂಚರಿಸುವಾಗ ಪ್ರತಿ ಸಣ್ಣ ಪಟ್ಟಣ ಇಲ್ಲವೆ ಗ್ರಾಮಗಳಲ್ಲಿ, ಪುರಾಣದ ರಕ್ಕಸ ನರಕಾಸುರನ ಬೃಹದಾಕಾರದ ಪ್ರತಿರೂಪಗಳೇ ಕಾಣುತ್ತಿದ್ದವು. ಕೆಲವರು ಅವನನ್ನು "ಮಹಿಷಾಸುರ" ಎಂದು ಸಹ ಕರೆಯುತ್ತಾರೆ. ನರಕ ಚತುರ್ದಶಿ ದಿನದಂದು, ಮುಂಜಾನೆಯಿಂದಲೇ ಸಾಕಷ್ಟು ಪಟಾಕಿಗಳಿಂದ ದಹಿಸಲು ಸಜ್ಜಾಗಿರುವ ಹಾಗೆ ಕಂಡು ಬರುತ್ತಾರೆ. ಇದು ರಾಮಲೀಲಾದಲ್ಲಿ ಹೇಗೆ ಶ್ರೀ ರಾಮಚಂದ್ರ, ಲಂಕಾಧಿಪತಿ ರಾವಣನನ್ನು ಸಂಹರಿಸುತ್ತಾನೋ ಅದೇ ರೀತಿ ಶ್ರೀಕೃಷ್ಣ ಪರಮಾತ್ಮನು, ನರಕಾಸುರನನ್ನು ಸಂಹರಿಸಿದ್ದನ್ನು ಸಂಕೇತಿಸುತ್ತದೆ. ಇದರ ಗೂಢಾರ್ಥ **ದುಷ್ಟಶಕ್ತಿಯ ಮೇಲೆ ಒಳ್ಳೆಯತನದ ಗೆಲುವಾಗಿದೆ**.

ನರಕಾಸುರನ ಪ್ರತಿಕೃತಿ ಮೇಲೆ ದಾಳಿಗೈಯ್ಯುವ ಗೋವಾದ ಜನರು, ರಾವಣನ ಪ್ರತಿಕೃತಿಯ ಮೇಲೆ ಆಕ್ರಮಣ ಮಾಡುವ ಉತ್ತರ ಭಾರತದವರಿಗಿಂತ ಹೆಚ್ಚು ಕ್ರಿಯಾಶೀಲರಾಗಿರುತ್ತಾರೆಂದು ಕಂಡುಬರುತ್ತದೆ. ನರಕಾಸುರನ ಪ್ರತಿಯೊಂದು ಪ್ರತಿಕೃತಿಯೂ ಆಕಾರ, ಬಣ್ಣ, ದೇಹದಾರ್ಢ್ಯತೆ, ಅತೀ ಘೋರ ಮುಖಭಾವದ ಪ್ರತೀಕಗಳಾದ ಕೋರೆಹಲ್ಲುಗಳು, ಕೈಯ್ಯಲ್ಲಿ ಹಿಡಿದಿರುವ ಆಯುಧಗಳು ಹಾಗೂ ಪ್ಲಾಸ್ಟರ್ ಆಫ್ ಪ್ಯಾರೀಸಿನಿಂದ ಮಾಡಿದ್ದಾಗಿದ್ದು, ಪ್ರತಿಯೊಂದು ನರಕಾಸುರನ ಪ್ರತಿಕೃತಿಯೂ ವೈವಿಧ್ಯಮಯವಾಗಿವೆ (ನಾನೇ ತೆಗೆದಂತಹ ಕೆಲವು ಚಿತ್ರಗಳನ್ನು ನೋಡಿ).

> ❝ ಅಸಂಖ್ಯಾತ ಘೋರ, ಭಯಾನಕ ನರಕಾಸುರನ ಪ್ರತಿಕೃತಿಗಳನ್ನು ಕಂಡಾಗ ಮತ್ತು ಸ್ಥಳೀಯರು ಹಾಗೂ ಪ್ರವಾಸಿಗರು ಅವುಗಳಿಂದ ಆಕರ್ಷಿತರಾಗುವುದನ್ನು ನೋಡಿದಾಗ, ಮೈಸೂರಿನವರಾದ ನಾವು, ನಮ್ಮ ನವರಾತ್ರಿ ಉತ್ಸವ ದಸರಾದ ಒಂದು ಭಾಗವಾಗಿ ಇದನ್ನು ಅನುಕರಿಸಬಹುದಲ್ಲವೇ ಎಂಬ ಆಲೋಚನೆ ಮೂಡಿತು. ಪ್ರವಾಸೋದ್ಯಮ ಅಭಿವೃದ್ಧಿಗೆ ಇದೊಂದು ಟಿಪ್ಸ್!

ಕೆಲವು ಪ್ರತಿಕೃತಿಗಳು ಒಂದೆಡೆ ನಿಂತಲ್ಲೇ ನಿಂತಿದ್ದರೆ, ಮತ್ತೆ ಕೆಲವು ಪ್ರತಿಕೃತಿಗಳನ್ನು ವಾಹನದಲ್ಲಿ ಇರಿಸಲಾಗಿದ್ದು ಮೆರವಣಿಗೆಗೆ ಸಜ್ಜಾಗಿರುತ್ತವೆ. ನರಕದಿಂದ ಬಂದಿರುವ ಥೇಟ್ ಪೈಶಾಚಿಕ ಜೀವಿಗಳ ಹಾಗೆ ಈ ಪ್ರತಿಕೃತಿಗಳ ನೋಡಿದರೆ ಭಾಸವಾಗುತ್ತದೆ.

ಕಾರನ್ನು ನಿಲ್ಲಿಸಿ, ಅವುಗಳನ್ನು ದಿಟ್ಟಿಸಿ ನೋಡಿದಾಗ ನನಗೆ ವಿಸ್ಮಯವಾಯಿತು. ತಕ್ಷಣವೇ ನನ್ನ ಮನಸ್ಸಿನಲ್ಲಿ ಆಲೋಚನೆಯೊಂದು ಚಿಗುರೊಡೆಯಿತು. ಶ್ರೀ ರಾಮಚಂದ್ರ ರಾವಣನನ್ನು ದೆಹಲಿಯ ರಾಮಲೀಲಾ ಮೈದಾನದಲ್ಲಿ ಹಾಗೂ ಗೋವೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ, ನರಕಾಸುರನನ್ನು ಸಾಂಕೇತಿಕವಾಗಿ ವಧಿಸುವುದನ್ನು ಘನಘೋರ ರೀತಿಯಲ್ಲಿ ಪ್ರದರ್ಶಿಸಬಹುದಾದರೆ, ಚಾಮುಂಡೇಶ್ವರಿ ತಾಯಿ (ದುರ್ಗಾ ಮಾತೆ) ರಾಕ್ಷಸ ಮಹಿಷಾಸುರನನ್ನು ಸಂಹರಿಸುವುದನ್ನು ಸಾಂಕೇತಿಕವಾಗಿ ಪ್ರದರ್ಶಿಸಬಾರದೇಕೆ? ಜನರಿಗೆ ಇದೊಂದು ರೀತಿಯ ಮನೋರಂಜನೆಯಾಗಬಹುದಲ್ಲ. ಅಲ್ಲದೇ, ಕಲಾವಿದರಿಗೂ ಕೆಲಸ ದೊರಕಿದಂತಾಗುತ್ತದೆ ಹಾಗೂ ವ್ಯಾಪಾರಿಗಳಿಗೂ ಒಳ್ಳೆಯ ಸಂಪಾದನೆಯಾಗುತ್ತದೆ. ಸಂಬಂಧಪಟ್ಟವರು ಈ ಬಗ್ಗೆ ಯೋಚಿಸಲಿ.

ಇದು ದೇಶದ ಬೇರೆ ಭಾಗಗಳಿಂದ ಜನರನ್ನು ಆಕರ್ಷಿಸುವ, ಪ್ರಸಿದ್ಧ ಗೋವಾದ ಉತ್ಸವದಂತೆ ಯಾಕಾಗಬಾರದು? ಎಲ್ಲೆಲ್ಲಿ ತಮಾಷೆ, ವಿನೋದ, ಫೆನ್ನಿ ವೈನ್, ಕೇಕ್, ಹಂದಿ ಮಾಂಸದ ಖಾದ್ಯ, ಸಂಗೀತ, ನೃತ್ಯ, ಹುಡುಗಿಯರು, ಹುಡುಗರು ಇರುತ್ತಾರೋ ಅಲ್ಲಿ ಅವರನ್ನು ಸ್ವೇಚ್ಛಾ ವಿಹಾರೋತ್ಸವಗಳು ಆಯಸ್ಕಾಂತದಂತೆ ಆಕರ್ಷಿಸಬಲ್ಲದು. ಆದಾಗ್ಯೂ ದೀಪಾವಳಿ ಹಬ್ಬವು, ಸ್ಥಳೀಯರ ಆಸಕ್ತಿಯನ್ನು ಇಮ್ಮಡಿಗೊಳಿಸುವಂತಹ ಹಬ್ಬವಾಗಿದೆ.

ಗೋವೆಯು, ರಜಾದಿನಗಳನ್ನು ಬೆನ್ನತ್ತುವ ಶಿಕಾರಿಗಳಿಗೆ ಹಲವಾರು ಆಕರ್ಷಣೆಗಳನ್ನು ಹೊಂದಿರುವ ಉತ್ತಮ ಪ್ರವಾಸಿ ಕೇಂದ್ರವಾಗಿದೆ. ನಿಮ್ಮ ಆಯ್ಕೆಗೆ ಹಲವಾರು ಅವಕಾಶಗಳಿವೆ. ಅಮೇರಿಕದ ಲಾಸ್ ವೇಗಾಸ್‌ನಲ್ಲಿ ಸಾರ್ವಜನಿಕ ಗಾಯನ ಕೇಂದ್ರ, ನೃತ್ಯಾಗಾರಗಳು, ನಾಟಕಗಳು ಹಾಗೂ ಜೂಜಿನ (Casino) ಕೇಂದ್ರಗಳು ತುಂಬಾ ಇವೆ. ಅದೇ ರೀತಿ ಗೋವಾ. ಆದರೆ ಇವೆಲ್ಲಾ ಅಲ್ಪ ಪ್ರಮಾಣದಲ್ಲಿವೆ.

ಬಾಲಂಗೋಚಿ: ಪುರಾಣದ ಒಂದು ವಿವರಣೆಯಂತೆ, ದುರ್ಗಾ ಮಾತೆಯು, ಮಹಿಷಾಸುರನನ್ನು ಹಾಗೂ ಶ್ರೀ ರಾಮನು, ರಾವಣನನ್ನು ನವರಾತ್ರಿ ಮತ್ತು ದಸರೆಯ ಸಂದರ್ಭದಲ್ಲಿ ವಧಿಸುತ್ತಾರೆ. ಹಾಗಾದರೆ, ದೆಹಲಿಯಲ್ಲಿ ನಡೆಯುವ ರಾಮಲೀಲಾದಂತೆ ಮೈಸೂರಿನಲ್ಲಿ ದುರ್ಗಲೀಲಾ ಏಕೆ ನಡೆಯಬಾರದೆಂದು ತಮಾಷೆಯಾಗಿ ವ್ಯಕ್ತಿಯೊಬ್ಬರು ಕೇಳುತ್ತಾರೆ. ಆಯ್ದ ನರಕಾಸುರ ಪ್ರತಿಕೃತಿಗಳು ದಸರಾ ಮೆರವಣಿಗೆಯ ತುತ್ತ ತುದಿಯಲ್ಲಿ ಭಾಗವಹಿಸಿ, ಬನ್ನಿಮಂಟಪ ತಲುಪಿದ ನಂತರ ಅವುಗಳನ್ನು ದಹಿಸುವ ಮೂಲಕ ಪ್ರೇಕ್ಷಕರಿಗೆ ಒಂದು ರೀತಿಯ ಅದ್ದೂರಿ, ರೋಚಕ ಚಮತ್ಕಾರವನ್ನು ಪ್ರದರ್ಶಿಸಿದರೆ ಹೇಗೆ?

(ಮೂಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ)

(ಮುಗಿಯಿತು)

voice @starofmysore.com









ದಕ್ಷಿಣ ಪಿನಾಕಿನಿ ನದಿ ನೀರು ವಿಷಯದಲ್ಲಿ ರಾಜ್ಯಕ್ಕೆ ಮತ್ತೊಂದು ಕಾನೂನು ಕುಣಿಕೆ ಹಾಕಲು ಕೇಂದ್ರ ಹುನ್ನಾರ

- ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ
- ನ್ಯಾಯಾಧೀಕರಣ ರಚನೆ ಮೂಲಕ ರಾಜ್ಯಕ್ಕೆ ಮತ್ತೊಂದು ಅನ್ಯಾಯವೆಸಗುವ ಸಂಚು

ಬೆಂಗಳೂರು, ನ.18(ಕೆಎಂಶಿ)–ದಕ್ಷಿಣ ಪಿನಾಕಿನಿ (ಪೆನ್ನಾರ್) ನದಿ ನೀರಿನ ವಿಷಯದಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಕನ್ನಡಿಗರ ಹಕ್ಕು ಕಸಿದುಕೊಳ್ಳಲು ಹೊರಟಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ದಕ್ಷಿಣ ಪಿನಾಕಿನಿ ನದಿ ನೀರಿನ ವಿಷಯಕ್ಕೆ ಹೊಸ ನ್ಯಾಯಾಧೀಕರಣ ರಚನೆ ಮಾಡುವ ಕೇಂದ್ರ ಬಿಜೆಪಿ ಸರ್ಕಾರದ ನಿರ್ಧಾರ ಅಕ್ಷರಶಃ ರಾಜ್ಯದ ಪಾಲಿಗೆ ಮರಣಶಾಸನ. ಇದನ್ನು ರಾಜ್ಯ ಬಿಜೆಪಿ ಸರ್ಕಾರ ಮುಲಾಜಿಲ್ಲದೆ ವಿರೋಧಿಸಬೇಕು ಎಂದು ಒತ್ತಾಯಿಸಿದ್ದಾರೆ. ರಾಷ್ಟ್ರೀಯ ಪಕ್ಷಗಳು ಕರ್ನಾಟಕದ ಪಾಲಿಗೆ ಮಾರಕ ಎನ್ನುವುದು ಪದೇ ಪದೆ ರುಜುವಾತಾಗುತ್ತಿದೆ. ನೆಲ, ಜಲ, ಭಾಷೆ ವಿಚಾರದಲ್ಲಿ ಅವು ಕನ್ನಡಿಗರನ್ನು ಕಾಡುತ್ತಲೇ ಇವೆ ಎಂದು ಅವರು ಟೀಕಿಸಿದ್ದಾರೆ.



ಕಾವೇರಿ ವಿವಾದದಲ್ಲಿ ಕರ್ನಾಟಕವು ಒಂದು ಶತಮಾನ ಕಾಲ ಸಂಘರ್ಷ ನಡೆಸಿದ್ದಾಯಿತು. ಮೇಕೆದಾಟು ವಿವಾದಕ್ಕೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಇನ್ನೂ ತುಪ್ಪ ಸುರಿಯುತ್ತಾ, ಆ ಯೋಜನೆಗೆ ಅನುಮತಿ ನೀಡಲು ಮೀನಾಮೇಷ ಎಣಿಸುತ್ತಿದೆ. ಆಗಲೇ, ಪಿನಾಕಿನಿ ನದಿ ವಿಷಯದಲ್ಲಿ ರಾಜ್ಯಕ್ಕೆ ಕಾನೂನು ಕುಣಿಕೆ ಬಿಗಿಯಲು ಬಿಜೆಪಿ ಸರ್ಕಾರ ಹುನ್ನಾರ ನಡೆಸಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಜಕೀಯ ಕಾರಣಕ್ಕಾಗಿ ದಕ್ಷಿಣ ಪಿನಾಕಿನಿ ನದಿ ನೀರಿನ ಹಕ್ಕನ್ನು ಕರ್ನಾಟಕದಿಂದ ಕಸಿಯಲು ಕೇಂದ್ರ ಹವಣಿಸುತ್ತಿದೆ. ಕಾವೇರಿ, ಕೃಷ್ಣಾ, ಮಹದಾಯಿ ಸೇರಿ ವಿವಿಧ ಜಲ ವಿವಾದಗಳಲ್ಲಿ ಕರ್ನಾಟಕವನ್ನು ಕಾಡಿದಂತೆ, ವಿವಾದವೇ ಅಲ್ಲದ ದಕ್ಷಿಣ ಪಿನಾಕಿನಿಯನ್ನೂ ವಿವಾದದ ಕೂಪಕ್ಕೆ ತಳ್ಳಿ ಕನ್ನಡಿಗರನ್ನು ಕಾಡುವ ಹವಣಿಕೆ ಇದಷ್ಟೇ ಎಂದು ಅವರು ಆರೋಪಿಸಿದ್ದಾರೆ.

ರಾಜಕೀಯ ಲಾಭದ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ನೆಲ, ಜಲ, ಭಾಷೆಯಂತಹ ವಿಷಯಗಳನ್ನು ಇಟ್ಟುಕೊಂಡು ದಕ್ಷಿಣ ರಾಜ್ಯಗಳ ನಡುವೆ ಜಗಳ ಹಚ್ಚಲು ಷಡ್ಯಂತ್ರ ನಡೆಸಿದೆ. ರಾಜ್ಯದ ವಿರೋಧವಿದ್ದರೂ ಕೇಂದ್ರವು ನ್ಯಾಯಾಧೀಕರಣ ರಚನೆ ಮಾಡಲು ಹೊರಟಿದೆ. ಇದು ಸರಿಯಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಕನ್ನಡಿಗರನ್ನು ಮತ್ತೊಮ್ಮೆ ಜಲದಾಸ್ಯಕ್ಕೆ ದೂಡುವುದನ್ನು ನಾವು ಸಹಿಸುವುದಿಲ್ಲ ಎಂದು ಕಿಡಿಕಾರಿರುವ ಅವರು, ಗೋದಾವರಿ– ಕೃಷ್ಣಾ– ಪಿನಾಕಿನಿ– ಕಾವೇರಿ ನದಿ ಜೋಡಣೆ ಯೋಜನೆಯಲ್ಲೂ ಕೇಂದ್ರವು ರಾಜ್ಯಕ್ಕೆ ಸೊನ್ನೆ ಸುತ್ತಿದೆ. ಕಳೆದ ಫೆ.18ರಂದು ಸಭೆ ನಡೆಸಿದ ಕೇಂದ್ರವು, ಗೋದಾವರಿಯಿಂದ 247 ಟಿಎಂಸಿ ನೀರನ್ನು ಕೃಷ್ಣಾ, ಪೆನ್ನಾರ್ ಮೂಲಕ ಕಾವೇರಿಗೆ ಹರಿಸುವ ಯೋಜನೆಯ ಮಾಹಿತಿ ನೀಡಿತು. ಇಷ್ಟೂ ನೀರನ್ನು ತೆಲಂಗಾಣ, ಆಂಧ್ರ, ತಮಿಳುನಾಡಿಗೆ ಮಾತ್ರ ಹಂಚಿತು. ಈ ನದಿ ಜೋಡಣೆ ಯೋಜನೆಯಲ್ಲಿ ಕರ್ನಾಟಕ ಪ್ರಮುಖ ಪಾಲುದಾರ, ಹಕ್ಕುದಾರ ರಾಜ್ಯ. 247 ಟಿಎಂಸಿಯಲ್ಲಿ ರಾಜ್ಯಕ್ಕೆ ಸಿಕ್ಕಿರುವುದು ಶೂನ್ಯ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ 1) B.Com (Accounts Assistant) Boys Only. 2) Forklift Drivers ESI & PF ಸೌಲಭ್ಯವಿರುತ್ತದೆ. ಕಂಪನಿಯ ನೇರ ನೇಮಕಾತಿ
8951869646
9902645646

FOR SALE
2010 Model TVS Wego for Sale at 35,000/- Good Condition, New Battery & Tyres, Clear Documents, Insurance renewal in October, Running Km 58000, Payment Cash on Delivery
9481328876

ಗೋವಾ ಪ್ರವಾಸ
ಒಟ್ಟು 3 ದಿನಗಳು ಹೊರಡುವ ದಿನಾಂಕ: 07/01/2023 ನೋಡುವ ಸ್ಥಳಗಳು, ಬಾಗ ಬೀಚ್, ಕಲಂಗುಟ್ ಬೀಚ್, ಬಾಸಲಿಕ ಚರ್ಚ್, ಡಾಲ್ಫಿನ್ ಬೋಟ್, ಡಿಜೆ ಬೋಟ್, ಧೂದ್ ಸಾಗರ್ ವಾಟರ್ ಫಾಲ್ಸ್, ಊಟ, ತಿಂಡಿ, ಕಾಫೀ / ಟೀ ಮತ್ತು ಮಿನರಲ್ ವಾಟರ್ ಸೇರಿರುತ್ತದೆ. ಫ್ಯಾಮಿಲಿಗೆ ಪ್ರತ್ಯೇಕ ರೂಮ್ ಇರುತ್ತದೆ. ಎಲ್ಲಾ ಸೇರಿ ಒಬ್ಬರಿಗೆ 7000/– ರೂಪಾಯಿಗಳು. ಸಂಪರ್ಕಿಸಿ:
7022271023

ಬೇಕಾಗಿದ್ದಾರೆ
* ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
* ಅಕೌಂಟೆಂಟ್
* ಡ್ರೈವರ್ – ಗೂಡ್ಸ್ ವೆಹಿಕಲ್‌ಗೆ
* ಟೆಲಿಕಾಲರ್
9964227657
7829668666

WANTED
1) Accountant
2) Graphic designer (Fresher or experienced)
3) Helper boys (Sslc, Puc, ITI pass or fail)
Contact 9448067939 9739569260

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ದಿನಸಿ ಅಂಗಡಿಗೆ ಹುಡುಗರು
ವಿಳಾಸ:
ಬಾಲಕೃಷ್ಣ ರೈಸ್ ಕಾರ್ನರ್,
#23 ಎಫ್, ಅಕ್ಕಮಹಾದೇವಿ ರೋಡ್, ಚಾಣಕ್ಯ ಕಲ್ಯಾಣ ಮಂಟಪ ಹತ್ತಿರ, ವಿಶ್ವೇಶ್ವರನಗರ, ಮೈಸೂರು – 570008
9986756866

WE'RE HIRING!
Job Position Incude:
ARCHITECT
with 2 to 3 Years of Experience, Apply Now. We will be holding a walk-in- interview today 10 am onwards
9900486824 / 50

ಹೋಟಲ್ ಬಾಡಿಗೆಗೆ ಇದೆ
Opposite to Suyog Hospital, E & F Block, Ramakrishnanagar, Near Sai Baba Temple.
9900374603

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಮತ್ತು ಲೈಟಿಂಗ್ ಕಂಪನಿಯಲ್ಲಿ ಕೆಲಸ ಮಾಡಲು ಈ ಕೆಳಕಂಡ ಅನುಭವವಿರುವ ಕೆಲಸಗಾರರು ಬೇಕಾಗಿದ್ದಾರೆ. ಡ್ರೈವರ್‌ಗಳು (HMV ಬ್ಯಾಡ್ಜ್) 15,000/–, ಹೆಲ್ಪರ್‌ಗಳು 12,000/– (ಉಚಿತ ವಸತಿ ವ್ಯವಸ್ಥೆ ಇರುತ್ತದೆ.)
9845026220

ಉಚಿತ ತರಬೇತಿ
ಮನೆಯಿಂದಲೇ ಬತ್ತಿ ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶ್ರೀ ಗೌರಿಶಂಕರ (S.G.S) ಟ್ರಾವೆಲ್ಸ್
10–12–22 (4 ದಿನ) ಶಿರಡಿ, ಬಾಂಬೆ, ತ್ರಯ್ಯಂಬಕೇಶ್ವರ, ಘೃಶ್ವೇಶ್ವರ, ಭೀಮಶಂಕರ ಇತ್ಯಾದಿ
18–12–22 (1 ದಿನ) : ಕೋಟಿಲಿಂಗ, ಘಾಟಿ ಸುಬ್ರಹ್ಮಣ್ಯ, ಚಿಕ್ಕ ತಿರುಪತಿ
24–12–22 (6 ದಿನ) : ಗುರುವಾಯೂರು, ಮುನಾರ್ ತ್ರಿವೇಂಡಂ, ಕೊಚ್ಚಿನ್ ಇತ್ಯಾದಿ
ವಿಮಾನ / ಬಸ್ / ರೂಂ / ಊಟ
9620002114

ತಕ್ಷಣ ಬೇಕಾಗಿದ್ದಾರೆ
ಹಿನಕಲ್, ವಿಜಯನಗರ, ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ಸೂಪರ್ ವೈಸರ್ : 23,000/–, ಗಾರ್ಡ್: 16,000 + W/o (8hrs) ಸಂಪರ್ಕಿಸಬೇಕಾದ ಸಂಖ್ಯೆಗಳು:
9880727819 / 9620667819

WANTED
Part Time Sales Boys
for a Sports Shop in Heart of the city, Mysore.
Contact:
7760109047
8105368325

ಬೇಕಾಗಿದ್ದಾರೆ
ಗೂಡ್ಸ್ ಗಾಡಿಗೆ ಡ್ರೈವರ್
ಸಂಬಳ: 15,000
ಹೆಲ್ಪರ್ : 13,000
ವಸತಿ ಸೌಲಭ್ಯವಿರುತ್ತದೆ.
ವಯಸ್ಸು: 18 to 23
6361186317

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven
Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ...
ತೇಜು ಎಲೆಕ್ಟ್ರಾನಿಕ್ಸ್
9342114069

SB GOLD COMPANY
ಗಿರವಿ ಚಿನ್ನಾಭರಣ ಖರೀದಿ
ನೀವು ಗಿರವಿ ಇಟ್ಟಿರುವ ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ–(T&C) ಒಂದು ಗ್ರಾಂ ಚಿನ್ನಕ್ಕೆ 5100
9964522225

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

ಹೊಸ ಚೀಟಿಗಳ ಪ್ರಾರಂಭ
ಸಿಆಐ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಬೈಕ್ ರೈಡರ್ ಬೇಕಾಗಿದ್ದಾರೆ
rapido BIKE TAXI
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

SITE FOR SALE
(MUDA APPROVED LAYOUT)
40x60 60 Feet Road, Paramananda sagar Telecom Layout, Near St. Joseph's School, hunsur Road Belavadi,
Mob : 9743532664

SITE FOR SALE
Corner Commercial Site for sale in Nanjumalige Circle 7500 Sqft Per Sqft 9000 Negotiable
Call Geetha
7975765941

GST SKILLS
TRAINING WITH STIMULATION SOFTWARE
❖ REGISTRATION ❖ E-WAY BILL ❖ GSTR-3B ❖ GST CHALLAN ❖ GSTR-1 RETURN
GST IN TALLY ERP 9
ADVANCED EXCEL
8951208347
TNI TECHNOLOGIES
871, 1ST FLOOR, 4TH CROSS, BANK COLONY ROAD, BOGADI, MYSORE-570026

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

ಪ್ರಮಾಣ ಪತ್ರ
ಚಂದ್ರಶೇಖರ ಎಂ.ಸಿ ಮನೆ ನಂ.29, 1ನೇ ಕ್ರಾಸ್, ಮಾರುತಿ ದೇವಸ್ಥಾನ ಹತ್ತಿರ, ಗಂಗೋತ್ರಿ ಬಡಾವಣೆ, ಸರಸ್ವತಿಪುರಂ ಅಂಚೆ, ಮೈಸೂರು, ನಿವಾಸಿಯಾದ ನಾನು ನನ್ನ ಮಗನ ಹಳೆ ಹೆಸರು ವೇದಾಂತ್.ಸಿ ಬದಲಾಗಿ ಅಭಯ್‌ಸೂರ್ಯ.ಸಿ ಎಂದು ನೋಟರಿ ಕೃಷ್ಣಮೂರ್ತಿರವರ ಮುಂದೆ ದಿ:16/11/2022 ರಂದು ಧೃಡೀಕರಿಸಿರುತ್ತೇನೆ. ಇನ್ನು ಮುಂದೆ ಎಲ್ಲಾ ಚಟುವಟಿಕೆಯಲ್ಲೂ ಅಭಯ್‌ಸೂರ್ಯ.ಸಿ ಎಂದು ವ್ಯವಹರಿಸುತ್ತಾನೆ.

FOR RENT COMMERCIAL SPACE
2500sq ft.
2nd & 3rd Floor, Suitable for Bank, Office, Clinic, Labs, Boutique with Lift Facility
Near Gopala Gowda Hospital, Nazarbad
90087 01144

Star Solar
Renewable Energy
ಕೇವಲ Easy EMI
19,499/-
200 Ltr
*5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub,Mysore
9945616293 / 9449966293

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45, ಸಂಬಳ: 14500 ಇಎಸ್‌ಐ, ಪಿಎಫ್ ಒಳಗೊಂಡು 3 ಶಿಫ್ಟ್ ಹಾಗೂ ವೀಕ್‌ಆಫ್ ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದು ಕೊಳ್ಳತಕ್ಕದ್ದು, ಸ್ಥಳ: ಸಿಐಪಿಇಟಿ ಕಾಲೇಜ್ ಹತ್ತಿರ, ರಿಂಗ್‌ರೋಡ್, ಮೇಟಗಳ್ಳಿ, ಮೈಸೂರು, ಸಂಪರ್ಕಿಸಿ
9986874584

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು–ವರರಿಗೆ ಶೀಘ್ರ ಕಂಕಣ ಭಾಗ್ಯ ಹಾಗೂ ಉತ್ತಮ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ
www.bhandhana.com
ಡಾ. ಗುರೂಜಿ ಮೈಸೂರು
6361740552, 9448229184

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಕೇರಳ ಕೊಳ್ಳೇಗಾಲ ಜ್ಯೋತಿಷ್ಯರು
ಪಂ॥ ಮೋಹನ್ ಪೊದುವಾಳ್ (ಕೇರಳ)
ಪಂ॥ ಮೋಡಿ ಕೃಷ್ಣಪ್ಪ ಮಾಂತ್ರಿಕರು (ಕೊಳ್ಳೇಗಾಲ)
ಮೊ.: 9036984793
ಇವರು ಕೇರಳ ಮಾಂತ್ರಿಕ ಶಕ್ತಿ ಮತ್ತು ಕೊಳ್ಳೇಗಾಲದ ಮೋಡಿ ಮಾಂತ್ರಿಕ ವಿದ್ಯೆಯಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಬಾಧೇ, ಪ್ರೇತ ಬಾಧೇ ಇನ್ನೂ ಅನೇಕ ಗುಪ್ತ ಜಟಿಲವಾದ ಘೋರ ನಿಗೂಢ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಶತಸಿದ್ಧ. ಖಾಯಂ ವಿಳಾಸ– #1140, ವಿಹಾರ ಮಾರ್ಗ, ಹಳೆ ಹಾಲಿನ ಡೈರಿ ಎದುರು, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ಸಿದ್ಧಾರ್ಥನಗರ, ಮೈಸೂರು – 11.

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ಸಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಬೇಕಾಗಿದ್ದಾರೆ
ಪ್ಯಾಕಿಂಗಾಗಿ ಹೆಂಗಸರು
ವಿಳಾಸ:
ಬಾಲಕೃಷ್ಣ ರೈಸ್ ಕಾರ್ನರ್,
#23 ಎಫ್, ಅಕ್ಕಮಹಾದೇವಿ ರೋಡ್, ಚಾಣಕ್ಯ ಕಲ್ಯಾಣ ಮಂಟಪ ಎದುರು, ವಿಶ್ವೇಶ್ವರನಗರ, ಮೈಸೂರು – 570008
9986756866

ಹೋಲ್‌ಸೇಲ್ ದರದಲ್ಲಿ
ಜೀವಂತ ನಾಟಿ ಕೋಳಿ ಕೆ.ಜಿ. ರೂ.230/–
ಕ್ಲೀನಿಂಗ್ 1 ಕೋಳಿಗೆ ರೂ.20/–

ಗೌಡ್ರು ನಾಟಿಕೋಳಿ ಅಂಗಡಿ
ನಂ.5/1, ಎನ್.ಆರ್. ಮೊಹಲ್ಲಾ, ಉದಯಗಿರಿ ಮುಖ್ಯ ರಸ್ತೆ, ದೊಡ್ಡಮ್ಮತಾಯಿ ಕಲ್ಯಾಣ ಮಂಟಪ ಪಕ್ಕ, ಬಿ.ಬ್ಲಾಕ್, ಗಣೇಶ್‌ನಗರ, ಮೈಸೂರು
ಸಮಯ: ಬೆಳಿಗ್ಗೆ 6 ರಿಂದ ರಾತ್ರಿ 9ರವರೆಗೆ
9448048576 / 9632378020

ಮಳಿಗೆಗಳು ಬಾಡಿಗೆಗೆ ದೊರೆಯುತ್ತದೆ
ಪಿರಿಯಾಪಟ್ಟಣದ ಬಿ.ಎಂ. ರಸ್ತೆಯ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಮಾಲತಿ ಆರ್ಕೇಡ್‌ನಲ್ಲಿ 36x35 ಅಳತೆಯ ಗ್ರೌಂಡ್ ಫ್ಲೋರ್ ಹಾಗೂ 12x35 ಅಳತೆಯ ಫಸ್ಟ್ ಫ್ಲೋರ್‌ನ ಮಳಿಗೆಗಳು ಆಫೀಸ್ ಅಥವಾ ಗೋಡೌನ್‌ಗೆ ಬಾಡಿಗೆಗೆ ದೊರೆಯುತ್ತವೆ. ತಕ್ಷಣವೇ ಸಂಪರ್ಕಿಸಿ:
Mob: 9449679141

ಬೇಕಾಗಿದ್ದಾರೆ
ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ + ಪಿಎಫ್ + ಇಎಸ್‌ಐ ಸೌಲಭ್ಯ ವಿರುತ್ತದೆ. ಸ್ಥಳ: ಹಿನಕಲ್, ಬಲ್ಲಾಳ್ ಮತ್ತು ಹೂಟಗಳ್ಳಿ ಕೈಗಾರಿಕ ಘಟಕ.
7829393555, 9741515239

S.K. Construction
20x30, 2 BHK ಮನೆ ಅತಿ ಉತ್ತಮ ಗುಣಮಟ್ಟದಲ್ಲಿ 90% Loan ಮಾಡಿಸಿ 3D Elevation ಸಹಿತ ಹೊಸ ಮನೆ ಕಟ್ಟಿ ಕೊಡುತ್ತೇವೆ. ಪೋಲೀಸ್ ಲೇಔಟ್ ಮತ್ತು ಇಲವಾಲದಲ್ಲಿ.
Mob: 9620528490

HOUSE FOR LEASE
20x30, 2 BHK, ground floor at 29th Main Road, Police Booth, J.P. Nagar, Mysore.
Contact:
9480642986, 8050262566

MNC CALLS FOR HIRING AGENCY MANAGERS IN MYSORE
Candidates desiring to earn at free time. Opportunity for House wife, Retired / VRS Persons, Self Employed only. Minimum Qualification Should have passed SSLC and above. Entry age Min. 25 years. For more details call:
9448056189 / 7892192626

2BHK FOR RENT
30x40 NEW INDEPENDENT
N / Face Police Layout
3rd Stage / IPS Nagara, Close to Ring Rd
7337722182

FOR SALE
1) 30x40 - 12 Lakhs, 30x50 - 15 L sites available, attach Brahmins 'E' Block Layout. (2) 12x36 G+2 house, Kuvempunagar. 28 guntas land in Varakodu. (3) 30x40 Advocates Layout, Bannur Road. (4) 30x40 - 10 Lakhs Hunsur Road. (5) 30x40 - 20 Lakhs Dadadahalli (JP Nagar).
PRAKRUTHI PROPERTIES
9035990359, 9538690359

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರಿ ನಾಲ್ವರ ದೈವ ಚೌಡಪ್ಪ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary
+ 10,000/- Incentive
8884171888

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಸದ್ವಿದ್ಯ ಕಾಲೇಜು ಮತ್ತು ಜಗನ್‌ಮೋಹನ ಪ್ಯಾಲೇಸ್ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 15,000/– ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620667819
9880727819

ಡ್ರೈವರ್ಸ್ ಮತ್ತು ಲೋಡರ್ಸ್ ಯಾದವಗಿರಿ ಕೈಗಾರಿಕಾ ಎಸ್ಟೇಟ್‌ನಲ್ಲಿ ಕಮರ್ಷಿಯಲ್ ವಾಹನಕ್ಕೆ ಬೇಕಾಗಿದ್ದಾರೆ.
9448664411

ಕಳೆದಿದೆ
ಜಗದೀಶ್ ಮತ್ತು ನಯನಾ.ಕೆ.ಎಸ್. ಇವರಿಗೆ ಸೇರಿದ ನಿವೇಶನ ಸಂಖ್ಯೆ –10 ಸ್ಪ್ರಿಂಗ್ ವಿಲ್ಲೆ ಲೇಔಟ್, ಬೋಗಾದಿ ಈ ವಿಳಾಸದ ಕಪಿಲ್ ಖನ್ನಾ ಎಂಬ ಹೆಸರಿನ ಖಾತಾ ಸಂಖ್ಯೆ – 22801/18–19 ಈ ದಾಖಲಾತಿ ಕಳೆದುಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ
9538755945

ಶ್ರೀ ಚಾಮುಂಡೇಶ್ವರಿ ಸ್ಟೋನ್ ಕ್ರಷರ್ ಮತ್ತು ಎಂ.ಸ್ಯಾಂಡ್
ಇಂಡಸ್ಟ್ರೀಸ್, 179/1, ಹಿಂಕಾಟಿ – ಗುಂಡ್ಲುಪೇಟೆ ತಾ॥
ಉತ್ತಮ ಗುಣಮಟ್ಟದ

M Sand Single Wash	- 650/- Par ton
20 mm Jelly	- 600/- Par ton
40 mm Jelly	- 600/- Par ton
Dust	- 575/- Par ton

9448187125

RENT AND LEASE AT MYSORE
1) 30X50 3BHK Duplex, 25000 2BHK 15000, 12000, 13500, 10,000 Lease 12 L Vijayanaga 4th Stage. 2) 30x40 2BHK independent 16000 GF 13500, 14000, 15000 Lease 12 L, 17L, 15L, 9 L Vijaynagara 3rd Stage Bogadi. 3) 30x40 3BHK Duplex Veg 22000, 40x50 25000 3BHK Nivedithanagara. 4) 30x40 2BHK GF 15 L Lease Rent 15000 Dattagalli, Roopanagar 10 L Lease. Visiting Charge 300 Rs. CSC Contact: Mohan MMP
8453771295 / 9449403021

SHOP FOR RENT
10x17 Sqft 2 Shops, No Restroom, No water Facilities, Near Water Tank Circle, Vijayanagar, 2nd Stage, Near SBI, House No.5181. (Brokers Excuse)
9591960840
9845582527

HOUSE FOR SALE
27x40, MUDA, 3BHK Duplex House, North East Corner, 3 years Old House, Fully Furnished, at Vijayanagar 4th Stage, Mysuru - Price 1.20 Cr.
33x40, MUDA Allotted, 2BHK Single Floor House, East Facing, 8 Years Old House, Dattagalli, Mysuru - Price 98 Lakhs
8660105902

SITES FOR SALE
30x40 Sites
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.
8660105902

ಕಳೆದಿದೆ
ಶ್ರೀಮತಿ ಎಸ್.ಅನುಸೂಯ ಕೋಂ ಲೇ॥ ಎಸ್. ಶಿವಪ್ರಕಾಶ್, ಮೈಸೂರು ಸಿಟಿ, ವಿಜಯನಗರ 2ನೇ ಹಂತ, 20ನೇ ಮೇನ್, 7ನೇ ಕ್ರಾಸ್, ಮನೆ ನಂ. ಎಲ್‌ಐಜಿ 3790 ರಲ್ಲಿ ವಾಸವಾಗಿರುತ್ತೇನೆ. ಈ ಮನೆಯು ಮಂಜೂರಾಗಿರುತ್ತದೆ. ಇದರ ಮೂಲ ಮಂಜೂರಾತಿ ಪತ್ರವು 15 ದಿನಗಳ ಹಿಂದೆ ಬಸ್ಸಿನಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕಿದಲ್ಲಿ ಕೆಳಕಂಡ ದೂರವಾಣಿಗೆ ತಿಳಿಸಬೇಕೆಂದು ಕೋರುತ್ತೇನೆ.
9448601596

HOUSE FOR RENT
2BHK G/F, N/F House in B.K.R. Rd. Chamarajapuram (Near Naveen Health Care) for Vegetarian only
9880440179 / 9342103926
9880185802

FARM LAND FOR SALE
2.5 Acres General Property Suitable for Farm House or Dairy, Sheep, Poultry etc., with good water TAR Road Just 5 kms from Nanjangud Temple. Final 75 Lacs (2.5 Acres) Brokers Excuse
9113036910

WANTED
PU Female Office Asst. @ Saraswathipuram, Kamakshi Hospital Road, Near Kuvempu School, Mysore
9342125252

ಜಮೀನು ಮಾರಾಟಕ್ಕಿದೆ
ಮೈಸೂರು ತಾ., ಜಯಪುರ ಹೋ., ಮಾದೂರು, ಮಾದುರಹುಂಡಿ ಗ್ರಾಮಗಳಲ್ಲಿ 35 ಗುಂಟೆ ಹಾಗೂ 1 ಎಕರೆ 38 ಗುಂಟೆ ಹಾಗೂ 1 ಎಕರೆ 35 ಗುಂಟೆ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9945661696 / 8618848886

ಸೈಟು ಬೇಕಾಗಿದೆ
ಸಪ್ತಮಾತೃಕ ಲೇಔಟ್
30x40, 40x60, 30x50
ಬಿ ವಲಯ
30x40, 40x60
9901772178

ಸುವರ್ಣ ಯಾತ್ರ
2 ಜ್ಯೋತಿರ್ಲಿಂಗ ದರ್ಶನದೊಂದಿಗೆ ಮಧ್ಯಪ್ರದೇಶ ಪ್ರವಾಸ 4 ದಿನಗಳು 12/12/22, ಓಂಕಾರೇಶ್ವರ, ಮಹಾಕಾಳೇಶ್ವರ, ಮಂಡೋವ್ ಕೋಟೆ, ರಾಣಿ ಅಹಲ್ಯದೇವಿ ಕೋಟೆ, ಇಂದೋರ ಹಾಗೂ ಉಜ್ಜಯಿನಿ ಇತರೆ ಸ್ಥಳಗಳು.
4 ದಿನಗಳ ಪುರಿ ಭುವನೇಶ್ವರ ಹಾಗೂ ಕೊನಾರ್ಕ್ ಪ್ರವಾಸ 13/12/22. ಮಾ ಬಿರಾಜ ಶಕ್ತಿ ಪೀಠ, ಸೂರ್ಯ ದೇವಸ್ಥಾನ, ಸಾಕ್ಷಿ ಗೋಪಾಲ್ ಹಾಗೂ ಇತರೆ ಸ್ಥಳಗಳು 4 ದಿನಗಳು
9019462508

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.
9740733021 / 9535028750

HOUSE FOR SALE
East Phase Ground Floor 2 BHK, 1st Floor 2BHK, LBS Nagar, Mysore
9972828808
8310795322

ಸೈಟ್ ಬೇಕಾಗಿದೆ / ಮನೆ ಮಾರಾಟಕ್ಕೆ ಮತ್ತು ಬಾಡಿಗೆ / ಭೋಗ್ಯಕ್ಕೆ ಇದೆ
ದೇವನೂರು ಸಾತಗಳ್ಳಿ ಹೆಲ್ತ್ ಪಿ.ಎನ್.ಟಿ, ಡಿ.ಟಿ.ಎಸ್ ರಾವ್ ನಗರ ಬಡಾವಣೆಯಲ್ಲಿ ಎಲ್ಲಾ ಅಳತೆಯ ಸೈಟ್ ಬೇಕಾಗಿದೆ. 14x30 ಅಳತೆಯ 2 ಫ್ಲೋರ್ ಮನೆ ಹೆಬ್ಬಾಳು ಸುಬ್ರಮಣ್ಯನಗರದಲ್ಲಿ ಮಾರಾಟಕ್ಕಿದೆ. ಬನ್ನಿಮಂಟಪ ಮತ್ತು ಎನ್.ಆರ್.ಮೊಹಲ್ಲಾದಲ್ಲಿ ಭೋಗ್ಯಕ್ಕೆ ಮತ್ತು ಬಾಡಿಗೆಗೆ ಮನೆಗಳು ಇದೆ. ಸಂಪರ್ಕಿಸಿ: ಶಿವಪ್ಪ
9141050266

Life Partner ಆಗಲು Govt. Job ಇರುವ ವಿಚ್ಛೇದಿತಗೆ ವರ ಬೇಕಾಗಿದ್ದಾರೆ
ಲಿಂಗಾಯತ 44/ 5.5 / B.A, BA, B.Ed Govt. Job, Salary 50,000/- Independent Well settled ಇರುವಂತಹ ವಿಚ್ಛೇದಿತೆಗೆ 2ನೇ ಸಂಬಂಧಕ್ಕೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ ವಿಧುರ / ವಿಚ್ಛೇದಿತ / ನೌಕರಸ್ಥ / ವ್ಯಾಪಾರಸ್ಥ ವರ ಬೇಕಾಗಿದ್ದಾರೆ. (ಮಕ್ಕಳಿದ್ದರೂ ಪರವಾಗಿಲ್ಲ). ಮೈಸೂರು
8310546187

WANTED IMMEDIATELY
Female Therapist, Beautician and Receptionist with Good Looking, Experience or Fresher immediately Appoinment. Salary upto 15,000. Contact:
7090655790

ಬೇಕಾಗಿದ್ದಾರೆ
ಶ್ರೀರಂಗ ಭಾರತ್ ಗ್ಯಾಸ್‌ಗೆ ಸಿಲಿಂಡರನ್ನು ವಿತರಿಸಲು ವಾಹನ ಹೊಂದಿರುವ (Auto) ವಿತರಕರು (Delivery Boy) ಹಾಗೂ ಗೋಡೌನ್‌ನಲ್ಲಿ ಕೆಲಸ ಮಾಡಲು ಗೋಡೌನ್ ಕೀಪರ್ (ಹುಡುಗರು) ಬೇಕಾಗಿದ್ದಾರೆ. ಆಸಕ್ತಿಯುಳ್ಳವರು. ಕೂಡಲೇ ಸಂಪರ್ಕಿಸಿ
9341384442 / 7353010338

WANTED
A Leading Two Wheeler Service Chain Requires Direct Sales Executives. Salary: 16,000 + Incentives.
9986609277

ಬೇಕಾಗಿದ್ದಾರೆ
ಚಿಕ್ಕ ಚಿಕ್ಕ ಮಕ್ಕಳುಗಳನ್ನು ನೋಡಿಕೊಳ್ಳುವವರು ಮತ್ತು ಅಡುಗೆ ಕೆಲಸಕ್ಕೆ ಕೆಲಸದವರು ಬೇಕಾಗಿದ್ದಾರೆ ಉಚಿತ ವಸತಿ ಊಟ ಇರುತ್ತದೆ. ಸಂಪರ್ಕಿಸಿ.
ಶ್ರೀ ಛಾಯಾದೇವಿ ದತ್ತು ಕೇಂದ್ರ, ಚಿಕ್ಕಹರದನಹಳ್ಳಿ, ಜಯನಗರ, ಮೈಸೂರು.
8618770716

ಮಳಿಗೆ ಬಾಡಿಗೆಗೆ
ಆಫೀಸ್‌ಗಳಿಗೆ, ಕ್ಲಿನಿಕ್‌ಗೆ, ಬಿಲ್ಡರ್ಸ್‌ಗಳಿಗೆ, ಬೋಟಿಕ್‌ಗೆ, ಆಡಿಟರ್‌ಗಳಿಗೆ ಸೂಕ್ತವಾಗಿರುವ ಮಳಿಗೆ ಮಾರುತಿ ಟೆಂಪಲ್ ಎದುರು ಗಂಗೋತ್ರಿ ಲೇಔಟ್‌ನಲ್ಲಿ ಇದೆ. ಆಸಕ್ತರು ಸಂಪರ್ಕಿಸಿ.
9844045409

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ 250 ಹುಡುಗರು ಇರುವ ಹಾಸ್ಟಲ್‌ಗೆ ಹೆಡ್ ಕುಕ್ ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ
9380394364

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ರಸಿದ್ಧ ಕಂಪನಿಗಳಿಗೆ SSLC, PUC, ITI ಪಾಸ್ ಆದ ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಕೂಡಲೇ ಸಂಪರ್ಕಿಸಿ.:
9148833780
6360740198

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಟ ಓದು / ಬರಹ ಗೊತ್ತಿರಬೇಕು. ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117


ಹೊಸ ಮನೆ ಮಾರಾಟಕ್ಕಿದೆ
1,400 ಅಡಿ ಹಾಗೂ
ಸೈಟುಗಳು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ಮೈಸೂರು ಮಿತ್ರ 43 – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮಂಡ್ಯ ಕ್ಷೇತ್ರದ ಟಿಕೆಟ್‌ಗಾಗಿ ಜೆಡಿಎಸ್, 'ಕೈ'ನಲ್ಲಿ ತೀವ್ರ ಪೈಪೋಟಿ

● ಟಿಕೆಟ್ ಆಕಾಂಕ್ಷಿಗಳಿಂದ ಮತದಾರರಿಗೆ ಧರ್ಮಸ್ಥಳ ಯಾತ್ರೆ ● ಜೆಡಿಎಸ್‌ನಲ್ಲಿ ರಾಮಚಂದ್ರು, ವಿಜಯಾನಂದ ನಡುವೆ ಪೈಪೋಟಿ ● ಕಾಂಗ್ರೆಸ್ ಟಿಕೆಟ್‌ಗಾಗಿ 13 ಮಂದಿ ಅರ್ಜಿ ● ಬಿಜೆಪಿಯಿಂದ ಕಣಕ್ಕೆ



✍...ಎಂ.ಕೆ.ಮೋಹನ್‌ರಾಜ್

ಮಂಡ್ಯ, ನ.18– 2023ರ ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಉಳಿದಿದ್ದು, ಈಗಾಗಲೇ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಕಾವು ರಂಗೇರಿದೆ.

ಜೆಡಿಎಸ್ ಮತ್ತು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ಈಗಾಗಲೇ ಮತದಾರರಿಗೆ ಧರ್ಮಸ್ಥಳ ಪ್ರವಾಸ ಮಾಡಿಸುತ್ತಿದ್ದಾರೆ. ಒಟ್ಟಾರೆ ಧರ್ಮಸ್ಥಳದ ಮಂಜುನಾಥನ ಆಶೀರ್ವಾದ ಯಾರ ಮೇಲಿದೆ ಎಂಬುದು ತಿಳಿಯದಾಗಿದ್ದು, 2 ಪಕ್ಷದಿಂದ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಮಂಡ್ಯ ಕ್ಷೇತ್ರದ ಜೆಡಿಎಸ್ ಟಿಕೆಟ್ ಮೇಲೆ ಕಣ್ಣಿಟ್ಟಿರುವ ಮನ್‌ಮುಲ್ ಅಧ್ಯಕ್ಷ ಬಿ.ಆರ್. ರಾಮಚಂದ್ರು ಕಳೆದ 5 ತಿಂಗಳಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಮತದಾರರನ್ನು ಧರ್ಮಸ್ಥಳ ಯಾತ್ರೆಗೆ ಕರೆದೊಯ್ದಿದ್ದಾರೆ. ಮತ್ತೋರ್ವ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಹಾಲಿ ಶಾಸಕ ಎಂ. ಶ್ರೀನಿವಾಸ್ ಅಳಿಯ ಯೋಗೇಶ್ ಕಳೆದ ಒಂದೂವರೆ ತಿಂಗಳಿಂದ ಮತದಾರರನ್ನು ಧರ್ಮಸ್ಥಳ ಯಾತ್ರೆಗೆ ಕರೆದೊಯ್ಯುತ್ತಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಗಣಿಗ ರವಿಕುಮಾರ್ ಸಹ ಮತದಾರರಿಗಾಗಿ ಧರ್ಮಸ್ಥಳ ಯಾತ್ರೆ ಆರಂಭಿಸಿದ್ದು, ಮತದಾರರನ್ನು ಸೆಳೆಯಲು ಆಕಾಂಕ್ಷಿಗಳ ಧರ್ಮಸ್ಥಳ ಧರ್ಮಯಾತ್ರೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

13 ಮಂದಿ ಪೈಕಿ 'ಕೈ' ಟಿಕೆಟ್ ಯಾರಿಗೆ?: ಕೇವಲ ಜೆಡಿಎಸ್‌ನಲ್ಲಿ ಮಾತ್ರ ಟಿಕೆಟ್‌ಗಾಗಿ ಪೈಪೋಟಿ ಇದ್ದು, ಕಾಂಗ್ರೆಸ್‌ನಲ್ಲಿ ಅಷ್ಟಾಗಿ ಸದ್ದು ಕೇಳಿ ಬರುತ್ತಿಲ್ಲ ಎನ್ನುವ ಸಂದರ್ಭದಲ್ಲೇ ಮಂಡ್ಯದಿಂದ ಕಾಂಗ್ರೆಸ್ ಟಿಕೆಟ್ ಪಡೆಯಲು ಒಂದಲ್ಲಾ ಎರಡಲ್ಲ ಬರೋಬ್ಬರಿ 13 ಮಂದಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ.

ಕಳೆದ ಚುನಾವಣೆ ಪರಾಜಿತ ಅಭ್ಯರ್ಥಿ ಗಣಿಗ ರವಿಕುಮಾರ್‌ಗೌಡ, ಕ್ಷೇತ್ರದಲ್ಲಿ 3 ಬಾರಿ ಶಾಸಕರಾಗಿದ್ದ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮಾಜಿ ಶಾಸಕ ಹೆಚ್.ಬಿ.ರಾಮು, ಕೀಲಾರ ರಾಧಾಕೃಷ್ಣ, ಖ್ಯಾತ ವೈದ್ಯ ಡಾ.ಕೃಷ್ಣ, ಮನ್‌ಮುಲ್ ನಿರ್ದೇಶಕ ಉಮ್ಮಡಹಳ್ಳಿ ಶಿವಪ್ಪ, ಅಂಬರೀಶ್ ಆಪ್ತ ಅಮರಾವತಿ ಚಂದ್ರಶೇಖರ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಎಂ.ಎಸ್.ಚಿದಂಬರ್, ಕಾಂಗ್ರೆಸ್ ಹಿರಿಯ ಮುಖಂಡ ಸಿದ್ದಾರೂಢ ಸತೀಶ್‌ಗೌಡ, ಸಿಟಿ ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕ ಹಾಲಹಳ್ಳಿ ಅಶೋಕ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ನಗರಸಭೆ ಸದಸ್ಯ ರಾಮಲಿಂಗಯ್ಯ, ಕಾಂಗ್ರೆಸ್ ಮುಖಂಡ ಹನಕೆರೆ ಶಿವರಾಮ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ.

ಈ ಪೈಕಿ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಿರುವವರು ಗಣಿಗ ರವಿಕುಮಾರ್, ಆತ್ಮಾನಂದ, ಕೀಲಾರ ರಾಧಾಕೃಷ್ಣ, ಡಾ.ಕೃಷ್ಣ, ಅಮರಾವತಿ ಚಂದ್ರಶೇಖರ್ ಹಾಗೂ ಉಮ್ಮಡಹಳ್ಳಿ ಶಿವಪ್ಪ ಮಾತ್ರ. ಕಳೆದ ಚುನಾವಣೆಯಲ್ಲಿ ಸೋತಿರುವ ಕಾರಣ ತನಗೇ ಟಿಕೆಟ್ ನೀಡಬೇಕೆಂದು ರವಿಕುಮಾರ್ ಜಿಲ್ಲಾ ನಾಯಕ ಚಲುವರಾಯಸ್ವಾಮಿ ಮೂಲಕ ಸಿದ್ದರಾಮಯ್ಯ ಮೇಲೆ ಒತ್ತಡ ಹೇರುತ್ತಾ ಅಧಿಕಾರ ಇಲ್ಲದಿದ್ದರೂ, ಕ್ಷೇತ್ರದಲ್ಲಿ ಚುರುಕಿನಿಂದ ಓಡಾಡುತ್ತಿದ್ದಾರೆ. ಮತ್ತೊಂದೆಡೆ ಮಾಜಿ ಸಚಿವ ಎಂ.ಎಸ್. ಆತ್ಮಾನಂದ ಸತತವಾಗಿ ನನಗೆ 3 ಬಾರಿ ಟಿಕೆಟ್ ಕೈತಪ್ಪಿದ್ದು, ಈ ಬಾರಿ ಬಹುತೇಕ ನನ್ನ ಕೊನೆ ಚುನಾವಣೆಯಾಗಿರುವುದರಿಂದ ಟಿಕೆಟ್ ಕೊಡಿ ಎಂದು ಕೈ ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ.

> **ರೈತ ಸಂಘ, ಆಪ್‌ನಿಂದಲೂ ಕಣಕ್ಕೆ**
>
> ಪ್ರಮುಖ 3 ಪಕ್ಷಗಳ ಜೊತೆಗೆ ರೈತ ಸಂಘದಿಂದ ಮಧು ಚಂದನ್ ಕಣಕ್ಕಿಳಿಯಲಿದ್ದು, ರೈತ ಸಂಘ ಈಗಾಗಲೇ ಅಭ್ಯರ್ಥಿ ಹೆಸರನ್ನು ಅಂತಿಮಗೊಳಿಸಿದೆ. ಆಮ್ ಆದ್ಮಿ ಪಕ್ಷ ಬೂದನೂರು ಬೊಮ್ಮಯ್ಯ ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಇದ್ದು, ರೈತ ಸಂಘದ ಮಧುಚಂದನ್ ಹಾಗೂ ಬೂದನೂರು ಬೊಮ್ಮಯ್ಯ, ತಮ್ಮ ವ್ಯಾಪ್ತಿಯಲ್ಲಿ ಸಂಘಟನೆ ಮಾಡುವುದರಲ್ಲಿ ನಿರತರಾಗಿದ್ದಾರೆ.
>
> ಒಟ್ಟಾರೆ ರಾಜಕೀಯ ಜಿದ್ದಾಜಿದ್ದಿಗೆ ಹೆಸರುವಾಸಿಯಾಗಿರುವ ಸಕ್ಕರೆ ನಾಡು ಮಂಡ್ಯದಲ್ಲಿ ಚುನಾವಣಾ ಕಾವು ಈಗಾಗಲೇ ರಂಗೇರಿದ್ದು, ಮೂರು ಪಕ್ಷದಿಂದ ಅಭ್ಯರ್ಥಿಗಳ ಹೆಸರು ಅಧಿಕೃತ ಘೋಷಣೆಯಾದ ಬಳಿಕ ಚುನಾವಣೆಯ ರಂಗು ಮತ್ತಷ್ಟು ಏರಲಿದೆ.

ಇನ್ನು ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬರುತ್ತಿರುವ ಕೀಲಾರ ರಾಧಾಕೃಷ್ಣ ಸಹ ಅರ್ಜಿ ಸಲ್ಲಿಸಿ, ಡಿಕೆಶಿ, ಸಿದ್ದುಗೆ ಒತ್ತಡ ಹೇರಿ, ಕ್ಷೇತ್ರದಾದ್ಯಂತ ಸಂಘಟನೆಯಲ್ಲಿ ತೊಡಗಿದ್ದರೆ, ವೈದ್ಯ ಡಾ.ಕೃಷ್ಣ, ಮಂಡ್ಯದಲ್ಲಿ ಹೈಟೆಕ್ ಕಾಂಗ್ರೆಸ್ ಕಚೇರಿ ತೆರೆದು ಟಿಕೆಟ್ ನನಗೆ ಸಿಗಲಿದೆ ಎಂಬ ನಿರೀಕ್ಷೆಯಿಂದ ಸಂಘಟನೆಯಲ್ಲಿ ತೊಡಗಿದ್ದಾರೆ. ಇನ್ನು ಅಂಬರೀಶ್ ಆಪ್ತ, ಉದ್ಯಮಿ ಅಮರಾವತಿ ಚಂದ್ರಶೇಖರ್ ಸಹ ಟಿಕೆಟ್‌ಗಾಗಿ ಡಿಕೆಶಿ ಮೂಲಕ ಒತ್ತಡ ಹೇರುತ್ತಿದ್ದು, ಮನ್‌ಮುಲ್ ನಿರ್ದೇಶಕ ಉಮ್ಮಡಹಳ್ಳಿ ಶಿವಪ್ಪ ತಮ್ಮ ಹುಟ್ಟುಹಬ್ಬವನ್ನು ಲಕ್ಷಾಂತರ ರೂ. ಖರ್ಚು ಮಾಡಿ ಆಚರಿಸಿಕೊಳ್ಳುವ ಮೂಲಕ ತಾನು ಸಹ ಟಿಕೆಟ್ ಆಕಾಂಕ್ಷಿ ಎಂದು ಶಕ್ತಿ ಪ್ರದರ್ಶನ ಮಾಡಿದ್ದಾರೆ. ಇದಲ್ಲದೇ ಪ್ರಮುಖ ಟಿಕೆಟ್ ಆಕಾಂಕ್ಷಿಗಳಾಗಿರುವ ಗಣಿಗ ರವಿಕುಮಾರ್ ಹಾಗೂ ಆತ್ಮಾನಂದ ಟಿಕೆಟ್ ಕೊಡುವ ಸಂದರ್ಭ ತಮ್ಮ ಪರದನಿ ಎತ್ತಲಿ ಎನ್ನುವ ಕಾರಣಕ್ಕೆ ತಮ್ಮ ಕೆಲ ಅತ್ಯಾಪ್ತರನ್ನು ಸಹ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸುವಂತೆ ನೋಡಿಕೊಂಡಿದ್ದಾರೆ.

ಜೆಡಿಎಸ್ ಟಿಕೆಟ್‌ಗಾಗಿ ಪೈಪೋಟಿ: ಹಾಲಿ ಶಾಸಕ ಎಂ.ಶ್ರೀನಿವಾಸ್ ಅವರಿಗೆ ಅನಾರೋಗ್ಯದ ಕಾರಣ ಟಿಕೆಟ್ ಸಿಗಲ್ಲ ಎಂಬ ಕಾರಣಕ್ಕೆ ಟಿಕೆಟ್ ಪಡೆಯಲು ಹಲವರ ನಡುವೆ ಪೈಪೋಟಿ ಕಂಡು ಬರುತ್ತಿದೆ.

ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ನಿತ್ಯ ಸಚಿವ ಕೆ.ವಿ.ಶಂಕರಗೌಡರ ಮೊಮ್ಮಗ ಹಾಗೂ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಹಾಲಿ ಶಾಸಕ ಎಂ.ಶ್ರೀನಿವಾಸ್ ಅಳಿಯ ಹಾಗೂ ಜಿಪಂ ಮಾಜಿ ಸದಸ್ಯ ಯೋಗೇಶ್, ಜಿಲ್ಲಾ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ನಡುವೆ ಟಿಕೆಟ್‌ಗಾಗಿ ಪೈಪೋಟಿ ಇದೆ. ಈ ಪೈಕಿ ಬಿ.ಆರ್. ರಾಮಚಂದ್ರು ಹಾಗೂ ಕೆ.ಎಸ್.ವಿಜಯಾನಂದ ನಡುವೆ ಟಿಕೆಟ್‌ಗಾಗಿ ನೇರ ಹಣಾಹಣಿ ಏರ್ಪಟ್ಟಿದ್ದರೆ, ಶಾಸಕ ಎಂ.ಶ್ರೀನಿವಾಸ್ ಮಾತ್ರ ನನಗೆ ಟಿಕೆಟ್ ಸಿಗದಿದ್ದರೆ ನನ್ನ ಅಳಿಯ ಯೋಗೇಶ್‌ಗೆ ಕೊಡಬೇಕೆಂದು ಪಟ್ಟು ಹಿಡಿದಿದ್ದಾರೆ.

ಇನ್ನು ಚುನಾವಣೆಗೆ ಆರ್ಥಿಕ ಶಕ್ತಿ ಮಾನದಂಡವಾಗಿರುವುದರಿಂದ ಈ ಪೈಕಿ ಬಿ.ಆರ್. ರಾಮಚಂದ್ರು ಮುಂದಿದ್ದು, ಮಂಡ್ಯ ವಿಧಾನಸಭಾ ಕ್ಷೇತ್ರದ ಸಾವಿರಾರು ಸರ್ಕಾರಿ ಶಾಲೆ ಮಕ್ಕಳಿಗೆ ಉಚಿತ ಬ್ಯಾಗ್ ಹಂಚಿ, ಮತದಾರರಿಗೆ ಧರ್ಮಸ್ಥಳ ಯಾತ್ರೆ ಮಾಡಿಸುವ ಜೊತೆಗೆ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಹಾಗೂ ಮಳೆಯಿಂದ ಹಾನಿಗೊಳಗಾದ ಕುಟುಂಬಕ್ಕೆ ಆರ್ಥಿಕ ಧನ ಸಹಾಯ ಮಾಡಿದ್ದಾರೆ. ಇನ್ನು ಕೆ.ಎಸ್.ವಿಜಯಾನಂದ ತನ್ನ ತಾತ ನಿತ್ಯ ಸಚಿವ ಶಂಕರಗೌಡರು ಕೊಟ್ಟ ಕೊಡುಗೆ, ಅವರ ಹೆಸರಿನ ಜೊತೆಗೆ ಸರಳ ಸಜ್ಜನಿಕೆ ಹಾಗೂ ಕುಟುಂಬಕ್ಕೆ ರಾಜಕೀಯವಾಗಿ ಹೆಚ್ಚಿನ ಅಧಿಕಾರ ಸಿಕ್ಕಿಲ್ಲ ಎಂಬ ಅನುಕಂಪದ ಮಾನದಂಡದಡಿ ಚುನಾವಣೆಗೆ ತಯಾರಿ ನಡೆಸಿದ್ದಾರೆ. ಇತ್ತ ಶಾಸಕ ಶ್ರೀನಿವಾಸ್ ಅಳಿಯ ಯೋಗೇಶ್ ಮಾವನಿಗೆ ಕೈ ತಪ್ಪುವ ಟಿಕೆಟ್ ನನಗೆ ಕೊಡಿ ಎಂದು ಪಟ್ಟು ಹಿಡಿದಿದ್ದಾರೆ.

ಮಂಡ್ಯ ಕ್ಷೇತ್ರದ ಟಿಕೆಟ್‌ಗಾಗಿ ಪೈಪೋಟಿ ಹೆಚ್ಚಾದ್ದರಿಂದ 3 ಪ್ರಮುಖ ಅಭ್ಯರ್ಥಿಗಳೊಂದಿಗೆ ಸಭೆ ನಡೆಸಿದ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಪಕ್ಷ ಯಾರಿಗೆ ಟಿಕೆಟ್ ನೀಡಿದರೂ ಒಗ್ಗಟ್ಟಾಗಿ ಹೋಗಬೇಕು. ಟಿಕೆಟ್ ನೀಡುವ ಅಭ್ಯರ್ಥಿ ಗೆಲ್ಲಿಸಬೇಕೆಂದು ಸೂಚಿಸಿ, ಗೊಂದಲಕ್ಕೆ ಆಸ್ಪದ ನೀಡಿದಂತಾಗುತ್ತದೆ ಎಂದು ಧರ್ಮಸ್ಥಳ ಧರ್ಮಯಾತ್ರೆ ನಿಲ್ಲಿಸುವಂತೆ ಸೂಚಿಸಿದ್ದರಿಂದ ಯಾತ್ರೆಯನ್ನು ಎಲ್ಲಾ ಆಕಾಂಕ್ಷಿತರು ನಿಲ್ಲಿಸಿ, ಇದೀಗ ತೆರೆಮರೆಯಲ್ಲಿ ಟಿಕೆಟ್ ಪಡೆಯಲು ಭರ್ಜರಿ ಕಸರತ್ತು ಆರಂಭಿಸಿದ್ದಾರೆ.

ಬಿಜೆಪಿ: ಬಿಜೆಪಿಯಿಂದ ಕಳೆದ ವಿಧಾನಸಭಾ ಚುನಾವಣೆ ಪರಾಜಿತ ಅಭ್ಯರ್ಥಿ, ಜಿಪಂ ಮಾಜಿ ಸದಸ್ಯ ಚಂದಗಾಲು ಶಿವಣ್ಣ ಮತ್ತು ಮಾಜಿ ಸಚಿವ ಎಸ್.ಡಿ.ಜಯರಾಂ ಪುತ್ರ ಹಾಗೂ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ ನಡುವೆ ಪೈಪೋಟಿ ಇದ್ದರೆ, ಪಕ್ಷ ಸಂಘಟನೆಯಲ್ಲಿ ತೊಡಗಿರುವ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್ ಅವರೂ ಸಹ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ.

ಕಂದಾಯ ಸಚಿವ ಆರ್.ಅಶೋಕ್ ಮಂಡ್ಯ ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ಎಂದು ಈಗಾಗಲೇ ಘೋಷಿಸಿದ್ದಾರೆ. ಕಳೆದ ಚುನಾವಣೆ ಪರಾಜಿತ ಅಭ್ಯರ್ಥಿ ಚಂದಗಾಲು ಶಿವಣ್ಣ, ಜಿಲ್ಲಾ ವಕ್ತಾರ ಸಿ.ಟಿ.ಮಂಜುನಾಥ್ ಸಹ ಟಿಕೆಟ್ ಬೇಕೆಂದು ಕೇಳುತ್ತಿದ್ದಾರೆ. ಬಿಜೆಪಿ ನಾಯಕರು ಯಾರಿಗೆ ಟಿಕೆಟ್ ಕೊಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.

ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕರ ವಿವರ

ವರ್ಷ	ಶಾಸಕರ ಹೆಸರು	ಪಕ್ಷ
1957	ಜಿ.ಎಸ್.ಬೊಮ್ಮೇಗೌಡ	ಪಕ್ಷೇತರ
1962	ಜೆ.ದೇವಯ್ಯ	ಪಕ್ಷೇತರ
1967	ನಾಗಪ್ಪ	ಕಾಂಗ್ರೆಸ್
1972	ಎಂ.ಎಚ್.ಬೋರಯ್ಯ	ಕಾಂಗ್ರೆಸ್
1978	ಎಂ.ಎಸ್.ಆತ್ಮಾನಂದ	ಕಾಂಗ್ರೆಸ್
1983	ದೊಡ್ಡಬೋರೇಗೌಡ	ಜನತಾಪಕ್ಷ
1985	ಎಸ್.ಡಿ.ಜಯರಾಂ	ಜನತಾಪಕ್ಷ
1989	ಎಂ.ಎಸ್.ಆತ್ಮಾನಂದ	ಕಾಂಗ್ರೆಸ್
1994	ಎಸ್.ಡಿ.ಜಯರಾಂ	ಜನತಾದಳ
1998	ಪ್ರಭಾವತಿ ಜಯರಾಂ	ಜನತಾದಳ (ಉಪಚುನಾವಣೆ)
1999	ಎಂ.ಎಸ್.ಆತ್ಮಾನಂದ	ಕಾಂಗ್ರೆಸ್
2004	ಎಂ.ಶ್ರೀನಿವಾಸ್	ಜೆಡಿಎಸ್
2008	ಎಂ.ಶ್ರೀನಿವಾಸ್	ಜೆಡಿಎಸ್
2013	ಡಾ.ಅಂಬರೀಶ್	ಕಾಂಗ್ರೆಸ್
2018	ಎಂ.ಶ್ರೀನಿವಾಸ್	ಜೆಡಿಎಸ್

ಇಂದು ಕನ್ನಡ ಹಬ್ಬ, ಅಂಬಿ ಸ್ಮರಣೋತ್ಸವ



ಶ್ರೀರಂಗಪಟ್ಟಣ, ನ.18– ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಾಲಯದ ಮೈದಾನದಲ್ಲಿ ನ.19ರಂದು ಎನ್.ಶಂಕರೇಗೌಡ ಚಾರಿಟಬಲ್ ಟ್ರಸ್ಟ್‌ನಿಂದ ಕನ್ನಡ ಹಬ್ಬ ಮತ್ತು ಅಂಬಿ ಸ್ಮರಣೋತ್ಸವ ಆಯೋಜಿಸಲಾಗಿದೆ ಎಂದು ಯುವ ಮುಖಂಡ ಇಂಡುವಾಳು ಸಚ್ಚಿದಾನಂದ ತಿಳಿಸಿದರು.

ದೇವಾಲಯದ ಮೈದಾನದಲ್ಲಿ ನಿರ್ಮಾಣವಾಗುತ್ತಿರುವ ಬೃಹತ್ ವೇದಿಕೆ ವೀಕ್ಷಿಸಿ ಮಾತನಾಡಿದ ಅವರು, ಸಂಜೆ 5 ಗಂಟೆಗೆ ಖ್ಯಾತ ಚಿತ್ರನಟ–ನಟಿಯರಿಂದ ತಾರಾಮೇಳ ನಡೆಯಲಿದೆ. ಮನೋರಂಜನೆ, ಕನಡ ನಾಡು–ನುಡಿ ವೈಭವ ಬಿಂಬಿಸುವ ಲೇಸರ್ ಶೋ ಮತ್ತು ಪ್ರಸಿದ್ಧ ಹಿನ್ನೆಲೆ ಗಾಯಕರಿಂದ ಸಂಗೀತ ರಸಸಂಜೆ ಏರ್ಪಡಿಸಲಾಗಿದೆ. ಬಾಣ ಬಿರುಸುಗಳ ಪ್ರದರ್ಶನ ಕೂಡ ಇರುತ್ತದೆ. ಕಾರ್ಯಕ್ರಮದಲ್ಲಿ ಸುಮಾರು 20 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಕಾರ್ಯಕ್ರಮದಲ್ಲಿ ನನ್ನ ಮುಂದಿನ ರಾಜಕೀಯ ನಿರ್ಧಾರ ತಿಳಿಸುತ್ತೇನೆ. ಬಿಜೆಪಿ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿದ್ದೇನೆ. ಆರ್‌ಎಸ್‌ಎಸ್ ನಡೆಗಳು ನನಗೆ ಇಷ್ಟವಾಗಿದೆ. ಹೀಗಾಗಿ ಈ ಪಕ್ಷದ ಮೂಲಕ ನನ್ನ ರಾಜಕೀಯ ಭವಿಷ್ಯ ರೂಪಿಸಿಕೊಳ್ಳುವ ಇಂಗಿತ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಬಡವರು, ದೀನದಲಿತರು, ಹಿಂದುಳಿದ ಜನರಿಗಾಗಿ ದುಡಿಯುತ್ತೇನೆ ಎಂದರು.

ಕಾರ್ಯಕ್ರಮದ ವೀಕ್ಷಣೆಗೆ ವಿವಿಐಪಿ, ವಿಐಪಿ ಹಾಗೂ ಸಾರ್ವಜನಿಕರಿಗೆ ಪ್ರತ್ಯೇಕ ಪಾಸ್ ವಿತರಿಸಲಾಗಿದೆ. ಕಾರ್ಯಕ್ರಮದಲ್ಲಿ ಸಚಿವರಾದ ಆರ್. ಅಶೋಕ್, ಕೆ.ಗೋಪಾಲಯ್ಯ, ಅಶ್ವಥ ನಾರಾಯಣ್, ಕೆ.ಸಿ.ನಾರಾಯಣಗೌಡ, ಬಿ.ಸಿ.ಪಾಟೀಲ್, ಯೋಗೇಶ್ವರ್, ಸಂಸದೆ ಸುಮಲತಾ, ಶಾಸಕರಾದ ನಾಗೇಂದ್ರ, ಎನ್.ಮಹೇಶ್ ಪಾಲ್ಗೊಳ್ಳಲಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಟಿ.ಶ್ರೀಧರ್, ಗ್ರಾಪಂ ಮಾಜಿ ಅಧ್ಯಕ್ಷರಾದ ಮಂಜುನಾಥ್, ರಾಮಚಂದ್ರು, ಮನ್‌ಮುಲ್ ಮಾಜಿ ನಿರ್ದೇಶಕ ಪುಟ್ಟರಾಜು, ಮಂಜುನಾಥ್, ಕೃಷ್ಣರಾಜೇಂದ್ರ ಸೊಸೈಟಿ ನಿರ್ದೇಶಕ ರಘು, ಪುರಸಭಾ ಸದಸ್ಯ ಪುಟ್ಟರಾಮು, ದೇವರಾಜು ಸೇರಿದಂತೆ ಇತರರಿದ್ದರು.



ಪಾಂಡವಪುರ ತಾಲೂಕಿನ ಟಿ.ಎಸ್.ಛತ್ರ ಗ್ರಾಪಂ ಅಧ್ಯಕ್ಷೆಯಾಗಿ ಭಾರತಿ, ಉಪಾಧ್ಯಕ್ಷೆಯಾಗಿ ಕೆ.ಆರ್.ಶ್ವೇತ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಚುನಾವಣಾಧಿಕಾರಿ ನಟರಾಜು, ಗ್ರಾಪಂ ಮಾಜಿ ಅಧ್ಯಕ್ಷೆ ಪಿ.ಪೂಜಾ, ಮಾಜಿ ಉಪಾಧ್ಯಕ್ಷೆ ಸುಕನ್ಯಾ, ಸದಸ್ಯರಾದ ಮಂಜುನಾಥ್, ಶಿವಣ್ಣ, ಹಾಳಯ್ಯ, ಸುಧಾರಾಣಿ, ಲೋಕೇಶ್, ಪಾಪೇಗೌಡ, ಬೇಬಿ, ಸಿದ್ದಶೆಟ್ಟಿ, ಅಭಿಲಾಷ್, ಸುರೇಶ್, ಸಾಕಮ್ಮ, ಶಿವಮ್ಮ, ರವಿ, ಲಕ್ಷ್ಮಮ್ಮ, ಲೀಲಾವತಿ, ಪಿಡಿಓ ಮಹೇಶ್ ಕುಮಾರ್, ಕಾರ್ಯದರ್ಶಿ ರಾಜು ಹಲವರಿದ್ದರು.

ಆಕ್ಷೇಪಾರ್ಹ ಪದ ಬಳಕೆಗೆ ಪ. ಮಲ್ಲೇಶ್ ವಿಷಾದ

ಮೈಸೂರು, ನ.18–ನಾನು ಆ ಪದಗಳನ್ನು ಬಳಸಬಾರದಿತ್ತು. ಈ ಬಗ್ಗೆ ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದು, ಸರ್ಕಾರ, ನ್ಯಾಯಾಲಯವು ಈ ಬಗ್ಗೆ ಗಮನಹರಿಸಬೇಕು ಎಂದು ಚಿಂತಕ ಪ. ಮಲ್ಲೇಶ್ ಆಗ್ರಹಿಸಿದರು. ಬ್ರಾಹ್ಮಣರ ಕುರಿತು ಅವಹೇಳನಕಾರಿಯಾಗಿ ಮಾತನಾಡಿ ವಿವಾದಕ್ಕೆ ಗುರಿಯಾಗಿರುವ ಅವರು ಸ್ಪಷ್ಟನೆ ನೀಡಿದ್ದು, ಮಾತಿನ ಭರದಲ್ಲಿ ಆಕ್ಷೇಪಾರ್ಹ ಪದ ಬಳಕೆಯಾಗಿದೆ. ವಿಷಾದ ವ್ಯಕ್ತಪಡಿಸಿದ್ದೇನೆ ಎಂದರೆ, ನಾನು ಮಾತನಾಡಿದ್ದು ತಪ್ಪಾಗಿದೆ ಎಂದರ್ಥ. ಆದರೆ, ಇದೇ ವಿಚಾರವನ್ನು ಮುಂದಿಟ್ಟುಕೊಂಡು ದೊಡ್ಡ ಹೋರಾಟ ಮಾಡುವುದು ಸರಿಯಾದ ಕ್ರಮವಲ್ಲ ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ದೇವರ ಪರಿಕಲ್ಪನೆಯನ್ನೇ ಅವರು ಹುಟ್ಟುಹಾಕಿದ್ದಾರೆ. ದೇವರು ಎಲ್ಲಿದ್ದಾರೆ ಎಂಬುದನ್ನು ತೋರಿಸಲಿ? ನಾವು ದೇವರನ್ನೇ ಒಪ್ಪುವುದಿಲ್ಲ. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದರಿಗೂ ದೇವರ ಬಗ್ಗೆ ಗೊತ್ತಿಲ್ಲ. ದೇವರನ್ನು ಸೃಷ್ಟಿಮಾಡಿ, ನಮ್ಮನ್ನು ಗುಲಾಮರನ್ನಾಗಿ ಮಾಡಿದ್ದಾರೆ. ಇದನ್ನು ಸಮಾಜ ಅರ್ಥಮಾಡಿಕೊಳ್ಳಬೇಕು. ಎಲ್ಲವನ್ನೂ ಸಹಿಸಿಕೊಂಡಿದ್ದೇವೆ. ಶೂದ್ರರು ತಿರುಗಿಬಿದ್ದರೆ, ಅವರು ಎಲ್ಲಿರುತ್ತಾರೆ? ನಾವು ತಿರುಗಿಬಿದ್ದಿಲ್ಲ. ಮಾನವೀಯತೆಯೇ ಮುಖ್ಯ' ಎಂದು ತಿಳಿಸಿದರು.



ವಿಕಲತೆ ದೇಹಕ್ಕಿರಬಹುದು; ಮನಸ್ಸಿದ್ದರೆ ಸಾಧನೆ ಸಾಧ್ಯ

ಪದಕಗಳ ವೀರ ಪ್ಯಾರಾ ಅಥ್ಲೀಟ್ ವಿಶ್ವಾಸದ ನುಡಿ



ದೈಹಿಕ ವಿಶೇಷ ಚೇತನರೆಂದರೆ ಮೂಗು ಮುರಿಯುವ ಕಾಲ ಈಗಿಲ್ಲ. ಆದರೆ ಒಂದೆರಡು ದಶಕಗಳ ಹಿಂದಿನ ಪರಿಸ್ಥಿತಿ ಬೇರೆಯೇ ಇತ್ತು. ಸೂಕ್ತ ಮಾರ್ಗದರ್ಶನ, ಪ್ರೋತ್ಸಾಹ, ನೆರವು ಎಲ್ಲವೂ ಸಲೀಸಾಗಿ ದಕ್ಕುತ್ತಿರಲಿಲ್ಲ. ಅಂತಹ ಪರಿಸ್ಥಿತಿಯಲ್ಲೂ ಎಲ್ಲವನ್ನೂ ಸಹಿಸಿಕೊಂಡು ಛಲದಿಂದ ಪುಟಿದೆದ್ದಿರುವ ದೈಹಿಕ ವಿಕಲ ಚೇತನರು ಸಮಾಜಕ್ಕೆ ಮಾದರಿಯಾಗಿದ್ದಾರೆ. ಹಾಗೆಯೇ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಪ್ಯಾರಾ ಗೇಮ್ಸ್‌ನಲ್ಲಿ ಭಾಗವಹಿಸಿ ಪದಕಗಳ ಗೆದ್ದಿರುವ ಪ್ಯಾರಾ ಅಥ್ಲೀಟ್ ಚಿತ್ರದುರ್ಗದ ಆರ್.ಟಿ. ಪ್ರಸನ್ನಕುಮಾರ್, ಕಾರ್ಯಕ್ರಮ ನಿಮಿತ್ತ ಮೈಸೂರಿಗೆ ಆಗಮಿಸಿದ್ದು, ತಮ್ಮ ಬದುಕು–ಸಾಧನೆ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮನಬಿಚ್ಚಿ ಮಾತನಾಡಿದ್ದಾರೆ.

ಸಾಂಸ್ಕೃತಿಕ ನಗರ ಮೈಸೂರಿಗೆ ಬರುವುದು ಹೆಮ್ಮೆಯ ವಿಚಾರ. ಇಲ್ಲಿ ಸದಭಿರುಚಿಯ ಮಿತ್ರರಿದ್ದಾರೆ. ಪ್ಯಾರಾ ಅಥ್ಲೀಟ್‌ಗಳನ್ನು ಪ್ರೋತ್ಸಾಹಿಸುವ ತಂಡವಿದೆ. ಕೀಡಾಕೂಟಕ್ಕೆ ಆಹ್ವಾನಿಸಿರುವ ರೋಟರಿ ಮೈಸೂರು ಮಿಡ್‌ಟೌನ್ ಸಂಸ್ಥೆಗೆ ವಿಶೇಷ ಧನ್ಯವಾದ. ನಾನು ಮೂಲತಃ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲೂಕು ಕೊಂಡ್ಲಹಳ್ಳಿ ಗ್ರಾಮದವನು. ನನ್ನ ಪ್ರಾಥಮಿಕ, ಪ್ರೌಢಶಿಕ್ಷಣ ನಮ್ಮ ಹಳ್ಳಿಯಲ್ಲೇ ಆಯಿತು. ಚಳ್ಳಕೆರೆಯಲ್ಲಿ ಪಿಯುಸಿ, ದಾವಣಗೆರೆಯಲ್ಲಿ ಪದವಿ, ಶಿವಮೊಗ್ಗ ವಿವಿಯಲ್ಲಿ ಎಂ.ಎಸ್ಸಿ ಪದವಿ ಪಡೆದೆ. ಸದ್ಯ ಮೊಳಕಾಲ್ಮೂರು ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೇನೆ. ನಮ್ಮ ತಂದೆ ತಿಪ್ಪೇಸ್ವಾಮಿ ಅವರು ಕೆಎಸ್‌ಆರ್‌ಟಿಸಿ ನೌಕರರಾಗಿದ್ದಾಗ ಉತ್ತಮ ಸೇವೆಗೆ ಚಿನ್ನದ ಪದಕ ಪಡೆದಿದ್ದರು. ನಾನು ಕ್ರೀಡಾ ಕ್ಷೇತ್ರದಲ್ಲಿ ಚಿನ್ನದ ಪದಕ ಪಡೆದಿದ್ದೇನೆ. ಸೇನೆಯಲ್ಲಿ ಹವಾಲ್ದಾರ್ ಆಗಿರುವ ಸಹೋದರನೂ ಖೋ ಖೋ ಕ್ರೀಡಾಪಟು. ದೇಶದ ರಕ್ಷಣೆಯಲ್ಲಿರುವ ತಮ್ಮನಂತೆ ನಾನು ಕ್ರೀಡೆಯ ಮೂಲಕ ದೇಶ ಪ್ರತಿನಿಧಿಸಿರುವ ಖುಷಿ ನನಗಿದೆ.

ಪೋಲಿಯೋ ಬಾಧಿಸಿತು: ನನಗೆ ನಾಲ್ಕೈದು ವರ್ಷದವನಿದ್ದಾಗ ಪೋಲಿಯೋ ಪರಿಣಾಮದಿಂದ ಕಾಲು ವಿಕಲವಾಯಿತು ಎಂದು ಪೋಷಕರು ಹೇಳುತ್ತಾರೆ. ಚಿಕ್ಕವನಿದ್ದಾಗ ಎಲ್ಲಾ ಸ್ನೇಹಿತರೊಂದಿಗೆ ಸಾಮಾನ್ಯನಂತೆಯೇ ಇದ್ದೆ. ಅವರಂತೆ ಓಡುವುದು, ನೆಗೆಯುವುದು, ಜಿಗಿಯುವುದು ಎಲ್ಲವನ್ನೂ ಮಾಡುತ್ತಿದ್ದೆ. ಸ್ನೇಹಿತರೂ ಕೂಡ ನನ್ನನ್ನು ಭಿನ್ನವಾಗಿ ಕಾಣುತ್ತಿರಲಿಲ್ಲ. ಆದರೆ ಒಂದು ಹಂತದಲ್ಲಿ ನನ್ನನ್ನು ನಿಯಂತ್ರಿಸುವುದು ಅನುಭವಕ್ಕೆ ಬಂದಿತು. ಆದರೆ ನಾನು ಅದನ್ನು ಸವಾಲಾಗಿ ತೆಗೆದುಕೊಂಡೆ. ನಾನು ಹೈಸ್ಕೂಲ್‌ನಲ್ಲಿದ್ದಾಗ ವಾರ್ಷಿಕ ಕ್ರೀಡಾಕೂಟದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು 'ನೀನು ಪಕ್ಕದಲ್ಲಿರು ನಿನಗೆ ಆಗುವುದಿಲ್ಲ, ಹಾಗೆಯೇ ಅಂಕ ನೀಡುತ್ತೇನೆ' ಎಂದಿದ್ದರು. ನಾನು ಪಟ್ಟು ಹಿಡಿದು ಆಟದಲ್ಲಿ ಸ್ಪರ್ಧಿಸಿ ಎಲ್ಲರಿಗಿಂತ ಉತ್ತಮ ಪ್ರದರ್ಶನ ನೀಡಿದೆ.

ಆತ್ಮ ವಿಶ್ವಾಸ ಹೆಚ್ಚಾಯಿತು: ಸಿಡ್ನಿಯಲ್ಲಿ 1999ರಲ್ಲಿ ನಡೆದ ಪ್ಯಾರಾಲಿಂಪಿಕ್ಸ್‌ನಲ್ಲಿ ಕರ್ನಾಟಕದಿಂದ ರೆಹಮತ್ತುಲ್ಲಾ ಖಾನ್ ಪ್ರತಿನಿಧಿಸುತ್ತಿದ್ದಾರೆ ಎಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದಾಗ ನನ್ನ ಆತ್ಮ ವಿಶ್ವಾಸ ಹೆಚ್ಚಾಯಿತು. 2002ರಲ್ಲಿ ಫೆಸಿಫಿಕ್ ಗೇಮ್ಸ್‌ಗೆ ಬೆಂಗಳೂರಿನಲ್ಲಿ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ ನಡೆಯುತ್ತಿರುವ ಬಗ್ಗೆ ತಿಳಿದು ಅಲ್ಲಿಗೆ ಹೋದೆ ಅಲ್ಲಿ ಜಾವೆಲಿನ್ ಥ್ರೋ ಹಾಗೂ ಹೈಜಂಪ್‌ನಲ್ಲಿ ಟ್ರಯಲ್ ನೀಡಿದ ಬಳಿಕ ಸ್ಪರ್ಧೆಯಲ್ಲಿ ಪಾಲ್ಗೊಂಡು ಅಲ್ಲಿ ನಾನು ಚಿನ್ನದ ಪದಕದೊಂದಿಗೆ ಬೂಸಾನ್‌ನಲ್ಲಿ ನಡೆದ ಏಷಿಯನ್ ಪ್ಯಾರಾ ಗೇಮ್ಸ್‌ಗೆ ಆಯ್ಕೆ ಆಗಿ ಅಲ್ಲಿಯೂ ಬೆಳ್ಳಿ ಪಡೆದೆ.



ಮೈಸೂರಿಗೆ ಆಗಮಿಸಿದ ಪ್ರಸನ್ನ ಕುಮಾರ್ ಅವರನ್ನು (ಎಡದಿಂದ) ಮಿಡ್‌ಟೌನ್ ಕ್ಲಬ್ ಎಡಿಟರ್ ಎ.ಎನ್.ಅಯ್ಯಣ್ಣ, ಬಾಂಧವ್ಯ ಅಧ್ಯಕ್ಷ ಜೈಕುಮಾರ್, ಅಧ್ಯಕ್ಷ ನವೀನ್ ಚಂದ್ರ ಜಂಟಿ ಕಾರ್ಯದರ್ಶಿ ಭಾಸ್ಕರ್ ಸ್ವಾಗತಿಸಿದರು.

> ಆರ್.ಟಿ. ಪ್ರಸನ್ನಕುಮಾರ್ ಅವರು 3 ಏಷ್ಯನ್ ಪ್ಯಾರಾ ಗೇಮ್‌ಗಳಲ್ಲಿ ಭಾಗವಹಿಸಿ 2 ಬೆಳ್ಳಿ ಪದಕ ಗೆದ್ದಿದ್ದಾರೆ. 3 ಚಾಂಪಿಯನ್ ಶಿಪ್‌ಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಅಂತರಾಷ್ಟ್ರೀಯ ಗಾಲಿಕುರ್ಚಿ ಮತ್ತು ವಿಕಲಚೇತನರ ಕ್ರೀಡೆ(ಐಡಬ್ಲ್ಯೂಎಎಸ್) ವರ್ಲ್ಡ್ ಗೇಮ್ ಹಾಗೂ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ವಿಜೇತರಾಗಿದ್ದಾರೆ.

ತಂದೆಯೇ ಪ್ರೇರಣೆ: ನಮ್ಮ ತಂದೆಯೇ ಪ್ರೇರಣೆ. ಅವರು ಕಬಡ್ಡಿ ಆಟಗಾರ. ಆದರೆ ನನಗೆ ಅದರಲ್ಲಿ ಆಸಕ್ತಿ ಇರಲಿಲ್ಲ. ಅವರು ಜಮೀನಿನಲ್ಲಿ ದನ ಕರುಗಳನ್ನು ಓಡಿಸಲು ದೂರಕ್ಕೆ ಕಲ್ಲೆಸಿಯುತ್ತಿದ್ದಾಗ ನಾನೂ ಕೂಡ ಹಾಗೆಯೇ ಮಾಡುತ್ತಿದ್ದೆ. ನಾನು ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ಕಲ್ಲೆಸೆಯುವುದರಲ್ಲಿ ನಮ್ಮಿಬ್ಬರಿಗೂ ಸ್ಪರ್ಧೆಯಾಗಿ ನಾನೇ ಗೆದ್ದಿದ್ದೆ. ಹಾಗಾಗಿ ಜಾವೆಲಿನ್ ಥ್ರೋನಲ್ಲಿ ಆಸಕ್ತಿ ಹೆಚ್ಚಾಯಿತು.

ನಮಗೆ ನಾವೇ ಸ್ಪರ್ಧಿ: ಡಿಸೆಬಲ್ ಚಾಲೆಂಜರ್ಸ್‌ಗಳು ನಿತ್ಯ ನಮ್ಮೊಟ್ಟಿಗೆ ನಾವೇ ಸ್ಪರ್ಧಿಸುತ್ತಿರುತ್ತೇವೆ. ಮಾರ್ಕೆಟ್‌ಗೆ ಹೋಗುವಾಗ, ಮೆಟ್ಟಿಲು ಹತ್ತುವಾಗ, ನಡೆಯುವಾಗ ಎಲ್ಲಾ ಸಂದರ್ಭದಲ್ಲೂ ಚಾಲೆಂಜ್ ಇರುತ್ತದೆ. ಹಾಗಾಗಿ ಪೋಷಕರೂ ಸಹ ಮಕ್ಕಳಿಗೆ ಏನಾದರೂ ಆದೀತು ಎಂಬ ಭಯದಲ್ಲಿ ಕ್ರೀಡೆಗೆ ಪ್ರೋತ್ಸಾಹಿಸುವುದಿಲ್ಲ. ಆದರೆ ಈಗ ಎಲ್ಲರೂ ಸಾಧಿಸಬಹುದೆಂಬ ಜಾಗೃತಿ ಹೆಚ್ಚುತ್ತಿದೆ. 20 ವರ್ಷದ ಹಿಂದೆ ಕೆಲವರು ನನ್ನನ್ನೂ ಹುಚ್ಚಾ ಎನ್ನುತ್ತಿದ್ದರು. ಆದರೆ ನಮ್ಮ ಕುಟುಂಬ ಪ್ರೋತ್ಸಾಹಿಸಿತು. ಏಷಿಯನ್ ಗೇಮ್ಸ್‌ಗೆ ಹೋಗಲು 65 ಸಾವಿರ ರೂ. ಅಗತ್ಯವಿತ್ತು. ಆಗ ನನ್ನ ಸ್ನೇಹಿತ ಸೋಮಸುಂದರ್ ಧೈರ್ಯ ತುಂಬಿದ. ಊರಿನವರಾದ ರೇವಣ್ಣ ಸಹಾಯ ಮಾಡಿದರು. ಅಲ್ಲಿಂದ ನನ್ನ ಕ್ರೀಡಾ ಪಯಣಕ್ಕೆ ಶಕ್ತಿ ಸಿಕ್ಕಂತಾಯಿತು.

ಮಗಳನ್ನು ಕೀಡಾಪಟು ಮಾಡುವೆ: ನನಗೆ ಬ್ಯಾಕ್ ಇಂಜುರಿಯಾಗಿರುವುದರಿಂದ ಭಾರ ಎತ್ತಬಾರದೆಂದು ವೈದ್ಯರು ಹೇಳಿರುವುದರಿಂದ ಒಲ್ಲದ ಮನಸ್ಸಿನಿಂದ ನಾನು ಕ್ರೀಡೆಯಿಂದ ದೂರ ಉಳಿದಿದ್ದೇನೆ. ಆದರೆ 12 ವರ್ಷದ ನನ್ನ ಮಗಳನ್ನು ದೇಶ ಪ್ರತಿನಿಧಿಸುವ ಜಾವೆಲಿನ್ ಥ್ರೋ ಕ್ರೀಡಾರ್ಥಿಯಾಗಿ ಬೆಳೆಸುತ್ತೇನೆ. ನನ್ನ ಹಳ್ಳಿ, ಏರಿಯಾ ಮಕ್ಕಳಿಗೆ ಕೋಚಿಂಗ್ ನೀಡುವುದಕ್ಕೂ ನಾನು ಸಿದ್ಧನಿದ್ದೇನೆ. ಅದಕ್ಕಾಗಿ ಮೊದಲು ನನ್ನ ಮಗಳನ್ನು ಸಿದ್ಧಪಡಿಸುವ ಮೂಲಕ ನಾನೊಬ್ಬ ಉತ್ತಮ ಕೋಚ್ ಎಂದು ತಿಳಿಸಬೇಕಿದೆ.

ಕ್ರೀಡೆಯಿಂದ ಮಕ್ಕಳು ವಿಮುಖ: ಮೊಬೈಲ್, ಟಿವಿ, ಕಂಪ್ಯೂಟರ್‌ಗಳಿಂದಾಗಿ ಮಕ್ಕಳು ಕ್ರೀಡೆಯಿಂದ ವಿಮುಖರಾಗುತ್ತಿದ್ದಾರೆ. ಕೊರೊನಾ ಸಂದರ್ಭದಲ್ಲಿ ಆನ್‌ಲೈನ್ ತರಗತಿ ಅನಿವಾರ್ಯವಾಗಿದ್ದ ಕಾರಣ ಮಕ್ಕಳು ಮೊಬೈಲ್ ಅನ್ನು ಇನ್ನೂ ಹೆಚ್ಚಿಗೆ ಹಚ್ಚಿಕೊಂಡಿದ್ದಾರೆ. ದಯವಿಟ್ಟು ಕ್ರೀಡೆಯನ್ನು ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಭಾವಿಸಬೇಕು. ಕ್ರೀಡೆಯಲ್ಲೇ ಸಂಪೂರ್ಣವಾಗಿ ತೊಡಗಿಸಿಕೊಂಡವರು ಕಡೆಗೆ ಉದ್ಯೋಗವಿಲ್ಲದೆ ಅಲೆದಾಡುವುದನ್ನು ನೋಡಿದರೆ ಯಾರೂ ತಮ್ಮ ಮಕ್ಕಳನ್ನು ಪ್ರೋತ್ಸಾಹಿಸುವುದಿಲ್ಲ. ಹಾಗಾಗಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಡಿದವರಿಗೆ ಸರ್ಕಾರ ಉದ್ಯೋಗ ಖಾತರಿ ನೀಡಬೇಕು. ಕ್ರೀಡಾ ಯೂನಿವರ್ಸಿಟಿ ಸ್ಥಾಪಿಸಿ ಪೂರ್ಣ ಪ್ರಮಾಣದಲ್ಲಿ ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕು. ಆಗ ಮಾತ್ರ ಭಾರತ ಹೆಚ್ಚು ಕೀಡಾ ಸಾಧನೆ ಮಾಡಲು ಸಾಧ್ಯ. ಈ ಸಂಬಂಧ ಪೋಷಕರ ಮನಸ್ಥಿತಿಯೂ ಬದಲಾಗಬೇಕು. ಜೊತೆಗೆ ಪೂರಕವಾದ ವ್ಯವಸ್ಥೆಯೂ ನಿರ್ಮಾಣವಾಗಬೇಕು. ಕೀಡೆಯಿಂದ ಯಾರೂ ಹಾಳಾಗಿಲ್ಲ.

ಕ್ರೀಡಾಪಟು ಹೀಗಿರಬೇಕು: ಸೋಲು–ಗೆಲುವನ್ನು ಸಮಾನವಾಗಿ ತೆಗೆದುಕೊಳ್ಳಬೇಕು. ಇಲ್ಲವಾದರೆ ಆತ ಕ್ರೀಡಾಳು ಆಗುವುದಿಲ್ಲ. ಗೆಲುವಿನಂತೆ ಸೋಲನ್ನು ಸ್ವೀಕರಿಸಬೇಕು. ಪದಕಗಳು ಬಂದಾಗಲೆಲ್ಲಾ ಬಾಗಬೇಕೇ ಹೊರತು ಬೀಗಬಾರದು. ಆಗ ಮಾತ್ರ ಆ ಪದಕದ ಬೆಲೆಯೂ ಹೆಚ್ಚುತ್ತದೆ. ಶಾಲೆಗೆ ಹೋಗಿ ಬಂದ ಕೂಡಲೇ ಪಠ್ಯಕ್ಕೆ ಸಂಬಂಧಿಸಿದ ಹೋಂವರ್ಕ್ ಮಾಡುವಂತೆ ನಿತ್ಯವೂ ಕ್ರೀಡೆಯನ್ನು ಅಭ್ಯಾಸ ಮಾಡಬೇಕು. ಅಭ್ಯಾಸವೇ ಸಾಧನೆಯ ಹಾದಿ. ಕೀಡೆಯನ್ನು ವೃತ್ತಿಯನ್ನಾಗಿ ಪರಿಗಣಿಸಬೇಕು. ಕ್ರೀಡೆಯಿಂದ ಉತ್ತಮ ಆರೋಗ್ಯ, ಉತ್ತಮ ಸ್ನೇಹಿತರು ಸಿಗುತ್ತಾರೆ. ಕ್ರೀಡೆ ಉತ್ತಮ ವ್ಯಕ್ತಿತ್ವ ರೂಢಿಸುವುರಿಂದ ಅದರಿಂದ ಸಮಾಜಕ್ಕೂ ಒಳ್ಳೆಯದು.

ಮುರುಘಾ ಶ್ರೀ ವಿರುದ್ಧ ಪೋಕ್ಸೊ ಪ್ರಕರಣ: ಸಂತ್ರಸ್ತರ ಪೋಷಕರು, ಒಡನಾಡಿ ವಿರುದ್ಧ ಪ್ರಕರಣ ಖಂಡಿಸಿ ಪ್ರತಿಭಟನೆ

ಮೈಸೂರು,ನ.18– ಚಿತ್ರದುರ್ಗದ ಮುರುಘಾ ಶ್ರೀ ಅತ್ಯಾಚಾರದ ಪ್ರಕರಣದಲ್ಲಿ ಸಂತ್ರಸ್ತ ಮಕ್ಕಳ ಪೋಷಕರು, ಪ್ರಕರಣ ಬಯಲಿಗೆಳೆದ ಒಡನಾಡಿ ಸಂಸ್ಥೆ ವಿರುದ್ಧ ಪ್ರಕರಣ ದಾಖಲಿಸಿರುವುದನ್ನು ಖಂಡಿಸಿ ವಿವಿಧ ಪ್ರಗತಿಪರ ಸಂಘಟನೆಗಳು, ರೈತ ಸಂಘದ ನೇತೃತ್ವದಲ್ಲಿ ಮೈಸೂರಿನ ನ್ಯಾಯಾಲಯದ ಮುಂಭಾಗದಲ್ಲಿರುವ ಮಹಾತ್ಮ ಗಾಂಧಿ ಪುತ್ಥಳಿ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು. ಸಂತ್ರಸ್ತ ಬಾಲಕಿಯರ ನೊಂದ ತಾಯಿಯ ಬಿಡುಗಡೆಗೆ ಒತ್ತಾಯಿಸಿದ ಪ್ರತಿಭಟನಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು. ಈ ವೇಳೆ ಮಾತನಾಡಿದ ಚಿಂತಕ ಪ.ಮಲ್ಲೇಶ್, ಬೇಲಿಯೇ ಎದ್ದು ಹೊಲ ಮೇಯ್ದು ಎಂಬಂತೆ ಈ ಘಟನೆ ನಡೆದಿದೆ. ಸಮಾಜದಲ್ಲಿ ಮೌಲ್ಯಗಳನ್ನು ಪ್ರತಿಷ್ಠಾಪಿಸಿ, ದಾರಿದೀಪವಾಗಿ ಬದುಕನ್ನು ಕಟ್ಟಿಕೊಡಬೇಕಾದ ವ್ಯಕ್ತಿಗಳೇ ಊಹಿಸಲು ಅಸಾಧ್ಯವಾದ ಅನ್ಯಾಯವನ್ನು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂತಹ ಪ್ರತಿಷ್ಠಿತ ಮಠದಲ್ಲಿ ಇಂತಹ ಕೃತ್ಯಗಳು ನಡೆದಿದೆಯೇ ಎಂಬುದನ್ನು ಊಹಿಸಲು ಅಸಾಧ್ಯವಾಗಿದೆ. ಸ್ವಾಮೀಜಿ ವಿರುದ್ಧ ಎರಡು ಬಾರಿ ಪೋಕ್ಸೊ ಪ್ರಕರಣ ದಾಖಲಿಸಿದ್ದರೂ ಕೂಡ, ಪಟ್ಟಭದ್ರ ಹಿತಾಸಕ್ತಿಗಳು ಅವರ ವಿಚಾರಣೆ ನಡೆಸುವ ನೆಪದಲ್ಲಿ ಮತ್ತಷ್ಟು ಸಮಯ ನೀಡುತ್ತಿದೆ. ಮುಂದೊಂದು ದಿನ ಸ್ವಾಮೀಜಿ ಬಿಡುಗಡೆಯಾಗಿ ಹೊರಬಂದರೂ ಅಚ್ಚರಿಯಿಲ್ಲ ಎಂದು ತಿಳಿಸಿದರು.

ಮುರುಘಾ ಶರಣರು ಮೊದಲಿನಿಂದಲೂ ನನಗೆ ವೈಯಕ್ತಿಕ ಪರಿಚಯವಿದೆ. ಆತನ ನಡೆ–ನುಡಿ, ಮಾತು, ಮುಖಚರ್ಯೆ ಗಮನಿಸಿದರೆ, ದೊಡ್ಡ ಸಂತನಂತೆ ಕಾಣ್ತಾನೆ. ಇಷ್ಟೆಲ್ಲ ಅನ್ಯಾಯ ನಡೆದಿದ್ದರೂ, ಸರ್ಕಾರ ಕಣ್ಮುಚ್ಚಿ ಕೂತಿದೆಯಾ? ಆತನನ್ನು ಉಳಿಸಲು ಹೊರಟಿದೆಯಾ' ಎಂದು ಕಿಡಿಕಾರಿದರು.

ಪ್ರತಿಭಟನಾ ಸ್ಥಳದಲ್ಲಿ ಸಂತ್ರಸ್ತ ಪೋಷಕರ ಕಾನೂನು ಹೋರಾಟವನ್ನು ಬೆಂಬಲಿಸಿ, ದೇಣಿಗೆ ಸಂಗ್ರಹಿಸಲಾಯಿತು. ಇದಾದ ಬಳಿಕ ಪ್ರತಿಭಟನಕಾರರು ಮೆರವಣಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ 18 ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ದಲಿತ ಮುಖಂಡ, ಮಾಜಿ ಮೇಯರ್ ಪುರುಷೋತ್ತಮ್, ಒಡನಾಡಿಯ ಸ್ಟ್ಯಾನ್ಲಿ, ಪ್ರೊ. ಸಬಿಹಾ ಭೂಮಿಗೌಡ, ಪ್ರೊ.ಪಿ.ಎನ್. ಶ್ರೀದೇವಿ, ಪ್ರೊ. ವನಜಾ, ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮಡಿಕೇರಿ ರಾಜಕಾಲುವೆಗಳ ಸಮಗ್ರ ಸರ್ವೇ ಮಾಡಿ

ನಗರಸಭೆಯ ಸಾಮಾನ್ಯ ಸಭೆಯಲ್ಲಿ ಶಾಸಕ ಅಪ್ಪಚ್ಚು ರಂಜನ್ ಸೂಚನೆ



ಮಡಿಕೇರಿ,ನ.18– ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿರುವ 'ರಾಜಕಾಲುವೆ'ಗಳ ಸಮಗ್ರ ಸರ್ವೇ ಕಾರ್ಯ ನಡೆಸಿ ಮಾಹಿತಿ ಕ್ರೋಢೀಕರಿಸುವಂತೆ ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ನಗರ ಸಭೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರಸಭೆಯ ಅಧ್ಯಕ್ಷೆ ಅನಿತಾ ಪೂವಯ್ಯ ಅವರ ಅಧ್ಯಕ್ಷತೆಯಲ್ಲಿ ನಗರಸಭೆಯ ಸಭಾಂಗಣದಲ್ಲಿ ಆಯೋಜಿತ 'ಸಾಮಾನ್ಯ ಸಭೆ'ಯಲ್ಲಿ ಸದಸ್ಯ ಬಷೀರ್ ವಿಷಯ ಪ್ರಸ್ತಾಪಿಸಿ, ಇತ್ತೀಚೆಗೆ ಅಚಾನಕ್ ಸುರಿದ ಭಾರೀ ಮಳೆಯ ಸಂದರ್ಭ ರಾಜಕಾಲುವೆಯಲ್ಲಿ ಸುಗಮವಾಗಿ ನೀರು ಹರಿಯಲು ಸಾಧ್ಯವಾಗದಿರುವ ಬಗ್ಗೆ ಮತ್ತು ಕಾಲುವೆಗಳು ಒತ್ತುವರಿಯಾಗಿರುವ ಕುರಿತು ಸಭೆಯ ಗಮನ ಸೆಳೆದರು.

ಈ ವಿಚಾರಕ್ಕೆ ಸ್ಪಂದಿಸಿದ ಶಾಸಕರು, ನಗರಸಭೆಯ ದಾಖಲೆಗಳಲ್ಲಿರುವ ರಾಜ ಕಾಲುವೆಗಳ ಸಂರಕ್ಷಣೆಯ ಬಗ್ಗೆ ಮುತುವರ್ಜಿ ವಹಿಸುವುದು ಅವಶ್ಯ. ಈ ಹಿನ್ನೆಲೆ ಇರುವ ರಾಜಕಾಲುವೆಗಳ ಸರ್ವೇ ಕಾರ್ಯ ನಡೆಸಿ, ಒತ್ತುವರಿಯನ್ನು ಗುರುತಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಸದಸ್ಯ ರಾಜೇಶ್ ಯಲ್ಲಪ್ಪ ಮಾತನಾಡಿ, ನಗರ ವ್ಯಾಪ್ತಿಯಲ್ಲಿ ನಗರಸಭೆಯ ರಸ್ತೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟಡವನ್ನು ಕಟ್ಟಿಕೊಂಡಿರುವ ಉದಾಹರಣೆಗಳಿದ್ದರೂ, ಅದನ್ನು ತೆರವುಗೊಳಿಸುವ ಕಾರ್ಯ ನಗರಸಭೆಯಿಂದ ನಡೆಸಿಲ್ಲವೆಂದು ತೀವ್ರ ಅಸಮಾಧಾನ ಹೊರ ಹಾಕಿದರು. ಇದಕ್ಕೆ ಧ್ವನಿಗೂಡಿಸಿದ ಸದಸ್ಯ ಮನ್ಸೂರ್, ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡು ಮನೆಗಳನ್ನು ನಿರ್ಮಿಸಲಾಗಿದೆ. ಇಂತಹ ಮನೆಗಳಿಗೆ ನಗರಸಭೆಯಿಂದ 'ನಿರಾಕ್ಷೇಪಣಾ ಪತ್ರ'ವನ್ನು ನೀಡಲಾಗಿದೆ. ಸರ್ಕಾರಿ ಜಾಗ ಒತ್ತುವರಿ ಮಾಡಿ ಮನೆ ನಿರ್ಮಿಸುವ ಬಗ್ಗೆ ತನ್ನ ಗಮನಕ್ಕೆ ಬಂದ ಕೂಡಲೆ ದೂರನ್ನು ನಗರಸಭೆಗೆ ನೀಡಿದ್ದೇನೆ. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪಾವತಿಯಾಗದ ವೇತನ: ಮಡಿಕೇರಿ ನಗರಸಭೆಯಲ್ಲಿ ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಳೆದ 8 ತಿಂಗಳಿನಿಂದ ವೇತನ ಪಾವತಿಯಾಗದಿರುವ ಆಘಾತಕಾರಿ ವಿಚಾರವನ್ನು ಸಭೆಯ ಮುಂದೆ ಇಟ್ಟ ಸದಸ್ಯ ಅಮಿನ್ ಮೊಹಿಸಿನ್, ಇದರಿಂದ ಐ.ಟಿ ಸೆಲ್‌ನ ಸುಜಿತ್ ಮತ್ತು ಅಭಿಲಾಶ್ ಎಂಬವರು ಕೆಲಸ ಬಿಟ್ಟಿದ್ದಾರೆ. ಇದಕ್ಕೆ ಯಾರು ಜವಾಬ್ದಾರರು ಎಂದು ಪ್ರಶ್ನಿಸಿದರು.

ಈ ಬಗ್ಗೆ ಸಮಜಾಯಿಷಿ ನೀಡಿದ ಪೌರಾಯುಕ್ತ ವಿಜಯ, ಹೊರಗುತ್ತಿಗೆ ನೌಕರರಿಗೆ 7 ತಿಂಗಳ ವೇತನ ಪಾವತಿಯಾಗಿಲ್ಲ. ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಟೆಂಡರ್ ಪ್ರಕ್ರಿಯೆ ನಡೆದಿದ್ದು, ವೇತನ ಪಾವತಿಯಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭ ಅಮಿನ್ ಮೊಹಿಸಿನ್, ಇಷ್ಟು ಸುದೀರ್ಘ ಅವಧಿಯಿಂದ ವೇತನ ಪಾವತಿಯಾಗದಿದ್ದರೂ ಅಗತ್ಯ ಕ್ರಮ ಕೈಗೊಳ್ಳದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಅಧ್ಯಕ್ಷೆ ಅನಿತಾ ಪೂವಯ್ಯ, 'ನಮಗೆ ಕಾಳಜಿ ಇಲ್ಲ ಎನ್ನುವಂತೆ ಸದಸ್ಯರು ಮಾತನಾಡಿದ್ದಾರೆ' ಎಂದು ಅಸಮಾಧಾನ ಹೊರ ಹಾಕಿದ ಘಟನೆ ನಡೆಯಿತು. ಇದಕ್ಕೆ ತಿರುಗೇಟು ನೀಡಿದ ಅಮಿನ್ ಮೊಹಿಸಿನ್, ಕಾಳಜಿ ಇದ್ದಿದ್ದರೆ ಅಧಿಕಾರಕ್ಕೆ ಬಂದ ತಕ್ಷಣವೇ ತಾವು ಈ ಸಮಸ್ಯೆ ಬಗೆಹರಿಸಿ ಹೊರ ಗುತ್ತಿಗೆ ಸಿಬ್ಬಂದಿಗಳಿಗೆ ವೇತನ ದೊರಕುವಂತೆ ಮಾಡಬಹುದಿತ್ತೆಂದು ತಿಳಿಸಿದರು. ಈ ವೇಳೆ ಪರ ವಿರುದ್ಧವಾದ ವಾಗ್ವಾದ ನಡೆಯಿತು.

40 ಕೋಟಿ ರೂ. ಮಂಜೂರು: ನಗರೋತ್ಥಾನದ 4ನೇ ಹಂತದಲ್ಲಿ ಮಡಿಕೇರಿ ನಗರ ಸಭೆಗೆ 40 ಕೋಟಿ ರೂ. ಮಂಜೂರಾಗಿದ್ದು, ರಸ್ತೆ ಮತ್ತು ಚರಂಡಿ ವ್ಯವಸ್ಥೆಗಾಗಿ 13.50 ಕೋಟಿ ರೂ. ಟೆಂಡರ್ ಮಾಡಲಾಗುತ್ತದೆಂದು ಪೌರಾಯುಕ್ತರು ತಿಳಿಸಿದರು. ಈ ಸಂದರ್ಭ

ನಿವೇಶನಕ್ಕೆ 3 ಕಡೆ ಜಾಗ ಗುರುತು

ನಗರವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ವಸತಿ ಸೌಲಭ್ಯ ದೊರಕದಿರುವ ವಿಚಾರ ಪ್ರಸ್ತಾಪವಾದ ಸಂದರ್ಭ ಶಾಸಕರು, ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಜಾಗದ ಲಭ್ಯತೆ ಇಲ್ಲ. ಈ ಹಿನ್ನೆಲೆ ನಗರದ ಹೊರ ಭಾಗದ ಮೂರು ಕಡೆಗಳಲ್ಲಿ ಜಾಗ ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.

ಶಾಸಕ ಅಪ್ಪಚ್ಚು ರಂಜನ್, ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಲಭ್ಯ ಅನುದಾನದ ಮೂಲಕ 'ಸರ್ವ ಋತು ರಸ್ತೆ'ಗಳ ನಿರ್ಮಾಣವಾಗಬೇಕು ಮತ್ತು ಕಾಮಗಾರಿ ಡಿಸೆಂಬರ್‌ನಲ್ಲಿ ಆರಂಭವಾಗಬೇಕೆಂದು ಸ್ಪಷ್ಟ ನಿರ್ದೇಶನವನ್ನು ನೀಡಿದರು. ನಗರಸಭೆ ಅಭಿವೃದ್ಧಿಗೆ ಹೆಚ್ಚುವರಿಯಾಗಿ 75 ಲಕ್ಷ ರೂ. ಅನುದಾನ ಮಂಜೂರಾಗಿರುವುದಾಗಿ ತಿಳಿಸಿದರು. ಉಪಾಧ್ಯಕ್ಷೆ ಸವಿತಾ ರಾಕೇಶ್, ಉಮೇಶ್ ಸುಬ್ರಮಣಿ, ಸದಸ್ಯರು ಉಪಸ್ಥಿತರಿದ್ದರು.

ಇಂದು ಕೊಡಗು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭ

ಮಡಿಕೇರಿ, ನ.18– ಕೊಡಗು ಜಿಲ್ಲಾ ಪೊಲೀಸ್ ವತಿಯಿಂದ ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭವು ನ.19 ರಂದು ಸಂಜೆ 4 ಗಂಟೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿದೆ. ಮೈಸೂರು ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕರಾದ ಪ್ರವೀಣ್ ಮಧುಕರ್ ಪವಾರ್ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ರಸ್ತೆಯ ತಡೆಗೋಡೆ ಕುಸಿತ ಕಳಪೆ ಕಾಮಗಾರಿ ಆರೋಪ



ಗುಡ್ಡೆಹೊಸೂರು, ನ.18– ಇಲ್ಲಿಗೆ ಸಮೀಪದ ನಂಜರಾಯಪಟ್ಟಣ ಗ್ರಾಪಂ ವ್ಯಾಪ್ತಿಗೆ ಒಳಪಡುವ ಕಲ್ಲನ ಗದ್ದೆ ಎಂಬಲ್ಲಿ ರಸ್ತೆ ಕುಸಿಯದಂತೆ ರಸ್ತೆಗೆ ಅಡ್ಡವಾಗಿ ನಿರ್ಮಿಸಿದ್ದ ತಡೆಗೋಡೆ ಕುಸಿದು ಬಿದ್ದಿದೆ.

ಗ್ರಾಪಂ ಅನುದಾನದಲ್ಲಿ ಸುಮಾರು 2 ಲಕ್ಷ ರೂ. ವೆಚ್ಚದಲ್ಲಿ ಈ ತಡೆಗೋಡೆ ನಿರ್ಮಾಣ ಕಾಮಗಾರಿ ನಡೆಸಲಾಗಿತ್ತು. ಆದರೆ ಕೇವಲ 2 ತಿಂಗಳಲ್ಲಿ ತಡೆಗೋಡೆ ಕುಸಿದು ಹೋಗಿದೆ. ಇದರಿಂದ ಈ ಭಾಗದ ಜನರು ವಾಹನದಲ್ಲಿ ಸಂಚರಿಸುವುದು ಅಪಾಯಕಾರಿಯಾಗಿದೆ. ತಡೆಗೋಡೆ ಕಾಮಗಾರಿಯು ಸಂಪೂರ್ಣ ಕಳಪೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಜನಸಾಮಾನ್ಯರ ಹಣದಲ್ಲಿ ಈ ರೀತಿ ಕಾಮಗಾರಿ ನಡೆಸಿ ಹಣ ಪೋಲಾಗುವುದು ಎಷ್ಟು ನ್ಯಾಯ? ಸಂಬಂಧಪಟ್ಟವರು ಇತ್ತ ಗಮನ ಹರಿಸಬೇಕಾಗಿದೆ.

ಹೆಲಿಪೋರ್ಟ್ ನಿರ್ಮಾಣ: ದೆಹಲಿ ತಂಡದಿಂದ ಸ್ಥಳ ಪರಿಶೀಲನೆ



ಕುಶಾಲನಗರ, ನ.18– ಸಮೀಪದ ಕೂಡಿಗೆಯ ಕೃಷಿ ಕ್ಷೇತ್ರದ 47 ಎಕರೆ ಕಾಯ್ದಿರಿಸಲಾಗಿರುವ ಜಾಗದಲ್ಲಿ ಏರ್ ಸ್ಟ್ರಿಪ್‌ನೊಂದಿಗೆ ಹೆಲಿಪೋರ್ಟ್ ನಿರ್ಮಾಣ ಮಾಡುವ ಯೋಜನೆ ಸಂಬಂಧ ದೆಹಲಿ ತಂಡ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿತು.

ದೆಹಲಿ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಒಳಪಡುವ ಪವನ್ ಲಿಮಿಟೆಡ್ ಸಂಸ್ಥೆ ತಂಡದ ಅಧಿಕಾರಿಗಳು ಜಿಲ್ಲೆಯ ವಿವಿಧ ಅಧಿಕಾರಿ ತಂಡದೊಂದಿಗೆ ಸ್ಥಳಕ್ಕೆ ಭೇಟಿ ನೀಡಿತು.

ದೆಹಲಿ ಸಂಸ್ಥೆಯ ವಿಭಾಗಿಯ ನಿರ್ದೇಶಕರಾದ ಕ್ಯಾಪ್ಟನ್ ಸಲೀಲ್ ಪಾರ್ಸರ್ ಮತ್ತು ಪಿ.ಕೆ.ಮೋರ್ಗರ್ ಮತ್ತು ರಾಜ್ಯ ಸರ್ಕಾರದ ಕೈಗಾರಿಕಾ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಕ್ರಿಯಾ ಯೋಜನೆ ಇಂಜಿನಿಯರ್ ಅಕ್ಷಯ ಹೊಂಡಗಾರ್, ಕುಶಾಲನಗರ ತಾಲೂಕು ತಹಶೀಲ್ದಾರ್ ಟಿ.ಎಂ. ಪ್ರಕಾಶ್ ಮತ್ತಿತರ ಅಧಿಕಾರಿಗಳು ಕಾಯ್ದಿರಿಸಿದ ಜಾಗ ಪರಿಶೀಲಿಸಿದರು.

ಸಮೀಪದಲ್ಲಿ ಹರಿಯುವ ಹಾರಂಗಿ ನದಿ ಪ್ರದೇಶ ಸೇರಿದಂತೆ ತಾಂತ್ರಿಕ ಯಂತ್ರದ ಮೂಲಕ ಈಗಾಗಲೇ ಭೂ ಮಾಪನ ಇಲಾಖೆಯಿಂದ ಗುರುತಿಸಲ್ಪಟ್ಟಿರುವ ಜಾಗದ ಪರಿಶೀಲನೆಯನ್ನು ತಂಡ ನಡೆಸಿತು.

ಈಗಾಗಲೇ ರಾಜ್ಯ ಸರ್ಕಾರ ಈ ಬಾರಿ ಕೊಡಗು ಸೇರಿದಂತೆ ಎರಡು ಜಿಲ್ಲೆಗಳಿಗೆ 10 ಕೋಟಿ ರೂ. ಹಣವನ್ನು ಬಜೆಟ್‌ನಲ್ಲಿ ಕಾಯ್ದಿರಿಸಲಾಗಿದೆ. ಅದರನ್ವಯ ಮಡಿಕೇರಿ ಕ್ಷೇತ್ರದ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರು ಕಳೆದ ತಿಂಗಳಲ್ಲಿ ಸಂಬಂಧಿಸಿದ ಇಲಾಖೆಯವರಿಗೆ ಕಾರ್ಯಚಟುವಟಿಕೆಗಳನ್ನು ಆರಂಭಿಸಲು ಒತ್ತಾಯ ಮಾಡಿದ್ದರು. ಅದರಂತೆಯೇ ರಾಜ್ಯ ಮತ್ತು ದೆಹಲಿ ತಂಡದವರು ಹೆಲಿಪೋರ್ಟ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಾರ್ಯಯೋಜನೆಯನ್ನು ಪೂರ್ಣಗೊಳಿಸುವ ಹಿನ್ನೆಲೆಯಲ್ಲಿ ಪ್ರಾಧಿಕಾರದ ಸೂಚನೆಯಂತೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಂಬಂಧಿಸಿದ ಪ್ರಾಧಿಕಾರಕ್ಕೆ ವರದಿಯನ್ನು ನೀಡಲಿದೆ. ಈ ಸಂದರ್ಭದಲ್ಲಿ ಕುಶಾಲನಗರ ಉಪ ತಹಸೀಲ್ದಾರ್ ಮಧುಸೂದನ್, ತಾಲೂಕು ಭೂಮಾಪನ ಅಧಿಕಾರಿ ವಿರೂಪಾಕ್ಷ, ಚೆಸ್ಕಾಂ ಕಾರ್ಯಪಾಲಕ ಅಭಿಯಂತರ ಅನಿತಾ ಬಾಯ್, ಒಳಚರಂಡಿ ಇಲಾಖೆಯ ಅಧಿಕಾರಿ ಹರ್ಷಿತ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿದ್ದರು.

ಇಂದು ವಿದ್ಯುತ್ ಅದಾಲತ್

ಮಡಿಕೇರಿ, ನ.18– ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ಹಿನ್ನೆಲೆಯಲ್ಲಿ ಮಡಿಕೇರಿ ಉಪ ವಿಭಾಗದ ಬೆಟ್ಟಗೇರಿ ಕಿರಿಯ ಪ್ರಾಥಮಿಕ ಶಾಲೆ, ಗೋಣಿಕೊಪ್ಪಲು ಉಪ ವಿಭಾಗದ ಹುದಿಕೇರಿ, ಬಿರುನಾಣಿ ಗ್ರಾ.ಪಂ ಸಭಾಂಗಣ, ವಿರಾಜಪೇಟೆ ಉಪ ವಿಭಾಗದ ಅವರೆಗುಂದ ಬುಡಕಟ್ಟು ಕೃಷಿಕರ ಸಂಘದ ಸಮುದಾಯ ಭವನ, ಕುಶಾಲನಗರ ಉಪ ವಿಭಾಗದ ನಂಜರಾಯಪಟ್ಟಣ ಗ್ರಾ.ಪಂ. ಸಭಾಂಗಣದಲ್ಲಿ ಹಾಗೂ ಸೋಮವಾರಪೇಟೆ ಉಪ ವಿಭಾಗದ ಕಟ್ಟೆಪುರ ಗ್ರಾಮದ ಕಟ್ಟೆಪುರ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನ.19 ರಂದು ಬೆಳಗ್ಗೆ 11 ಗಂಟೆಯಿಂದ ವಿದ್ಯುತ್ ಅದಾಲತ್ ನಡೆಯಲಿದೆ.

ಮುಖ್ಯಮಂತ್ರಿ ವಿದ್ಯಾನಿಧಿ ಕಾರ್ಯಕ್ರಮ

ಮಡಿಕೇರಿ, ನ.18– ಸರ್ಕಾರದ ಆದೇಶದಂತೆ 2022–23ನೇ ಸಾಲಿನಿಂದ ಮುಖ್ಯಮಂತ್ರಿ ವಿದ್ಯಾನಿಧಿ ಕಾರ್ಯಕ್ರಮವನ್ನು ಮೀನುಗಾರರ ಮೀನು ಕೃಷಿಕರ ಮಕ್ಕಳಿಗೂ ವಿಸ್ತರಿಸಿದ್ದು ಕೊಡಗು ಜಿಲ್ಲೆಯ ಸಕ್ರಿಯ ಮೀನುಗಾರರು, ಮೀನುಕೃಷಿಕರ ಮಕ್ಕಳ 8 ರಿಂದ 10ನೇ ತರಗತಿವರೆಗೆ (ಹೆಣ್ಣು ಮಕ್ಕಳಿಗೆ ಮಾತ್ರ) ಮತ್ತು ಎಸ್‌ಎಲ್‌ಎಲ್‌ಸಿ ಪೂರ್ಣಗೊಳಿಸಿದ ನಂತರ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗೆ ಹಾಗೂ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಹೊಸ ಶಿಷ್ಯವೇತನ ಯೋಜನೆಯ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮಡಿಕೇರಿ, ಸೋಮವಾರಪೇಟೆ, ಪೊನ್ನಂಪೇಟೆ ಕಚೇರಿಯನ್ನು ಸಂಪರ್ಕಿಸುವಂತೆ ಮೀನುಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ.

ವಿರಾಜಪೇಟೆ ರಸ್ತೆ ದುರಸ್ತಿಗೆ ಮಳೆಯಿಂದ ಅಡ್ಡಿ

ಮಳೆ ನಿಂತ ಕೂಡಲೇ ಕಾಮಗಾರಿ ಆರಂಭ: ಶಾಸಕ ಕೆ.ಜಿ.ಬೋಪಯ್ಯ



ವಿರಾಜಪೇಟೆ, ನ.18– ಈ ವರ್ಷ ಪದೇ ಪದೇ ಸುರಿಯುತ್ತಿರುವ ಮಳೆಯಿಂದಾಗಿ ದುಸ್ಥಿತಿಯಲ್ಲಿರುವ ರಸ್ತೆಗಳ ಅಭಿವೃದ್ಧಿ ಕಾಮಗಾರಿ ವಿಳಂಬವಾಗುತ್ತಿದ್ದು, ಮಳೆನಿಂತ ಕೂಡಲೇ ಎಲ್ಲಾ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಶಾಸಕ ಕೆ.ಜಿ.ಬೋಪಯ್ಯ ಸ್ಪಷ್ಟಪಡಿಸಿದ್ದಾರೆ.

ವಿರಾಜಪೇಟೆ ತಾಲೂಕಿನ ಕೆದಮಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗುಂಡಿಕೆರೆ ಬಾರಿಕಾಡು ಹಾಗೂ ಬೀಟೆಕಾಡು ಸಂಪರ್ಕ ರಸ್ತೆ ಮತ್ತು ಮಂಜೆಮರದಿಂದ ಕೊಟ್ಟೋಳಿ ಪರಿಶಿಷ್ಟ ಜಾತಿ ಕಾಲೋನಿಗೆ 19 ಲಕ್ಷ ರೂ. ಅನುದಾನದಲ್ಲಿ ನೂತನ ಕಾಂಕ್ರೀಟ್ ರಸ್ತೆ ಉದ್ಘಾಟಿಸಿದ ಬಳಿಕ ಮಾತನಾಡಿ, ಟೀಕೆ ಮಾಡುವ ಜನರು ಮಾಡಲಿ, ಎಲ್ಲರಿಗೂ ಉತ್ತರ ಹೇಳಲು ಸಮಯವಿಲ್ಲ. ಮಳೆ ಬರುವಾಗ ರಸ್ತೆಗೆ ಡಾಂಬರು ಹಾಕಿದರೆ ಪ್ರಯೋಜನವಿಲ್ಲ. ಈಗಾಗಲೇ ಅಮ್ಮತ್ತಿ ಸಿದ್ದಾಪುರ ರಸ್ತೆ ಕಾಮಗಾರಿ ಪ್ರಾರಂಭವಾಗಿದ್ದು, ಕೆಲವೇ ದಿನಗಳಲ್ಲಿ ಎಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದರು.

ರಸ್ತೆ ಕಾಮಗಾರಿಗಳು ನಡೆಯುವ ಸಂದರ್ಭ ಸ್ಥಳೀಯರು ಸಹಕಾರ ನೀಡಬೇಕು. ಚುನಾವಣೆ ಸಂದರ್ಭದಲ್ಲಿ ಪಕ್ಷ ಮತ್ತು ಚಿಹ್ನೆ, ಗೆದ್ದನಂತರ ಎಲ್ಲರ ಪ್ರತಿನಿಧಿ, ಪ್ರತಿಯೊಬ್ಬರಿಗೂ ಬದುಕಲು ಮನೆ ಅವಶ್ಯವಿದೆ ಹಾಗೆ ವಿದ್ಯುತ್, ಕುಡಿಯುವ ನೀರು ಮೂಲ ಸೌಲಭ್ಯಗಳನ್ನು ಸರಕಾರದಿಂದ ಒದಗಿಸಿ ಕೊಡುವುದಾಗಿ ಭರವಸೆ ನೀಡಿದರು.

ಜಿಪಂ ಮಾಜಿ ಸದಸ್ಯ ಅಚ್ಚಪಂಡ ಮಹೇಶ್ ಗಣಪತಿ ಮಾತನಾಡಿ, ಕೆದಮಳ್ಳೂರು ಮತ್ತು ಬೇಟೋಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಗ್ಗಳತೋರಾ ಗ್ರಾಮಗಳಲ್ಲಿ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಇಲ್ಲಿನ ಗ್ರಾಮೀಣ ಭಾಗದ ರಸ್ತೆಗಳಿಗೆ ವಿರಾಜಪೇಟೆ ಕ್ಷೇತ್ರದ ಶಾಸಕರು ಸರಕಾರದಿಂದ ಹೆಚ್ಚು ಅನುದಾನ ತಂದು ಗ್ರಾಮದ ಕಾಲೋನಿಗಳಿಗೆ ಉತ್ತಮ ಕಾಂಕ್ರೀಟ್ ರಸ್ತೆ ಮಾಡಲಾಗಿದೆ. ಈಗ ಬಾಕಿ ಉಳಿದಿರುವ ಕೆಲವೇ ರಸ್ತೆಗಳು ಮುಂದಿನ ದಿನದಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯಲಿದೆ ಎಂದರು. ಈ ವೇಳೆ ಗ್ರಾಮದ ಹಿರಿಯರಾದ ಅಬ್ಬಾಸ್, ಕುವೆಲ್ಲರ ಉಮ್ಮರ್, ಗ್ರಾಪಂ ಸದಸ್ಯ ರಾಮಯ್ಯ, ಜಿಲ್ಲಾ ಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ರಘುನಾಣಯ್ಯ, ಶಕ್ತಿ ಕೇಂದ್ರದ ರತ್ನ ಅಯ್ಯಣ್ಣ, ಮದು ದೇವಯ್ಯ, ಉಮ್ಮರ್, ಗುತ್ತಿಗೆದಾರ ಅಚ್ಚಪಂಡ ಹರೀಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಡಿಕೇರಿ ವಾರ್ಡ್‌ಗಳಿಗೆ ಇಂದು ಶಾಸಕರ ಭೇಟಿ

ಮಡಿಕೇರಿ, ನ.18– ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರು ನ.19 ರಂದು ಬೆಳಗ್ಗೆ 11 ಗಂಟೆಗೆ ನಗರದ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿ ಸಾರ್ವಜನಿಕರ ಅಹವಾಲು ಸ್ವೀಕರಿಸಲಿದ್ದಾರೆ. ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಇತರರು ಪಾಲ್ಗೊಳ್ಳಲಿದ್ದಾರೆ.


ಅಕ್ರಮ ಗೋ ಮಾಂಸ ಮಾರಾಟ: ಆರೋಪಿ ಬಂಧನ

ಕೊಳ್ಳೇಗಾಲ, ನ.18– ಪಟ್ಟಣದ ಸಾಮಂದಿಗೇರಿ ಬಡಾವಣೆಯಲ್ಲಿ ಅಕ್ರಮವಾಗಿ ಗೋ ಮಾಂಸ ಮಾರಾಟ ಮಾಡುತ್ತಿದ್ದವರ ಮೇಲೆ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಬಸ್ತೀಪುರ ಬಡಾವಣೆಯ ಸೈಯದ್ ತಾಹೀರ್(28) ಎಂಬಾತ ಬಂಧಿತ ಆರೋಪಿ. ಮತ್ತೊಬ್ಬ ಆರೋಪಿ ಸೈಯದ್ ಅಕ್ರಮ್ ಪರಾರಿಯಾಗಿದ್ದಾನೆ. ಸುಮಾರು 14.850 ಕೆಜಿ ತೂಕದ ಗೋ ಮಾಂಸವನ್ನು ವಶಪಡಿಸಿಕೊಳ್ಳಲಾಗಿದೆ. ಇವರುಗಳು ಸಾಮಂದಿಗೇರಿಯ ಅಂಗಡಿಯೊಂದರಲ್ಲಿ ಅನೇಕ ದಿನಗಳಿಂದ ಗೋವನ್ನು ಕಡಿದು ಅದರ ಮಾಂಸ ಹಾಗೂ ಚರ್ಮಗಳನ್ನು ಮಾರಾಟ ಮಾಡುತ್ತಿರುವುದರ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಟೌನ್ ಕ್ರೈಂ ಎಸ್‌ಐ ಉಮಾವತಿ ತಮ್ಮ ಸಿಬ್ಬಂದಿಗಳ ಜೊತೆ ದಾಳಿ ನಡೆಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದರು. ದಾಳಿಯಲ್ಲಿ ಪೊಲೀಸ್ ಮುಖ್ಯಪೇದೆ ರಾಜೀವ್, ಮಹೇಶ್, ಪ್ರದೀಪ್, ಪೇದೆಗಳಾದ ಮಾಯಪ್ಪ, ಸಂಜಯ್ ಕುಮಾರ್ ಇದ್ದರು.

ಡಿಸೆಂಬರ್ ಮೊದಲ ವಾರ ಚಾ.ನಗರಕ್ಕೆ ಸಿಎಂ ಭೇಟಿ

ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚನೆ





ಚಾಮರಾಜನಗರ, ನ.18– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಡಿಸೆಂಬರ್ ಮೊದಲ ವಾರ ಜಿಲ್ಲೆಗೆ ಭೇಟಿ ನೀಡಿ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ, ಶಂಕುಸ್ಥಾಪನೆ ಹಾಗೂ ಫಲಾನುಭವಿಗಳಿಗೆ ಸವಲತ್ತು ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಅಗತ್ಯ ಕ್ರಮ ಕೈಗೊಳ್ಳುವಂತೆ ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಮುಖ್ಯಮಂತ್ರಿಯವರ ಜಿಲ್ಲೆಯ ಭೇಟಿ ಹಿನ್ನೆಲೆಯಲ್ಲಿ ನಡೆದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿಯವರು ಜಿಲ್ಲೆಗೆ ಡಿಸೆಂಬರ್ 2 ಇಲ್ಲವೇ 4 ರಿಂದ 5ರೊಳಗೆ ಒಂದು ದಿನ ಭೇಟಿ ನೀಡಲಿದ್ದಾರೆ. ಚಾಮರಾಜನಗರ ಪಟ್ಟಣ ಹಾಗೂ ಹನೂರಿನಲ್ಲಿ ಕಾರ್ಯಕ್ರಮ ಏರ್ಪಾಡಾಗಿದ್ದು, ಬಳಿಕ ಮುಖ್ಯಮಂತ್ರಿಯವರು ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳಿ ದೇವರ ದರ್ಶನ ಪಡೆದು ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಅಗತ್ಯ ಸಿದ್ಧತಾ ಕ್ರಮಗಳನ್ನು ವಹಿಸುವಂತೆ ನಿರ್ದೇಶನ ನೀಡಿದರು.

ಒಂದು ಸಾವಿರ ಕೋಟಿ ರೂ.ಗಳ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿಯವರು ನೆರವೇರಿಸುವರು. ವಿವಿಧ ಇಲಾಖೆಗಳ ವ್ಯಾಪ್ತಿಯ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸುವರು. ಈ ಬಹುದೊಡ್ಡ ಕಾರ್ಯಕ್ರಮ ಯಶಸ್ವಿಗೆ ಅಧಿಕಾರಿಗಳು ಯೋಜನಾ ಬದ್ಧವಾಗಿ ಎಲ್ಲಾ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ಪ್ರತಿ ಇಲಾಖೆಗಳು ತಮ್ಮ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಗಳ ಕುರಿತು ಸಂಪೂರ್ಣ ಮಾಹಿತಿ ಒದಗಿಸಬೇಕು. ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳಿಗೆ ಅನುಗುಣವಾಗಿ ಕಾರ್ಯಕ್ರಮದಲ್ಲಿ ಸೌಲಭ್ಯಗಳನ್ನು ವಿತರಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು. ಕೊಳ್ಳೇಗಾಲದಿಂದ ಹನೂರುವರೆಗೆ ಕೆಶಿಪ್ ಯೋಜನೆಯಡಿ ಕೈಗೆತ್ತಿಕೊಂಡಿರುವ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕಾಮಗಾರಿಗೆ ವೇಗ ನೀಡಿ ಎಲ್ಲಿಯೂ ಅಡಚಣೆಯಾಗದಂತೆ ರಸ್ತೆ ಕಾಮಗಾರಿ ನಿರ್ವಹಿಸಬೇಕು ಎಂದು ಸೋಮಣ್ಣ ಸೂಚನೆ ನೀಡಿದರು.

ಜಿಲ್ಲೆಯ ಕೆರೆ–ಕಟ್ಟೆಗಳಿಗೆ ನೀರು ತುಂಬಿಸಲು 1400 ಕೋಟಿ ರೂ. ವೆಚ್ಚದಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದೆ. ಎರಡು ಹಂತಗಳಲ್ಲಿ ಯೋಜನೆ ಕೈಗೊಳ್ಳುವ ಸಂಬಂಧ ಅಗತ್ಯ ಪ್ರಕ್ರಿಯೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರುವ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಮುಂದಾಗಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದರು.

ಶಾಸಕ ಎನ್. ಮಹೇಶ್, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್ ರಾಜ್, ಹಿರಿಯ ಅರಣ್ಯ ಅಧಿಕಾರಿಗಳಾದ ಡಾ. ಸಂತೋಷ್ ಕುಮಾರ್, ದೀಪಾ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಭಾರೀ ಗಾತ್ರದ ನಾಗರಹಾವು ರಕ್ಷಣೆ



ಕೊಳ್ಳೇಗಾಲ, ನ.18– ಕೊಳ್ಳೇಗಾಲ ತಾಲೂಕಿನ ಹರಳೆ ಗ್ರಾಮದಲ್ಲಿ ಮಲ್ಲೇಶ್ ಎಂಬುವರ ಮನೆಯಲ್ಲಿದ್ದ ಭಾರೀ ಗಾತ್ರದ ನಾಗರಹಾವೊಂದನ್ನು ಇಲ್ಲಿನ ಸ್ನೇಕ್ ಬಾಬು ಸುರಕ್ಷಿತವಾಗಿ ರಕ್ಷಿಸಿ ಅರಣ್ಯಕ್ಕೆ ಬಿಡುವಲ್ಲಿ ಯಶಸ್ವಿಯಾಗಿದ್ದಾರೆ.

ಚಾ.ನಗರದಲ್ಲಿ ದೊಡ್ಡಮ್ಮತಾಯಿ ಹಾಲರುವೆ ಉತ್ಸವ



ಚಾಮರಾಜನಗರ ನ.18– ದೊಡ್ಡಮ್ಮತಾಯಿ 7ನೇ ವರ್ಷದ ಹಾಲರುವೆ ಮಹೋತ್ಸವ ಶುಕ್ರವಾರ ನಗರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಹಾಲರುವೆ ಅಂಗವಾಗಿ ನಗರದ ಉಪ್ಪಾರ ಬಡಾವಣೆ ನಿವಾಸಿಗಳು ನಗರದ ದೊಡ್ಡರಸನ ಕೊಳದಲ್ಲಿ ಕಂಡಾಯಗಳಿಗೆ ಪೂಜೆ ಸಲ್ಲಿಸಿದರು. ನಂತರ ದೊಡ್ಡ ಅಂಗಡಿ, ಚಿಕ್ಕ ಅಂಗಡಿ ಬೀದಿ ಮೂಲಕ ಹಾಲರುವೆ, ಕಂಡಾಯ, ಹುಲಿವಾಹನದ ಮೆರವಣಿಗೆ ಕಲಾತಂಡಗಳ ಜತೆ ಸಾಗಿತು. ದೊಡ್ಡಮ್ಮತಾಯಿ ಮೂಲ ವಿಗ್ರಹಕ್ಕೆ ವಿವಿಧ ಬಗೆಯ ಹೂಗಳ ಅಲಂಕಾರ ಮಾಡಲಾಗಿತ್ತು. ಭಕ್ತಾದಿಗಳು ಸರದಿ ಸಾಲಿನಲ್ಲಿ ನಿಂತು ಪೂಜೆ ಸಲ್ಲಿಸಿದರು.

ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು. ಮಂಟೇಸ್ವಾಮಿ. ಮಹದೇಶ್ವರ ಪದ ಹಾಡುವ ನೀಲಗಾರರು, ಸಮುದಾಯದ ಯಜಮಾನರಾದ ಮಸಣಶೆಟ್ಟಿ, ಮಾದೇಶಶೆಟ್ಟಿ, ಪೈಲ್ವಾನ್ ನಂಜಪ್ಪಶೆಟ್ಟಿ, ನಂಜಶೆಟ್ಟಿ, ಮುತ್ತುರಾಜ್, ಕೋಟಿನಾಗಶೆಟ್ಟಿ, ಕೆ.ಟಿ.ನಾಗಶೆಟ್ಟಿ, ರಾಜಣ್ಣ, ಚನ್ನಿಗಶೆಟ್ಟಿ, ಕುಲಸ್ಥರು, ನಿವಾಸಿಗಳು ಹಾಜರಿದ್ದರು.

ಇಂದು ಡಾ. ವಿಜಯಕುಮಾರಿ ದತ್ತಿ ಕಾರ್ಯಕ್ರಮ

ಯಳಂದೂರು, ನ.18– ಪಟ್ಟಣದ ವೈ.ಎಂ. ಮಲ್ಲಿಕಾರ್ಜುನಸ್ವಾಮಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ (ನ.19) ಬೆಳಗ್ಗೆ 10 ಗಂಟೆಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಡಾ.ಡಿ.ಎಲ್. ವಿಜಯಕುಮಾರಿ ದತ್ತಿ ಕಾರ್ಯಕ್ರಮ ನಡೆಯಲಿದೆ. ಮಾಜಿ ಶಾಸಕ ಎಸ್.ಬಾಲರಾಜು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಾಹಿತಿ ಸೋಮಶೇಖರ ಬಿಸಲ್ವಾಡಿ ಕರ್ನಾಟಕ ಏಕೀಕರಣ ಚಳವಳಿ ಕುರಿತು ದತ್ತಿ ಉಪನ್ಯಾಸ ನೀಡಲಿದ್ದಾರೆ.

ರೈತರ, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ

ಚಾಮರಾಜನಗರ, ನ.18– ಜಿಲ್ಲೆಯ ರೈತರು ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಬೇಕು. ನಿರ್ಲಕ್ಷ್ಯ ಧೋರಣೆ ತೋರಿದರೆ ಸಹಿಸುವುದಿಲ್ಲ ಎಂದು ವಸತಿ, ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ.ಸೋಮಣ್ಣ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ರೈತರಿಗೆ ಸಂಬಂಧಿಸಿದ ವಿಷಯಗಳು ಹಾಗೂ ಕೆರೆಗಳಿಗೆ ನೀರು ತುಂಬಿಸುವ ಸಂಬಂಧ ರೈತ ಸಂಘಟನೆಗಳ ಮುಖಂಡರು, ಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರೈತರು, ಜನಸಾಮಾನ್ಯರ ಹಿತ ಕಾಯುವುದಕ್ಕಾಗಿ ನಾವೆಲ್ಲಾ ಇದ್ದೇವೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸಬೇಕು. ಅವರ ಸಮಸ್ಯೆಗಳಿಗೆ ತುರ್ತಾಗಿ ಸ್ಪಂದಿಸಬೇಕು. ರೈತರ ಅನುಕೂಲಕ್ಕಾಗಿ ಇರುವ ಯೋಜನೆ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಲೋಪವಾದರೆ ಕ್ರಮ ಜರುಗಿಸಬೇಕಾಗುತ್ತದೆ ಎಂದು ಉಸ್ತುವಾರಿ ಸಚಿವರು ತಿಳಿಸಿದರು.

ಕರ ನಿರಾಕರಣೆ ಸಂಬಂಧ ವಿದ್ಯುತ್ ಬಾಕಿ ಮನ್ನಾ ಮಾಡುವ ಸಂಬಂಧ ಸಚಿವ ಸಂಪುಟದ ಮುಂದೆ ತರುವ ನಿಟ್ಟಿನಲ್ಲಿ ಸೋಮವಾರ ಇಲ್ಲವೇ ಮಂಗಳವಾರವೇ ಅಧಿಕಾರಿಗಳು ಬೆಂಗಳೂರಿಗೆ ಬಂದು ಅಗತ್ಯ ಪ್ರಕ್ರಿಯೆ ವಹಿಸಬೇಕು ಎಂದು ಸಚಿವರು ಸೂಚಿಸಿದರು.

ರೈತರ ಅಹವಾಲು, ಸಮಸ್ಯೆಗಳನ್ನು ಆಲಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಮಾತನಾಡಿ, ಇಲಾಖೆಗಳು ರೈತರಿಗೆ ಅನುಕೂಲ ಮಾಡಿಕೊಡಬೇಕು. ಯಾವುದೇ ಕಮಿಷನ್ ಪಡೆಯಬಾರದು. ಜಿಲ್ಲಾಧಿಕಾರಿಗಳು ಈ ಬಗ್ಗೆ ಪರಿಶೀಲಿಸಬೇಕು. ವಾರಕ್ಕೆ ಒಂದು ದಿನ ರೈತರ ಸಭೆ ಕರೆದು ಅವರ ಸಮಸ್ಯೆಗಳನ್ನು ಪರಿಹರಿಸಬೇಕು. ಅರಣ್ಯ ಇಲಾಖೆ ಅಧಿಕಾರಿಗಳು ಹಾಡಿ ಪೋಡುಗಳ ಜನರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ವಿದ್ಯುತ್ ಸಂಪರ್ಕ ಕಡಿತ ಮಾಡಬಾರದು ಎಂದರು.

ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಎನ್. ಮಹೇಶ್, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ. ನಿಜಗುಣರಾಜು, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಲ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಕುಲಕರ್ಣಿ, ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಜಿಲ್ಲಾ ಎಸ್‌ಪಿ ಟಿ.ಪಿ. ಶಿವಕುಮಾರ್, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶಂಕರೇಗೌಡ, ಹಿರಿಯ ಅರಣ್ಯ ಅಧಿಕಾರಿಗಳಾದ ಡಾ. ಸಂತೋಷ್ ಕುಮಾರ್, ರಮೇಶ್ ಕುಮಾರ್, ದೀಪಾ, ರೈತ ಮುಖಂಡರಾದ ಹೊನ್ನೂರು ಪ್ರಕಾಶ್, ಮಹೇಶ್ ಪ್ರಭು, ಡಾ. ಗುರುಪ್ರಸಾದ್, ಹಳ್ಳಿಕೆರೆಹುಂಡಿ ಭಾಗ್ಯರಾಜ್, ಹೆಗ್ಗವಾಡಿಪುರ ಮಹೇಶ್‌ಕುಮಾರ್, ಕಡಬೂರು ಮಂಜುನಾಥ್, ಶಾಂತಮಲ್ಲಪ್ಪ, ಶೈಲೇಂದ್ರ, ಮಹದೇವಪ್ಪ, ಸೇರಿದಂತೆ ಇತರೆ ಮುಖಂಡರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಗೂ ಮೊದಲು ಸಚಿವರು ಕೆರೆಗಳಿಗೆ ನೀರು ತುಂಬಿಸುವ ಸಂಬಂಧ ತಮ್ಮಡಹಳ್ಳಿ ಕೆರೆಗೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಗೌಡಹಳ್ಳಿ: ನರೇಗಾದಡಿ 1.03 ಕೋಟಿ ರೂ. ಕಾಮಗಾರಿ

ಯಳಂದೂರು, ನ.18–ತಾಲೂಕಿನ ದೊಡ್ಡ ಗ್ರಾಮ ಪಂಚಾಯಿತಿಗಳಲ್ಲಿ ಒಂದಾಗಿರುವ ಗೌಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಸಕ್ತ ಸಾಲಿನಲ್ಲಿ 1.03 ಕೋಟಿ ರೂ. ಕಾಮಗಾರಿ ನಡೆದಿದೆ ಎಂದು ಗ್ರಾಪಂ ಅಧ್ಯಕ್ಷೆ ಶಿವನಂಜಮ್ಮ ಮಾಹಿತಿ ನೀಡಿದರು.

ಶುಕ್ರವಾರ ಗ್ರಾಮ ಪಂಚಾಯಿತಿ ಆವರಣದಲ್ಲಿ ನಡೆದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಾಮಾಜಿಕ ಲೆಕ್ಕ ತಪಾಸಣಾ ಗ್ರಾಮಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳಲ್ಲಿ ಅರಣ್ಯ, ಕೃಷಿ, ರೇಷ್ಮೆ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳು, ಗ್ರಾಮ ಪಂಚಾಯಿತಿಯ ಒಟ್ಟು 224 ಕಾಮಗಾರಿಗಳು ನಡೆದಿವೆ. ಇದರಲ್ಲಿ 16.79 ಲಕ್ಷ ರೂ. ಕೂಲಿ ಹಣವನ್ನು ಪಾವತಿಸಲಾಗಿದ್ದು 87.78 ಲಕ್ಷ ರೂ. ಸಾಮಗ್ರಿಗಳಿಗೆ ವ್ಯಯ ಮಾಡಲಾಗಿದೆ ಉದ್ಯೋಗ ಖಾತ್ರಿ ಯೋಜನೆಯು ಪಂಚಾಯಿತಿ ಅಭಿವೃದ್ಧಿಗೆ ಇರುವ ಒಂದು ಉಪಯೋಗಕಾರಿ ಯೋಜನೆಯಾಗಿದ್ದು ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಕೂಲಿ ಲಭ್ಯವಾಗುವ ಜೊತೆಗೆ ಗ್ರಾಮಗಳ ಅಭಿವೃದ್ಧಿಯೂ ಆಗಲಿದೆ. ಅಲ್ಲದೆ ರೈತರು ತಮ್ಮ ಜಮೀನುಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು, ರಸ್ತೆ ನಿರ್ಮಿಸಿಕೊಳ್ಳಲು ಇದರಿಂದ ಸಾಧ್ಯವಿದ್ದು ಪ್ರತಿಯೊಬ್ಬರೂ ಇದರ ಲಾಭವನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೆ ಸಂದರ್ಭದಲ್ಲಿ ಬನ್ನಿಸಾರಿಗೆ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಬ್ಯಾಂಕಿನಲ್ಲಿ ಖಾತೆ ಇಲ್ಲದ ಕಾರ್ಮಿಕರ ಕೂಲಿ ಮೊತ್ತವನ್ನು ಬೇರೆಯವರ ಖಾತೆಗೆ ಹಾಕಲಾಗಿದ್ದು ಕೆಲಸ ಮಾಡಿದವರಿಗೆ ಕೂಲಿ ಇಲ್ಲದಂತಾಗಿದ್ದು, ಇದನ್ನು ಕೊಡಿಸಿಕೊಡಬೇಕು ಎಂದು ಕೆಲ ಕಾರ್ಮಿಕರು ಸಭೆಯಲ್ಲಿ ಮನವಿ ಮಾಡಿದರು. ಪಿಡಿಓ ಗಿರೀಶ್ ಈ ಬಗ್ಗೆ ಕೂಡಲೇ ಕ್ರಮ ವಹಿಸುವ ಭರವಸೆಯನ್ನು ನೀಡಿದರು. ಗ್ರಾಪಂ ಉಪಾಧ್ಯಕ್ಷ ಆರ್.ರಘು, ಸದಸ್ಯರಾದ ಚಂದ್ರಶೇಖರ್, ಪ್ರಭುಸ್ವಾಮಿ, ಚಿನ್ನಸ್ವಾಮಿ, ಉಮೇಶ್, ನಾಗರಾಜು, ಸುಂದರ್, ಪ್ರಸನ್ನಕುಮಾರ್, ನೋಡಲ್ ಅಧಿಕಾರಿ ಮಲ್ಲಿಕಾರ್ಜುನಸ್ವಾಮಿ, ಲೆಕ್ಕ ಸಹಾಯಕ ನಾಗೇಶ್ ಸೇರಿದಂತೆ ನರೇಗಾ ತಾಲೂಕು ಸಂಯೋಜಕರ ತಂಡದ ಸದಸ್ಯರು ಪಂಚಾಯಿತಿ ವ್ಯಾಪ್ತಿಯ ಕೆಲ ಗ್ರಾಮಸ್ಥರು ಹಾಜರಿದ್ದರು.

ಒಂದನೇ ಪುಟದಿಂದ

ಪಂಚರತ್ನ ಯಾತ್ರೆಗೆ ಅದ್ಧೂರಿ ಚಾಲನೆ

ಜೆಡಿಎಸ್ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಜೆಡಿಎಸ್ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ಮಾತನಾಡಿ, ಕಾಂಗ್ರೆಸ್ ಅವರ ಸ್ವಯಂ ಕೃತ ಅಪರಾಧದಿಂದ ಅಳಿವಿನ ಅಂಚಿಗೆ ಹೋಗಿದ್ದಾರೆ ಎಂದರು. ಮಾಜಿ ಮುಖ್ಯ ಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಸಿದ್ದರಾಮಯ್ಯ ಪಂಚರತ್ನ ಯಾತ್ರೆಯ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ. ನಾನಾ ಭಾಗ್ಯಗಳಿಂದ ಬಡ ಜನರಿಗೆ ಯಾವುದೇ ಉಪಯೋಗ ಇಲ್ಲ. ಬಡವರಿಗೆ ಮುಖ್ಯವಾಗಿ ಬೇಕಾದದ್ದು ಆರೋಗ್ಯ ಭಾಗ್ಯ, ವಸತಿ, ದುಡಿಯುವ ಕೈಗಳಿಗೆ ಉದ್ಯೋಗ, ನೀರಾವರಿ, ಕೃಷಿ ಸೌಕರ್ಯ. ಸಿದ್ದರಾಮಯ್ಯ, ರಮೇಶ್ ಕುಮಾರ್ ಸೇರಿ ಕೋಲಾರಕ್ಕೆ ಕೊಳಚೆ ನೀರನ್ನು ತಂದರು. ಇದರಿಂದ ಈಗಾಗಲೇ ಇಲ್ಲಿನ ಟಮೋಟೋಗೆ ರೋಗಗಳು ಹೆಚ್ಚಾಗಿ ಬೆಲೆ ಇಲ್ಲದಂತಾಗಿದೆ ಎಂದು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ದೆಹಲಿಯಿಂದ ಲಕೋಟೆ ಬಂದು ಅದರಂತೆ ಆಡಳಿತ ನಡೆಸುವ ಪಕ್ಷ ಬಿಜೆಪಿ. ಅವರಿಂದ ಜನರಿಗೆ ಯಾವುದೇ ಪ್ರಯೋಜನ ಇಲ್ಲ, ಇಂತಹ ದರಿದ್ರ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಿದ್ದು ಕಾಂಗ್ರೆಸ್‌ನವರು ಎಂದು ಸರ್ಕಾರಕ್ಕೆ ಚಾಟಿ ಬೀಸಿದ್ದಾರೆ.

ಭಾರತ ಐಕ್ಯತಾ ಯಾತ್ರೆ, ಜನಸಂಕಲ್ಪ ಯಾತ್ರೆಯ ಬೆನ್ನಲ್ಲೇ ಜೆಡಿಎಸ್ ಪಂಚರತ್ನ ರಥಯಾತ್ರೆ ಹೆಸರಿನಲ್ಲಿ ಮತದಾರರ ಬುಟ್ಟಿಗೆ ಕೈಹಾಕಲು ಹೊರಟಿದೆ. ಮತ್ತೆ ಮುಖ್ಯಮಂತ್ರಿ ಆಗಬೇಕು ಎಂಬ ಹಠ ತೊಟ್ಟಿರುವ ಹೆಚ್.ಡಿ.ಕುಮಾರಸ್ವಾಮಿ, 123 ವಿಧಾನಸಭಾ ಕ್ಷೇತ್ರಗಳನ್ನು ಗುರಿಯಾಗಿಟ್ಟುಕೊಂಡು ಈ ಯಾತ್ರೆ ಆರಂಭಿಸಿದ್ದಾರೆ.

ಈಗಾಗಲೇ ನೂರು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಎಂದು ಬೆನ್ನು ತಟ್ಟಿ ಉಮೇದುವಾರರನ್ನು ಕಣಕ್ಕಿಳಿಸಿರುವ ಕುಮಾರಸ್ವಾಮಿ, ಇದೀಗ ಪಂಚಸೂತ್ರಗಳನ್ನು ಮುಂದಿಟ್ಟುಕೊಂಡು ಈ ಯಾತ್ರೆ ಆರಂಭಿಸಿದ್ದಾರೆ. ಮೊದಲ ಹಂತದಲ್ಲಿ 34 ಕ್ಷೇತ್ರಗಳನ್ನು ಇದೇ ಪ್ರಮಾಣದಲ್ಲಿ ಎರಡು ಮೂರನೇ ಹಂತದಲ್ಲಿ ತಮ್ಮ ಪ್ರವಾಸ ಮುಗಿಸಿ ಮುಂದಿನ ಚುನಾವಣೆಗೆ ತಮ್ಮ ಶಕ್ತಿ ಏನೆಂಬುದನ್ನು ತೋರಿಸುತ್ತಿದ್ದಾರೆ. ಪಂಚರತ್ನ ಯಾತ್ರೆ ಕೈಗೊಳ್ಳುವ ಮುನ್ನ ಕಳೆದ ಆರು ತಿಂಗಳಿಂದ ಚುನಾವಣಾ ಕಸರತ್ತು ನಡೆಸಿರುವ ಅವರು, ನಾಲ್ಕು ಗೋಡೆಗಳ ಮಧ್ಯೆಯೇ 123 ಕ್ಷೇತ್ರಗಳ ಅಭ್ಯರ್ಥಿ ಯಾರಾಗಬೇಕು ಎಂದು ನಿರ್ಧಾರ ಮಾಡಿರುವುದಲ್ಲದೆ, ಆ ಕ್ಷೇತ್ರಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ನಾನಾ ಯೋಜನೆ ರೂಪಿಸಿದ್ದಾರೆ.

ಕುಮಾರಸ್ವಾಮಿ ಅಲ್ಪಸಂಖ್ಯಾತರ ಮತಗಳನ್ನು ಸಾಧ್ಯವಾದಷ್ಟು ಪಕ್ಷಕ್ಕೆ ಸೆಳೆಯಲು ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರನ್ನು ಮುಂದಿಟ್ಟುಕೊಂಡಿದ್ದರೆ, ಮತ್ತೊಂದೆಡೆ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿಗೆ ರಾಜಕೀಯವಾಗಿ ಶಕ್ತಿ ತುಂಬಲು ಅವರನ್ನು ಈ ಯಾತ್ರೆಯ ಮುಂಚೂಣಿಯಲ್ಲಿರಿಸಿದ್ದಾರೆ. ಶುಕ್ರವಾರ ರಾತ್ರಿ ಮುಳಬಾಗಿಲು ತಾಲೂಕಿನ ಉರುಕುಂಟೆ ಮಿಟ್ಟೂರು ಗ್ರಾಮದಲ್ಲಿ ಗ್ರಾಮ ವಾಸ್ತವ್ಯ ಹೂಡುವ ಮುಖಾಂತರ ಗ್ರಾಮವಾಸ್ತವ್ಯಕ್ಕೆ ಚಾಲನೆಯನ್ನು ಸಹ ಕುಮಾರಸ್ವಾಮಿ ನೀಡಿದ್ದಾರೆ.

ಭ್ರಷ್ಟಾಚಾರ ತಾಂಡವವಾಡುತ್ತಿದೆ

ಬಂದಾಗ ಪ್ರೀತಿಯಿಂದ ಗೆಲ್ಲಿಸಿ ಸಂಸತ್‌ಗೆ ಕಳುಹಿಸಿಕೊಟ್ಟಿದ್ದಾರೆ. ಅವರ ಸೇವೆ ಮಾಡಬೇಕು ಎಂಬ ಕಾರಣಕ್ಕೆ ನಾನು ಬೆಂಗಳೂರು–ಮೈಸೂರು 10 ಪಥಗಳ ರಸ್ತೆ ತಂದಿದ್ದೇನೆ. ಇದರಿಂದ ಅಧಿಕ ಪ್ರಮಾಣದಲ್ಲಿ ಕೈಗಾರಿಕೆಗಳು, ಕಂಪನಿಗಳು ಮೈಸೂರಿಗೆ ಬರುತ್ತವೆ. ಯುವ ಸಮುದಾಯಕ್ಕೆ ಕೆಲಸ ಸಿಗಲಿದೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರೊಬ್ಬರನ್ನು ಮಾತ್ರ ನಾನು ತುಂಬಾ ಗೌರವಿಸುತ್ತೇನೆ. ಅವರು ಬೆಂಗಳೂರು ಮತ್ತು ಮೈಸೂರು ನಡುವೆ ನಾಲ್ಕು ಪಥದ ರಸ್ತೆಯನ್ನು ಮಾಡಿದರು. ಇನ್ಫೋಸಿಸ್ ಟ್ರೈನಿಂಗ್ ಸೆಂಟರ್ ಇಲ್ಲಿಗೆ ಬಂದಿರುವುದೂ ಕೂಡ ಅವರಿಂದಲೇ. ಮೈಸೂರಿನಲ್ಲಿ ರಿಂಗ್ ರಸ್ತೆ ಯೋಜನೆ ಮಾಡಿದವರೂ ಅವರೇ. ಎಸ್.ಎಂ.ಕೃಷ್ಣ ಅವರನ್ನು ಬಿಟ್ಟರೆ ದೂರದೃಷ್ಟಿಯುಳ್ಳ ಮುಖ್ಯಮಂತ್ರಿ ಕರ್ನಾಟಕಕ್ಕೆ ಸಿಗಲಿಲ್ಲ. ಎಲ್ಲರೂ ಕೃಷಿ ಆಧಾರಿತ ಅಭಿವೃದ್ಧಿಗೆ ಮಾತ್ರ ಆದ್ಯತೆ ನೀಡಿದರು ಎಂದರು.

ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಮೈಸೂರು ವಸ್ತು ಪ್ರದರ್ಶನ ಮೈದಾನದಲ್ಲಿ 'ಸ್ವದೇಶ್ ದರ್ಶನ್' ಯೋಜನೆಯಡಿ ಹಂಪಿ ಮತ್ತು ಮೈಸೂರನ್ನು ಶಾರ್ಟ್ ಲಿಸ್ಟ್ ಮಾಡಲಾಗಿದ್ದು, 200 ಕೋಟಿ ರೂ. ವೆಚ್ಚದಲ್ಲಿ ಮಾರುಕಟ್ಟೆ ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ಈ ಮೂರರಲ್ಲೇ ಒಂದೆಡೆ ಸ್ಪರ್ಧೆ

ಕ್ಷೇತ್ರದಲ್ಲಿ ಸ್ಪರ್ಧೆ ಮಾಡುತ್ತೇನೆ ಎಂಬುದನ್ನು ಪ್ರಕಟಿಸುತ್ತೇನೆ. ಈ ಬಾರಿ ಒಂದೇ ಕ್ಷೇತ್ರದಲ್ಲಿ ಸ್ಪರ್ಧಿಸುತ್ತೇನೆ. ಹೈಕಮಾಂಡ್ ಕೂಡ ಯಾವ ಕ್ಷೇತ್ರ ಎಂದು ತೀರ್ಮಾನ ಮಾಡಬೇಕು. ಅವರು ಈ ಮೂರರಲ್ಲಿ ಎಲ್ಲಿ ನಿಲ್ಲುವಂತೆ ಸೂಚಿಸುತ್ತಾರೋ, ಅಲ್ಲಿಂದ ಸ್ಪರ್ಧಿಸುತ್ತೇನೆ. ನಾಮಿನೇಷನ್ ಹಾಕೋವಾಗ ಎಲ್ಲಿ ಅಂತ ತಿಳಿಸುತ್ತೇನೆ ಎಂದು ಪುನರುಚ್ಚರಿಸಿದರು.

ಸರ್ವೆ ಮಾಡಿಸೋದರಲ್ಲಿ ತಪ್ಪೇನು: ಚುನಾವಣೆಗೆ ಸಂಬಂಧಿಸಿದಂತೆ ಚುನಾವಣೋತ್ತರ ಸಮೀಕ್ಷೆ ಮಾಡಿಸುವುದು ಸಾಮಾನ್ಯ. ಈ ಹಿಂದೆ ಬಿಜೆಪಿಯೂ ಸಮೀಕ್ಷೆ ಮಾಡಿಸಿದೆ. ಸರ್ವೆ ಮಾಡಿಸೋದರಲ್ಲಿ ತಪ್ಪೇನಿದೆ? ಕಾಂಗ್ರೆಸ್ ಪಕ್ಷದಿಂದಲೂ ಸರ್ವೆ ಮಾಡಿಸಲಾಗಿದೆ. ಅದನ್ನೇ ಅಪರಾಧವೆಂಬಂತೆ ಬಿಜೆಪಿ ನಾಯಕರು ಮಾತಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಚುನಾವಣೆ ವೇಳೆ ಎಲ್ಲಾ ಕ್ಷೇತ್ರಗಳಲ್ಲೂ ಪ್ರವಾಸ ಕೈಗೊಳ್ಳಬೇಕು. ಪಕ್ಷದ ಎಲ್ಲಾ ಅಭ್ಯರ್ಥಿಗಳ ಪರ ಪ್ರಚಾರ ಮಾಡಬೇಕು. ಅದಕ್ಕಾಗಿ ಸುರಕ್ಷಿತ ಕ್ಷೇತ್ರದಲ್ಲಿ ಸ್ಪರ್ಧಿಸುವುದರಲ್ಲಿ ತಪ್ಪೇನಿದೆ. ಪ್ರಧಾನಿ ಮೋದಿ ಕೂಡ ಸರ್ವೆ ಮಾಡಿಸಿದ್ದರು. ಸರ್ವೆ ಮಾಡಿಸದೆ ಚುನಾವಣೆ ಎದುರಿಸಿದ್ರಾ?. ನಮಗೆ ಹೇಳುವ ಮೊದಲು ತಾವೇನು ಮಾಡಿದ್ದೋ ಎಂದು ತಿಳಿದುಕೊಳ್ಳಬೇಕಲ್ವಾ?. ಬಿಜೆಪಿಯವರು ಏನು ಹೇಳಿದರೂ ಮಾಧ್ಯಮದವರು ಪ್ರಶ್ನಿಸೋದೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಪರೇಷನ್ ಕಮಲದ ಮುಂದುವರೆದ ಭಾಗ: ಮತದಾರರ ಪಟ್ಟಿಯಲ್ಲಿ ಹೆಸರು ಡಿಲೀಟ್ ಮಾಡಿರುವುದು ಆಪರೇಷನ್ ಕಮಲ ಹಾಗೂ ಭ್ರಷ್ಟಾಚಾರದ ಮುಂದುವರೆದ ಭಾಗವಾಗಿದೆ. ರಾಜ್ಯ ಸರ್ಕಾರ ಶೇ.40ರಷ್ಟು ಕಮಿಷನ್ ಪಡೆಯುವ ಸರ್ಕಾರ ಎಂದು ಎಲ್ಲರಿಗೂ ಗೊತ್ತಾಗಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಏನು ಬೇಕೋ ಅದನ್ನೆಲ್ಲಾ ಬಿಜೆಪಿಯವರು ಮಾಡುತ್ತಾರೆ. ಏನೆಲ್ಲಾ ಆಟ ಆಡುತ್ತಾರೆ ನೋಡಿ. ಆಪರೇಷನ್ ಕಮಲ ಹುಟ್ಟು ಹಾಕಿದ್ದು ಬಿ.ಎಸ್.ಯಡಿಯೂರಪ್ಪ. ಈಗ ಮತದಾರರ ಪಟ್ಟಿಗೆ ಕೈ ಹಾಕಿದ್ದಾರೆ ಎಂದು ದೂರಿದರು.

ಖಾಸಗಿ ಸಂಸ್ಥೆ ನಿಯೋಜಿಸಿದ್ದು ಅಪರಾಧ: ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಖಾಸಗಿ ವ್ಯಕ್ತಿ ಅಥವಾ ಖಾಸಗಿ ಸಂಸ್ಥೆಯನ್ನು ನಿಯೋಜಿಸಿದ್ದು ಅಪರಾಧ. ಬೂತ್ ಲೆವೆಲ್ ಅಧಿಕಾರಿಗಳ ಮೂಲಕ ಪರಿಷ್ಕರಣೆ ಮಾಡಿಸಬೇಕು. ಬಿಎಲ್‌ಓಗಳು ಸರ್ಕಾರಿ ಸಿಬ್ಬಂದಿಗಳೇ ಆಗಿರಬೇಕೆಂಬ ನಿಯಮವಿದೆ. ಆದರೆ ಖಾಸಗಿ ವ್ಯಕ್ತಿಗಳನ್ನು ಬಿಎಲ್‌ಓಗಳಾಗಿ ನಿಯೋಜಿಸುವುದು ಎಷ್ಟು ಸರಿ. ಮತದಾರರ ಮಾಹಿತಿಯನ್ನು ಕಳ್ಳತನ ಮಾಡಲು ಇದು ಸಹಕಾರಿಯಾಗಲಿದೆ. ಇದು ಪೀಪಲ್ ರೆಫರೆನ್ಸ್ ಆಕ್ಟ್ ಅಡಿಯಲ್ಲಿ ಅಪರಾಧ ಕೃತ್ಯವಾಗಲಿದೆ. ಬಿಎಲ್‌ಓಗಳಾಗಿ ಸರ್ಕಾರಿ ನೌಕರರನ್ನೇ ನಿಯೋಜಿಸುವಂತೆ ಕಾನೂನು ಹೇಳುತ್ತದೆ. ಹಾಗಿದ್ದರೂ ಖಾಸಗಿ ವ್ಯಕ್ತಿಗಳನ್ನು ನೇಮಕ ಮಾಡಿರೋದಕ್ಕೆ ಕಾರಣವೇನು? ಎಂದು ಪ್ರಶ್ನಿಸಿದರು. ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ಬೆಂಗಳೂರಲ್ಲಿ ಚಿಲುಮೆ ಹಾಗೂ ಹೊಂಬಾಳೆ ಎಂಬ ಖಾಸಗಿ ಸಂಸ್ಥೆಗೆ ಅನುಮತಿ ನೀಡಲಾಗಿದೆ. ಈ ಎರಡು ಸಂಸ್ಥೆಗೆ ಕೃಷ್ಣಪ್ಪ ರವಿಕುಮಾರ್ ಮಾಲೀಕರಾಗಿದ್ದಾರೆ. ಮಲ್ಲೇಶ್ವರಂನಲ್ಲಿ ಕಚೇರಿ ತೆರೆದಿದ್ದರು. 2022ರ ಆ.20ರಂದು ಬಿಬಿಎಂಪಿ ಆಯುಕ್ತರು ಈ ಸಂಸ್ಥೆಗೆ ಮತದಾರರ ಪರಿಷ್ಕರಣೆ ಮಾಡಲು ಮತ್ತು ಮತದಾರರಲ್ಲಿ ಜಾಗೃತಿ ಮೂಡಿಸಲು ಅನುಮತಿ ಕೊಟ್ಟಿದ್ದಾರೆ. ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಹೊಂದಿದ್ದಾರೆ. ಅವರ ಗಮನಕ್ಕೆ ತರದೇ ಖಾಸಗಿ ಸಂಸ್ಥೆಗೆ ಜವಾಬ್ದಾರಿ ನೀಡಲಾಗಿದೆ ಎನ್ನುವುದು ಶುದ್ಧ ಸುಳ್ಳು. ಟೆಂಡರ್ ಕರೆಯದೇ ಏಕಾಏಕಿ ಆ ಸಂಸ್ಥೆಗೆ ಅನುಮತಿ ನೀಡಲಾಗಿದೆ. ಲಾಭವಿಲ್ಲದೇ ಯಾವುದಾದರೂ ಖಾಸಗಿ ಸಂಸ್ಥೆಗಳು ಕೆಲಸ ಮಾಡುವುದಿಲ್ಲ. ಮತದಾರರ ಬಗ್ಗೆ ಮಾಹಿತಿ ಸಂಗ್ರಹಿಸಿ, ಬೇರೆ ಪಕ್ಷಕ್ಕೆ ಮಾರಾಟ ಮಾಡುವುದು. ಕಾಂಗ್ರೆಸ್ ಪರವಾಗಿರುವ ಮತಗಳನ್ನು ಡಿಲೀಟ್ ಮಾಡಿದ್ದಾರೆ. ದಲಿತರು, ಹಿಂದುಳಿದ ವರ್ಗಗಳ ಮತಗಳನ್ನು ಬೇಕಂತಲೇ ಡಿಲೀಟ್ ಮಾಡಲಾಗಿದೆ. ನಾವು ದಾಖಲೆಯೊಂದಿಗೆ ಆರೋಪ ಮಾಡಿದ ಮೇಲೆ ಈಗ ಆಯುಕ್ತರು ಕಣ್ತಪ್ಪಿನಿಂದ ಆಗಿರುವ ಪ್ರಮಾದ ಎಂದು ಸ್ಪಷ್ಟನೆ ನೀಡಿದ್ದಾರೆ. ನಾವು ಆರೋಪ ಮಾಡದಿದ್ದರೆ ಹಾಗೆ ಇರುತ್ತಿದ್ದರು. ಈ ಸಂಬಂಧ ನಾಳೆ(ನ.19) ಬೆಂಗಳೂರಲ್ಲಿ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು.

'ಚಿಲುಮೆ'ಯ ನಾಲ್ವರು ಬಂಧನ

ಮತದಾರರ ಪಟ್ಟಿ ಪರಿ ಷ್ಕರಣೆಯಲ್ಲಿ ಅಕ್ರಮ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಈ ಬಗ್ಗೆ ವರದಿ ನೀಡುವಂತೆ ಬಿಬಿಎಂಪಿಗೆ ಚುನಾವಣಾ ಆಯೋಗ ಹೇಳಿತ್ತು. ಅದರಂತೆ ಇದೀಗ ಬಿಬಿಎಂಪಿ ಚುನಾವಣಾ ಆಯೋಗಕ್ಕೆ ವರದಿ ನೀಡಿದೆ. ಅದರಲ್ಲಿ ಚಿಲುಮೆ ಸಂಸ್ಥೆಗೆ ವೋಟರ್ ಐಡಿ, ಆಧಾರ್ ಲಿಂಕ್‌ಗ್ ಮಾಡುವ ಹೊಣೆ ನೀಡಲಾಗಿತ್ತು. ವೋಟರ್ ಐಡಿಗೆ ಉಚಿತವಾಗಿ ಆಧಾರ್ ಜೋಡನೆ ಮಾಡುವುದಾಗಿ ಚಿಲುವೆ ಸಂಸ್ಥೆ ಅರ್ಜಿ ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಈ ಜವಾಬ್ದಾರಿಯನ್ನು ನೀಡಲಾಗಿತ್ತು ಎಂದು ತಿಳಿದುಬಂದಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಮನೆಗಳಿಗೆ ಭೇಟಿ ನೀಡಿ ಆನ್‌ಲೈನ್ ಅಥವಾ VHA (Voter Helpline App) ಮುಖೇನಾ ಅರ್ಜಿಗಳನ್ನು ಸಲ್ಲಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯವನ್ನು ನಿರ್ವ ಹಿಸಲು ಚಿಲುಮೆ ಸಂಸ್ಥೆಗೆ ಅನುಮತಿ ನೀಡಲಾಗಿತ್ತು. ಆದರೆ, ಸದರಿ ಸಂಸ್ಥೆಯು ಪತ್ರದಲ್ಲಿ ವಿಧಿಸಲಾಗಿದ್ದ ಷರತ್ತುಗಳನ್ನು ಉಲ್ಲಂಘಿಸಿರುವ ದೂರಿನ ಹಿನ್ನೆಲೆಯಲ್ಲಿ ಬಿಬಿಎಂಪಿ ಅನುಮತಿಯನ್ನು ರದ್ದುಪಡಿಸಿದೆ.

ಮೈಸೂರು ಆಕಾಶವಾಣಿಯಲ್ಲಿ 'ಕನ್ನಡದ ಹಬ್ಬ'

ಇದೇ ಮೊದಲು ಆಕಾಶವಾಣಿಯ ಒಳಾವರಣ, ಸ್ಟುಡಿಯೋ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ

ವಿದ್ಯಾರ್ಥಿಗಳ ಗಮನ ಸೆಳೆದ ತಾಂತ್ರಿಕ ವಿಭಾಗ



ಮೈಸೂರು ಆಕಾಶವಾಣಿಯಲ್ಲಿ ಕನ್ನಡ ರಾಜ್ಯೋತ್ಸವ ಕನ್ನಡ ಹಬ್ಬದ ಅಂಗವಾಗಿ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಆಕಾಶವಾಣಿ ಸ್ಟುಡಿಯೋ ಒಳಗೆ ಆಕಾಶವಾಣಿ ಕಾರ್ಯನಿರ್ವಹಿಸುವ ವಿಧಾನ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು.

ಮೈಸೂರು, ನ.18(ಆರ್‌ಕೆಬಿ)– ಕನ್ನಡ ರಾಜ್ಯೋತ್ಸವದ ಅಂಗವಾಗಿ ಮೈಸೂರು ಆಕಾಶವಾಣಿಯಲ್ಲಿ ಶುಕ್ರವಾರ 'ಕನ್ನಡದ ಹಬ್ಬ'ವನ್ನು ಸಂಭ್ರಮದಿಂದ ಆಚರಿಸಲಾಯಿತು. ಇದರ ಅಂಗವಾಗಿ ಕನ್ನಡ ಧ್ವಜಾರೋಹಣ, ವಸ್ತು ಪ್ರದರ್ಶನ, ಸಾರ್ವಜನಿಕರಿಗೆ ಆಕಾಶವಾಣಿಯ ಸ್ಟುಡಿಯೋ ನೋಡಲು ಅವಕಾಶ ನೀಡಲಾಯಿತು.



ಕನ್ನಡ ಹಬ್ಬದ ಅಂಗವಾಗಿ ಏರ್ಪಡಿಸಿದ್ದ ವಸ್ತು ಪ್ರದರ್ಶನದಲ್ಲಿ ಹೆಚ್ಚು ಗಮನ ಸೆಳೆದ ಆಕಾಶವಾಣಿಯಲ್ಲಿ ಹಿಂದೆ ಬಳಸಲಾಗುತ್ತಿದ್ದ ತಾಂತ್ರಿಕ ಉಪಕರಣಗಳ ಪ್ರದರ್ಶನ

ಬೆಳಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಆಕಾಶವಾಣಿಯ ಸ್ಟುಡಿಯೋ ಮತ್ತು ಅಲ್ಲಿನ ಎಲ್ಲಾ ವಿಚಾರಗಳ ಬಗ್ಗೆ ಸಾರ್ವಜನಿಕರಿಗೆ ಪರಿಚಯ ಮಾಡಿಕೊಡಲಾಯಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಆಕಾಶವಾಣಿಯ ಒಳಾವರಣದಲ್ಲಿರುವ ಸ್ಟುಡಿಯೋ, ಧ್ವನಿಮುದ್ರಣ, ಅದರ ಕಾರ್ಯ ವಿಧಾನ, ಕಾರ್ಯಕ್ರಮಗಳ ಪ್ರಸಾರ ಹೀಗೆ ಮಹತ್ವದ ವಿಚಾರದ ಬಗ್ಗೆ ಆಕಾಶವಾಣಿ ಸಿಬ್ಬಂದಿ ವಿವರವಾದ ಪ್ರಾತ್ಯಕ್ಷಿಕೆ ನೀಡಿದರು.

ಕನ್ನಡ ಹಬ್ಬದ ಅಂಗವಾಗಿ ಆಕಾಶವಾಣಿಯ ಹೊರ ಆವರಣದಲ್ಲಿ ಏರ್ಪಡಿಸಿದ್ದ ಆಕಾಶವಾಣಿಯಲ್ಲಿ ಬಳಸಲಾಗುತ್ತಿದ್ದ ಹಳೆಯ ತಾಂತ್ರಿಕ ಪರಿಕರಗಳ ಪ್ರದರ್ಶನ ಗಮನ ಸೆಳೆಯಿತು. ಮೈಸೂರು ಆಕಾಶವಾಣಿ ಆರಂಭದಿಂದ ಇಲ್ಲಿಯವರೆಗೆ ನಡೆದು ಬಂದ ದಾರಿ ಕುರಿತು ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ತಾಂತ್ರಿಕ ಪರಿಕರಗಳನ್ನು ಪ್ರದರ್ಶಿಸಿ, ಮಾಹಿತಿ ನೀಡಲಾಯಿತು. ಅಭಿರುಚಿ, ನವ ಕರ್ನಾಟಕ ಪ್ರಕಾಶನದ ಪುಸ್ತಕಗಳ ಪ್ರದರ್ಶನ, ಡಾ.ಶಾಂತವೇರಿ ಗೋಪಾಲ ಗೌಡ ಆಸ್ಪತ್ರೆಯಿಂದ ಡಾ.ಆನಂದ ಆರಾಧ್ಯ ಅವರು ಸುಮಾರು 300 ಜನರ ಆರೋಗ್ಯ ತಪಾಸಣೆ ನಡೆಸಿದರು.

ಇದೇ ವೇಳೆ ಮೈಸೂರಿನ ಅಖಿಲ ಭಾರತ ವಾಕ್ ಮತ್ತುಶ್ರವಣ ಸಂಸ್ಥೆ (ಆಯಿಷ್)ಯಿಂದ ನಡೆದ ಉಚಿತ ಕಿವಿ ಪರೀಕ್ಷಾ ಶಿಬಿರದಲ್ಲಿ ನೂರಕ್ಕೂ ಹೆಚ್ಚು ಮಂದಿಗೆ ಕಿವಿ ಸಂಬಂಧಿತ ಸಮಸ್ಯೆಗಳ ಬಗ್ಗೆ ತಪಾಸಣೆ ನಡೆಸಲಾಯಿತು.

ಇದಕ್ಕೂ ಮುನ್ನ ಮೈಸೂರು ಆಕಾಶವಾಣಿ (ಕಾರ್ಯಕ್ರಮ) ಸಹಾಯಕ ನಿರ್ದೇಶಕರೂ ಆದ ಕೇಂದ್ರದ ಮುಖ್ಯಸ್ಥ ಹೆಚ್.ಎಸ್. ಉಮೇಶ್ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿದರು. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ, ಜೆಎಸ್‌ಎಸ್ ಸಂಸ್ಥೆಯ ಶ್ರೀಹರಿ, ಕನ್ನಡ ಸಾಹಿತ್ಯ ಪರಿಷತ್‌ನ ರಾಜಶೇಖರ್ ಕದಂಬ, ಮಹಾನ್ ಸಂಸ್ಥೆಯ ಎನ್.ಗುರುರಾಜ್, ಆಕಾಶವಾಣಿ ತಾಂತ್ರಿಕ ವಿಭಾಗದ ಸಹಾಯಕ ನಿರ್ದೇಶಕ ರಾಮಾಂಜನಪ್ಪ, ಕಾರ್ಯಕ್ರಮ ನಿರ್ವಾಹಕರಾದ ಎಸ್.ಸುಬ್ರಹ್ಮಣ್ಯ, ದಿವಾಕರ ಹೆಗಡೆ ಇನ್ನಿತರರು ಉಪಸ್ಥಿತರಿದ್ದರು.

ಡಿ.18ಕ್ಕೆ 'ಫ್ಯೂಚರ್ ಮಾಡೆಲ್ ಆಫ್ ಇಂಡಿಯಾ' ಫ್ಯಾಷನ್ ಶೋ



ಮೈಸೂರು, ನ.18(ಎಸ್‌ಪಿಎನ್)– ಫ್ಯೂಚರ್ ಮಾಡಲ್ ಆಫ್ ಇಂಡಿಯಾ ಸೀಜ಼ನ್–3 ಫ್ಯಾಷನ್ ಶೋ ರಾಜ್ಯಮಟ್ಟದ ಸ್ಪರ್ಧೆಯನ್ನು ಡಿ.18 ರಂದು ಆಯೋಜಿಸಿದ್ದು, ಈ ಸ್ಪರ್ಧೆ ವಿವಿಧ ಹಂತದಲ್ಲಿ ನಡೆಯಲಿದೆ. ಇದರಲ್ಲಿ 1ರಿಂದ 75ನೇ ವರ್ಷದವರೂ (ಪುರುಷ ಮತ್ತು ಮಹಿಳೆಯರು) ಭಾಗವಹಿಸಬಹುದು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ತಿಳಿಸಿದರು.

ಈ ಸಂಬಂಧ ಪ್ರಾಧಿಕಾರದ ಆವರಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಿಬ್ಬಾಸ್ ಗ್ರೂಪ್ ಹಾಗೂ 'ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ' ಸಹಯೋಗದೊಂದಿಗೆ ಆಯೋಜಿಸಿದ್ದು, ಡಿ.17ರವರೆಗೆ ಆಸಕ್ತರು ನೋಂದಣಿ ಮಾಡಿಕೊಳ್ಳಬಹುದು. ಡಿ.18ರಂದು ಪ್ರಾಧಿಕಾರದ ಆವರಣದ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ಗ್ರಾಂಡ್ ಫಿನಾಲೆ ಬೆಳಗ್ಗೆ 9ಗಂಟೆಯಿಂದ ಸಂಜೆ 4.30ರವರೆಗೆ ನಡೆಯಲಿದೆ ಎಂದು ತಿಳಿಸಿದರು.

ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಸಾಂಪ್ರದಾಯಕ ಉಡುಗೆ–ತೊಡುಗೆ ಹಾಗೂ ಭಾರತೀಯ ಪರಂಪರೆ ಹಾಗೂ ಸಂಸ್ಕೃತಿಯನ್ನು ಬಿಂಬಿಸುವುದು ತಿಬ್ಬಾಸ್ ಗ್ರೂಪ್‌ನ ಉದ್ದೇಶವಾಗಿದ್ದು, ದೇಶಿ ಸಂಸ್ಕೃತಿಗೆ ಪೂರಕವಾಗಿರುವ ಸ್ಪರ್ಧೆ ನಡೆಸುವಂತೆ ಷರತ್ತು ವಿಧಿಸಿ ಫ್ಯಾಷನ್ ಶೋಗೆ ಅನುಮತಿ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರಲ್ಲದೆ, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಆಕರ್ಷಕ ನಗದು ಬಹುಮಾನ, ಟ್ರೋಫಿ, ಪ್ರಮಾಣ ಪತ್ರ ಹಾಗೂ ಕ್ರೌನ್‌ಗಳನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದರಲ್ಲದೆ, ನಮ್ಮ ದೇಶದ ವಿವಿಧ ವಿವಿಗಳಲ್ಲಿ ಅಧ್ಯಯನ ನಡೆಸುತ್ತಿರುವ ವಿದೇಶಿ ವಿದ್ಯಾರ್ಥಿಗಳು ದೇಶಿ ಉಡುಪಿಗಳ ಧರಿಸಿ ಈ ಫ್ಯಾಷನ್ ಶೋನಲ್ಲಿ ಭಾಗವಹಿಸಲು ನೋಂದಣಿ ಮಾಡಿಸಿಕೊಂಡರೆ ಅವಕಾಶ ನೀಡಲು ಚಿಂತನೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ತಿಬ್ಬಾಸ್ ಗ್ರೂಪ್ ಮಾಡಲಿಂಗ್ ಸಂಸ್ಥೆ ಸ್ಥಾಪಕ ಡಿ.ಸಿ.ನಾಗೇಶ್ ಸ್ವತಃ ಮೈಸೂರು ಜಿಲ್ಲೆಯವರಾಗಿದ್ದು, ನೇಪಾಳದಲ್ಲಿ ನಡೆದ ಫ್ಯಾಷನ್ ಶೋನಲ್ಲಿ ನಮ್ಮ ದೇಶದ ಪ್ರತಿನಿಧಿಯಾಗಿ ಪ್ರತಿನಿಧಿಸಿ, ಕೃಷಿಕ ಕುಟುಂಬದ ಉಡುಗೆ–ತೊಡುಗೆಗಳನ್ನು ತೊಟ್ಟು ಮಿಸ್ಟರ್ ಏಷಿಯಾ ಪಟ್ಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಅಲ್ಲದೆ ಹಲವಾರು ಫ್ಯಾಷನ್ ಶೋಗಳಲ್ಲಿ ಸ್ಪರ್ಧಿಯಾಗಿ, ತೀರ್ಪುಗಾರರಾಗಿ ಭಾಗವಹಿಸಿದ್ದು, ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಅನುಭವ ಹೊಂದಿದ್ದಾರೆ ಎಂದು ಆಯೋಜಕರು ಮಾಹಿತಿ ನೀಡಿದರು.

ವಿವಿಧ ವಿಭಾಗದ ಸ್ಪರ್ಧೆಯ ವಿವರ: ಮಿಸ್ಟರ್ ಅಂಡ್ ಮಿಸ್ಟರ್ಸ್ ಸ್ಪರ್ಧೆಗೆ 18ರಿಂದ 30 ವರ್ಷ ವಯೋಮಿತಿ, ಪ್ರಿನ್ಸ್ ಅಂಡ್ ಪ್ರಿನ್ಸಸ್ ಸ್ಪರ್ಧೆಗೆ 1ರಿಂದ 6 ವರ್ಷ, ಮಿಸ್ಟರ್ ಅಂಡ್ ಮಿಸ್ ಟೀನ್ 12ರಿಂದ 18 ವರ್ಷ, ಮ್ಯಾಮ್ ಅಂಡ್ ಬಿ, ನ್ಯೂ ಮ್ಯಾಮ್, ಬೆಸ್ಟ್ ಬ್ರದರ್ಸ್, ಬೆಸ್ಟ್ ಸಿಸ್ಟರ್ಸ್, ಪ್ಲಸ್ ಸೈಜ್ ಮಾಡಲ್ಸ್, ಟ್ವಿನ್ಸ್, ಮದರ್–ಇನ್–ಲಾ, ಡಾಟರ್ ಇನ್–ಲಾ, ಗ್ರಾಂಡ್ ಪೇಟೆಂಟ್ ವಿತ್ ಕಿಡ್ಸ್, ಬ್ರದರ್ಸ್ ಅಂಡ್ ಸಿಸ್ಟರ್ಸ್ ಸ್ಪರ್ಧೆಗೆ ವಯೋಮಿತಿ ನಿಗದಿ ಇಲ್ಲ ಹಾಗೂ ಬೆಸ್ಟ್ ಮ್ಯಾರಿಡ್ ಕಪಲ್ ಸ್ಪರ್ಧೆಗೆ 25ರಿಂದ 60 ವರ್ಷ ಹಾಗೂ ಗ್ರಾಂಡ್ ಫಾದರ್ ಅಂಡ್ ಮದರ್ ಸ್ಪರ್ಧೆಗೆ 52 ವರ್ಷದಿಂದ 70 ವರ್ಷ ನಿಗದಿಪಡಿಸಲಾಗಿದೆ ಎಂದು ಮಾಹಿತಿ ನೀಡಿದರು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ:98806–47392, 91693–39888, 82176–72655 ಅನ್ನು ಸಂಪರ್ಕಿಸಬಹುದು. ಈ ವೇಳೆ ಪ್ರಾಧಿಕಾರದ ಸಿಇಓ ರುದ್ರೇಶ್, ತಿಬ್ಬಾಸ್ ಗ್ರೂಪ್‌ನ ಐ.ಡಿ.ಶಿವಾನಿ ಉಪಸ್ಥಿತರಿದ್ದರು.

ನಾಳೆ 'ಸಾಮ್ರಾಟ್ ಶ್ರೀಪುರುಷ' ಕೃತಿ ಬಿಡುಗಡೆ

ಮೈಸೂರು, ನ.18(ಆರ್‌ಕೆಬಿ)– ಮೈಸೂರಿನ ಶ್ರೀಪುರುಷ ಸಾಂಸ್ಕೃತಿಕ ಸಮಿತಿ ವತಿಯಿಂದ ನ.20ರ ಸಂಜೆ 4 ಗಂಟೆಗೆ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ 3ನೇ ಶ್ರೀ ಪುರುಷೋತ್ಸವ ಸಮಾರಂಭ ಹಾಗೂ ಡಾ.ಬಿ.ಎನ್.ರವೀಶ್ ವಿರಚಿತ 'ಸಾಮ್ರಾಟ್ ಶ್ರೀಪುರುಷ' ಪುಸ್ತಕ ಬಿಡುಗಡೆಯಾಗಲಿದೆ ಎಂದು ಲೇಖಕ, ಮನೋವೈದ್ಯ ಡಾ.ಬಿ.ಎನ್. ರವೀಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಪುಸ್ತಕ ಬಿಡುಗಡೆಗೊಳಿಸುವರು. ಡಾ.ತಲಕಾಡು ಚಿಕ್ಕರಂಗೇಗೌಡ ಪುಸ್ತಕದ ಬಗ್ಗೆ ಮಾತನಾಡುವರು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಧ್ಯಕ್ಷತೆ ವಹಿಸುವರು. ಸ್ವೀಡನ್ ಕೆರೋಲಿನ್ಸ್‌ಕ ವಿವಿಯ ಡಾ.ಟಾಮ್ ಪಾಲ್ಮಿಸ್ಟರ್, ಮನೋವೈದ್ಯ ಡಾ.ಪೀಟರ್ ಲೆಪ್ಪಿಂಗ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ.ಇ.ಸಿ. ನಿಂಗರಾಜೇಗೌಡ ಇನ್ನಿತರರು ಭಾಗವಹಿಸುವರು ಎಂದರು.

ತಲಕಾಡು ಗಂಗರ ಶ್ರೀಪುರುಷ ಕೂಡ ನಾಡನ್ನು ಅಭಿವೃದ್ಧಿಗೊಳಿಸಿದವನಾಗಿದ್ದಾನೆ. ಆತನ ಬಗ್ಗೆ ಹಾಗೂ ಪೂರ್ವಿಕರ ಬಗ್ಗೆ ಸಂಶೋಧನೆಯನ್ನು ನಾಡಿನ ಜನತೆ ತಿಳಿಯಲೆಂದು ತಾವು ಅಧ್ಯಯನ ನಡೆಸಿದ್ದು, ಈ ನಿಟ್ಟಿನಲ್ಲಿ ಪುಸ್ತಕ ರಚಿಸಲಾಗಿದೆ. ಇದು ಕನ್ನಡದ ಅಸ್ಮಿತೆ ಪ್ರಶ್ನೆಯೂ ಆಗಿದೆ. ಪಠ್ಯದಲ್ಲಿ ಕಾಣಸಿಗದ ಅನೇಕ ವಿಷಯಗಳು ಶ್ರೀಪುರುಷನ ಬಗ್ಗೆ ಇದ್ದು, ಈಗೀಗ ತಲಕಾಡು ಗಂಗರ ಬಗ್ಗೆ ಎಲ್ಲರಲ್ಲೂ ಆಸಕ್ತಿ ಮೂಡುತ್ತಿದೆ. ಹೀಗಾಗಿಯೇ ಬೆಂಗಳೂರಿನ ಕೆಂಪೇಗೌಡ ಪ್ರತಿಮೆ ಸ್ಥಳಕ್ಕೆ ತಲಕಾಡಿನಿಂದ ಮೃತ್ತಿಕೆ ಕೊಂಡೊಯ್ಯಲಾಯಿತು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಡಾ.ಸಿಪಿಕೆ, ಡಾ.ಪೀಟರ್ ಲೆಪ್ಪಿಂಗ್, ಡಾ.ಟಾಮ್ ಪಾಲ್ಮಿಸ್ಟರ್, ಡಾ.ಇ.ಸಿ.ನಿಂಗರಾಜೇಗೌಡ ಉಪಸ್ಥಿತರಿದ್ದರು.

ದೃಷ್ಟಿ ವಿಶೇಷಚೇತನರಿಗಾಗಿ ಚೆಸ್ ಪಂದ್ಯಾವಳಿ

ಮೈಸೂರು, ನ.18(ಆರ್‌ಕೆಬಿ)– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ, ದೃಷ್ಟಿ ವಿಶೇಷಚೇತನರಿಗಾಗಿ ಚೆಸ್ ಸಂಸ್ಥೆ ಇನ್ನಿತರೆ ಸಂಸ್ಥೆಗಳ ಸಹಯೋಗದಲ್ಲಿ ನ.21 ಮತ್ತು 22 ರಂದು ಪಡುವಾರಹಳ್ಳಿ ಮಹಾರಾಣಿ ಕಾಲೇಜು ಹಿಂಭಾಗದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ದೃಷ್ಟಿ ವಿಶೇಷಚೇತನರಿಗಾಗಿ ಚೆಸ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಅಧ್ಯಕ್ಷೆ ಎಚ್.ಎಲ್.ಯಮುನಾ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೃಷ್ಟಿ ವಿಶೇಷಚೇತನರನ್ನು ಚೆಸ್ ಪಂದ್ಯಾವಳಿಗೆ ಸಂಬಂಧಿಸಿದಂತೆ ಪ್ರೋತ್ಸಾಹಿಸುವ ಉದ್ದೇಶದಿಂದ ಪಂದ್ಯಾವಳಿ ಆಯೋಜಿಸಲಾಗಿದೆ. ನ.21ರಂದು ಶ್ರೀ ಬಸವಾನಂದ ಸ್ವಾಮೀಜಿ ಪಂದ್ಯಾವಳಿಗೆ ಚಾಲನೆ ನೀಡುವರು. ಮುಖಂಡರಾದ ನಗರಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಭಾಗ್ಯ ಮಾದೇಶ್, ಕವೀಶ್‌ಗೌಡ, ಇನ್ನಿತರರು ಭಾಗವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಮಂಜೇಗೌಡ, ಅಜಿತ್, ಮನು ಕೀರ್ತಿ, ಪದ್ಮಾವತಿ ಉಪಸ್ಥಿತರಿದ್ದರು.

ಅರಣ್ಯ ಆಧಾರಿತ 12 ಬುಡಕಟ್ಟು ಜನಾಂಗಗಳಿಗೆ ಶೇ.3 ಮೀಸಲಾತಿ; ಆದಿವಾಸಿಗಳ ವಾಸಸ್ಥಳ ಬಿಟ್ಟುಕೊಡಲು ಆಗ್ರಹ

ಮೈಸೂರು, ನ.18(ಆರ್‌ಕೆಬಿ)– ಅರಣ್ಯ ಆಧಾರಿತ 12 ಬುಡಕಟ್ಟುಗಳಿಗೆ ಹಿಂದೆ ಇದ್ದ ಶೇ.3ರಷ್ಟು ಮೀಸಲಾತಿ ಮತ್ತು ಆದಿವಾಸಿಗಳ ವಾಸಸ್ಥಳಗಳನ್ನು ಅವರಿಗೇ ಬಿಟ್ಟುಕೊಡಬೇಕು ಎಂದು ರಾಜ್ಯ ಮೂಲ ಆದಿವಾಸಿ ವೇದಿಕೆ ಆಗ್ರಹಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ವೇದಿಕೆ ಖಜಾಂಚಿ ಕೃಷ್ಣ ಮೂರ್ತಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಗೆ ಅನುಗುಣವಾಗಿ ನ್ಯಾ.ನಾಗಮೋಹನ್ ದಾಸ್ ಸಮಿತಿ ಶಿಫಾರಸ್ಸಿನಂತೆ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿರುವುದು ಸ್ವಾಗತಾರ್ಹ. ಆದರೆ ಹಿಂದೆ 1950ರಲ್ಲಿದ್ದ ಶೇ.3ರಷ್ಟು ಮೀಸಲಾತಿ ಅರಣ್ಯ ಆಧಾರಿತ ಆದಿವಾಸಿಗಳಿಗೆ ಮರೀಚಿಕೆಯಾಗಿದೆ.

ಆದಿವಾಸಿಗಳ ನಂತರ ಪರಿಶಿಷ್ಟ ಪಂಗಡದಲ್ಲಿ ಬಂದ ಸಮುದಾಯಗಳು ಎಲ್ಲ ಮೀಸಲಾತಿಯ ಲಾಭ ಪಡೆದು ಮೂಲ ಆದಿವಾಸಿಗಳಿಗೆ ಅನ್ಯಾಯ ಮಾಡಲಾಗಿದೆ. ಇದರಿಂದ ಸಮುದಾಯದಲ್ಲಿ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೂ ಸರ್ಕಾರಿ ಕೆಲಸಗಳು ಕೈ ತಪ್ಪುತ್ತಿವೆ. ಪಿಎಚ್.ಡಿ ಪಡೆದವರಿಗೂ ಕೆಲಸವಿಲ್ಲದಂತಾಗಿದೆ. ಇದು ಸಮುದಾಯವನ್ನು ಮತ್ತಷ್ಟು ಶೋಷಣೆಗೆ ಒಳಗಾಗುವಂತೆ ಮಾಡಿದೆ. ಆದ್ದರಿಂದ ಈ ಹಿಂದೆ ಇದ್ದ ಶೇ.3ರಷ್ಟು ಮೀಸಲಾತಿಯನ್ನು ಪಡೆದು ಅರಣ್ಯ ಆಧಾರಿತ ಆದಿವಾಸಿಗಳಿಗೆ ಬಿಡಬೇಕು. ಈಗ ಸೇರಿಕೊಂಡಿರುವ ಜನಾಂಗಗಳಿಗೆ ಶೇ.4ರಷ್ಟು ಮೀಸಲಾತಿ ಬಿಟ್ಟುಕೊಡಲು ಅಭ್ಯಂತರವಿಲ್ಲ ಎಂದರು.

ಸರ್ಕಾರ, ಸಂವಿಧಾನ ಬದ್ಧ 2006ರ ಅರಣ್ಯ ಹಕ್ಕು ಕಾಯಿದೆಯಂತೆ ಅರಣ್ಯವಾಸಿಗಳ ಕಾಡಿಗೆ ಬಿಟ್ಟು, ಸ್ವತಂತ್ರವಾಗಿ ಜೀವನ ಮಾಡಲು ಅನುವು ಮಾಡಿಕೊಡಬೇಕು. ಹುಲಿ ಸಂರಕ್ಷಣಾ ಯೋಜನೆ ಹೆಸರಿನಲ್ಲಿ ಆದಿವಾಸಿಗಳಿಗೆ ಅನ್ಯಾಯ ಮಾಡಲು ಹೊರಟಿರುವುದು ವಿಷಾದನೀಯ. ಸರ್ಕಾರ ಹೇಗೆ ಪ್ರಾಣಿಗಳಿಗೆ ಕಾಡನ್ನು ಬಿಟ್ಟುಕೊಡಿ ಎಂದು ಹೇಳುತ್ತಿದೆಯೋ, ಹಾಗೆಯೇ ತಲತಲಾಂತರಗಳಿಂದ ಕಾಡಿನಲ್ಲಿಯೇ ವಾಸ ಮಾಡುತ್ತಿರುವ ನಮಗೂ ಆದಿವಾಸಿ ಸಂರಕ್ಷಣಾ ಯೋಜನೆ ಜಾರಿ ಮಾಡಿ ಆದಿವಾಸಿಗಳ ಮೂಲ ನೆಲೆಯನ್ನು ರಕ್ಷಿಸಬೇಕು ಎಂದು ಆಗ್ರಹಿಸಿದರು.

ಸಂಯೋಜಕ ವಿಜಯಕುಮಾರ್, ಲ್ಯಾಂಪ್ಸ್ ನಿರ್ದೇಶಕ ಶಿವರಾಜು ಅಂಕನಾಥಪುರ, ಸೋಲಿಗರ ಅಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಎಂ.ಜಡೆಸ್ವಾಮಿಗೌಡ, ರಾಜ್ಯ ಜೇನುಕುರುಬ ಅಭಿವೃದ್ಧಿ ಅಧ್ಯಕ್ಷ ಜೆ.ಟಿ. ರಾಜಪ್ಪ ಇನ್ನಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ಸದ್ದು ವಿಚಾರಣೆ ನಡೆಯುತ್ತಿದೆ' ಚಿತ್ರ ನ.25ರಂದು ಬಿಡುಗಡೆ

ಮೈಸೂರು, ನ.18(ಆರ್‌ಕೆಬಿ)– ಹೊಸ ಪ್ರತಿಭೆಗಳು ಸೇರಿ ನಿರ್ಮಿಸಿರುವ 'ಸದ್ದು ವಿಚಾರಣೆ ನಡೆಯುತ್ತಿದೆ' ಸಿನಿಮಾ ನ.25ರಂದು ರಾಜ್ಯಾದ್ಯಂತ ಬಿಡುಗಡೆ ಆಗಲಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಚಿತ್ರದ ನಟರಾದ ರಾಕೇಶ್ ಮಯ್ಯ, ಮಧುನಂದನ್, ನಟಿ ಪಾವನಗೌಡ ಮಾತನಾಡಿ, ನೈಜ ಘಟನೆ ಆಧರಿಸಿದ ಸಸ್ಪೆನ್ಸ್ ಕಂ ಕ್ರೈಂ–ಥ್ರಿಲ್ಲರ್ ಕಥಾಹಂದರ ಹೊಂದಿದೆ. ಭಾಸ್ಕರ್ ಆರ್.ನೀನಾಸಂ ನಿರ್ದೇಶನವಿರುವ ಚಿತ್ರದ ಟ್ರೈಲರ್ ಈಗಾಗಲೇ ಕುತೂಹಲ ಮೂಡಿಸಿದ್ದು, ನಾಲ್ಕು ಹಾಡುಗಳು ಜನಪ್ರಿಯವಾಗಿವೆ ಎಂದು ಹೇಳಿದರು.

ಸಕಲೇಶಪುರದಲ್ಲಿ ಪ್ರೇಮಿಗಳು ಕಾಣೆಯಾಗಿ ದೊಡ್ಡ ಸುದ್ದಿಯಾಗುತ್ತದೆ. ಇದರ ವಿಚಾರಣೆಯನ್ನು ಪೊಲೀಸ್ ಇಲಾಖೆಯು ಪೃಥ್ವಿರಾಜ್ ಎಂಬ ದಕ್ಷ ಪೊಲೀಸ್ ಅಧಿಕಾರಿಗೆ ವಹಿಸುತ್ತದೆ. ವಿಚಾರಣೆಯು ಅಂತ್ಯವಾಗುವ ಹೊತ್ತಿಗೆ ಕಥೆಯು ಅನೇಕ ತಿರುವುಗಳನ್ನು ಪಡೆಯುತ್ತದೆ. ನೈಜ ಘಟನೆಗಳಿಂದ ಸ್ಫೂರ್ತಿ ಪಡೆದು ಈ ಚಿತ್ರಕಥೆಯನ್ನು ಹೆಣೆಯಲಾಗಿದೆ. ರಾಜ್‌ಕಾಂತ್ ಛಾಯಾಗ್ರಾಹಣ, ಸಚಿನ್ ಬಸ್ರೂರ್ ಸಂಗೀತ, ಪಿ.ಶಶಿಧರ್ ಸಂಕಲನ ಮಾಡಿರುವ ಈ ಚಿತ್ರದ ಬಗ್ಗೆ ಭಾರೀ ನಿರೀಕ್ಷೆ ಇಟ್ಟುಕೊಂಡಿರುವುದಾಗಿ ತಿಳಿಸಿದರು.

ಕೂಲಿ ಕಾರ್ಮಿಕ ನಾಪತ್ತೆ

ಮೈಸೂರು, ನ.18–ಮೈಸೂರು ತಾಲೂಕು ಚಟ್ಟಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ಸೋಮಣ್ಣ (45) ನಾಪತ್ತೆಯಾಗಿರುವುದಾಗಿ ಪ್ರಕರಣ ದಾಖಲಾಗಿದೆ. ಕೂಲಿ ಕೆಲಸ ಮಾಡಿದ ಹಣ ಪಡೆದು ಬರುವುದಾಗಿ ಸೆ.9ರಂದು ಸಂಜೆ ಮನೆಯಿಂದ ಹೊರ ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದು ಇವರ ಪತ್ನಿ ಶ್ರೀಮತಿ ನಂಜಮ್ಮಣ್ಣಿ ಅಲಿಯಾಸ್ ಮಂಜುಳಾ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇರುವವರು ವರುಣಾ ಠಾಣೆ ದೂರವಾಣಿ ಸಂಖ್ಯೆ 0821–2594411 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಳವೂ ಸೇರಿದಂತೆ ನಾನಾ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ನ.22ರಿಂದ ಬೆಂಗಳೂರಲ್ಲಿ ಮುಖ್ಯಮಂತ್ರಿ ಮನೆ ಮುಂದೆ ರೈತರ ಧರಣಿ

- ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಘೋಷಣೆ
- ಸರ್ಕಾರ ನೀಡಿದ್ದ ಭರವಸೆ ಹುಸಿಯಾಗಿದೆ; ಅನಿರ್ದಿಷ್ಟಾವಧಿ ಹೋರಾಟ ಅನಿವಾರ್ಯ

ಮೈಸೂರು,ನ.18(ಎಂಟಿವೈ)– ಕಬ್ಬಿನ ಎಫ್‌ಆರ್‌ಪಿ(Fair and remunerative Price) ದರ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ನ.22ರಿಂದ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಮನೆ ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಈ ಹಿಂದೆ ಪ್ರತಿಭಟನೆ ನಡೆಸಲಾಗಿತ್ತು. ಸಿಎಂ ನೀಡಿದ ಭರವಸೆ ಮೇರೆಗೆ ಪ್ರತಿಭಟನೆಯಿಂದ ಹಿಂದೆ ಸರಿಯಲಾಗಿತ್ತು. ಆದರೆ, ಸರ್ಕಾರ ಕಬ್ಬಿಗೆ ದರ ನಿಗದಿ ಮಾಡಲು ತಜ್ಞರ ಸಮಿತಿ ರಚಿಸಿ ನ.20ರೊಳಗೆ ರೈತರಿಗೆ ಸಿಹಿ ಸುದ್ದಿ ನೀಡುವುದಾಗಿ ಸಕ್ಕರೆ ಸಚಿವರು ಹೇಳಿಕೆ ನೀಡಿದ್ದರು. ಆದರೆ, ಇದುವರೆಗೆ ಯಾವುದೇ ನಿರ್ಧಾರ ಪ್ರಕಟಿಸಿಲ್ಲ. ಈ ಕುರಿತು ಮುಖ್ಯಮಂತ್ರಿಯನ್ನು ಎರಡು ಬಾರಿ ಭೇಟಿ ಮಾಡಿದಾಗಲೂ ರೈತರಿಗೆ ನ್ಯಾಯ ನೀಡುವುದಾಗಿ ಭರವಸೆ ನೀಡಿ, ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಲ್ಲ. ಆದ್ದರಿಂದ ತುರ್ತು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದರು.

ರಾಜ್ಯದಲ್ಲಿ 30 ಲಕ್ಷ ಕಬ್ಬು ಬೆಳೆಗಾರರ ಹಿತರಕ್ಷಣೆಗೆ ಗಂಭೀರ ಪ್ರಯತ್ನ ನಡೆದಿದೆ. ಸದಾ ರೈತರ ಪರ ಎಂದು ಹೇಳಿಕೆ ನೀಡುತ್ತಾ, ರೈತರ ಮೂಗಿಗೆ ತುಪ್ಪ ಸವರೋ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಬೆಳಗಾವಿ ದಾವಣಗೆರೆ, ಧಾರವಾಡ, ಉತ್ತರ ಕನ್ನಡ, ಮೈಸೂರು, ಹೂವಿನ ಹಡಗಲಿ, ಗುಲ್ಬರ್ಗ, ಬಿಜಾಪುರ ಬಾಗಲಕೋಟೆ, ಗದಗ್ ಚಾಮರಾಜನಗರ, ಹಾಸನ, ಬೀದರ್, ಚನ್ನರಾಯಪಟ್ಟಣ, ಕೊಪ್ಪಳ ಜಿಲ್ಲೆಗಳಲ್ಲಿ ಕಬ್ಬು ಬೆಳೆಗಾರರು ನಿರಂತರ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಯಾವುದೇ ಸ್ಪಷ್ಟ ತೀರ್ಮಾನ ಕೈಗೊಳ್ಳದೆ ಸುಮ್ಮನಿದೆ. ರಾಜ್ಯಕ್ಕಿಂತ ಸಕ್ಕರೆ ಇಳುವರಿ ಕಡಿಮೆ ಬರುವ ಪಂಜಾಬ್‌ನಲ್ಲಿ 3800 ರೂ., ಉತ್ತರ ಪ್ರದೇಶದಲ್ಲಿ 3500 ರೂ., ಗುಜರಾತ್‌ನಲ್ಲಿ 4400 ರೂ. ದರ ನಿಗದಿ ಮಾಡಲಾಗಿದೆ. ತಮಿಳುನಾಡಿನಲ್ಲಿ ಕಬ್ಬು ಸಾಗಾಣಿಕೆ ವೆಚ್ಚವನ್ನು ಸಕ್ಕರೆ ಕಾರ್ಖಾನೆಗಳೇ ಭರಿಸುತ್ತವೆ. ಇದನ್ನು ಗಮನಿಸಿ ಎಫ್‌ಆರ್‌ಪಿ ಬೆಲೆಯನ್ನು ಕನಿಷ್ಠ ಇಳುವರಿಗೆ ಟನ್‌ಗೆ 3500 ರೂ. ನಿಗದಿ ಮಾಡಬೇಕು ಎಂದು ಆಗ್ರಹಿಸಿದರು.

ಕಬ್ಬು ಕಟಾವು ಮಾಡಲು16–18 ತಿಂಗಳು ವಿಳಂಬವಾಗುತ್ತಿದೆ. ಇದರಿಂದ ರೈತರಿಗೆ ತುಂಬಾ ನಷ್ಟವಾಗುತ್ತಿದೆ, ಈ ರೀತಿ ವಿಳಂಬವಾಗಿ ಕಟಾವು ಮಾಡಿದ ಕಬ್ಬಿಗೆ ವಿಳಂಬದ ಅವಧಿಗೆ ಶೇಕಡ 15 ಬಡ್ಡಿ ಸೇರಿಸಿ ಹೆಚ್ಚುವರಿ ಹಣ ಕಾರ್ಖಾನೆಗಳು ನೀಡುವಂತಾಗಬೇಕು. ಕಬ್ಬು ಕಟಾವು ಸಾಗಾಣಿಕೆ ವೆಚ್ಚವನ್ನು ಸರ್ಕಾರ ನಿಗದಿ ಮಾಡಿರುವ ಮಾರ್ಗ ಸೂಚಿಯಂತೆ ಕಡಿತಗೊಳಿಸಬೇಕು, ಸಕ್ಕರೆ ಕಾರ್ಖಾನೆ ಫೀಲ್ಡ್ ಮೆನ್‌ಗಳು ಬಿಲ್‌ನಲ್ಲಿ ನೋಂದಾಯಿಸದೆ ರೈತರಿಂದ ಹೆಚ್ಚುವರಿ ಹಣ ವಸೂಲಿ ಮಾಡುವುದು ನಿಲ್ಲಬೇಕು. ರೈತ ಮತ್ತು ಕಾರ್ಖಾನೆ ನಡುವೆ ಸರ್ಕಾರ ಜಾರಿಗೆ ತಂದಿರುವ ದ್ವಿಪಕ್ಷೀಯ ಒಪ್ಪಂದ ಪತ್ರ ಜಾರಿ ಮಾಡಬೇಕು, ಒಪ್ಪಂದ ಪತ್ರ ರೈತರಿಗೂ ಕೊಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ವೆಂಕಟೇಶ್, ಮಹದೇವಸ್ವಾಮಿ ಇದ್ದರು.

ಮೈಸೂರು ಮಿತ್ರ

ಶನಿವಾರ 19 ನವೆಂಬರ್ 2022

ಜನರಿಗೆ ಕಾಂಗ್ರೆಸ್ ಸರ್ಕಾರದ ಯೋಜನೆಗಳ ಬಗ್ಗೆ ತಿಳಿಸಿ

ಕಾರ್ಯಕರ್ತರಿಗೆ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಕರೆ

ತಿ.ನರಸೀಪುರ ನ.18– ಕ್ಷೇತ್ರದಲ್ಲಿ ಕೆಲಸ ಮಾಡದೆ, ಸರ್ಕಾರದಿಂದ ಅನುದಾನ ತರದಿದ್ದವರು ತಾವೇ ಅಭಿವೃದ್ಧಿ ಕೆಲಸ ಮಾಡಿದ್ದೇವೆ ಎನ್ನುತ್ತಿರುವಾಗ, ನಮ್ಮ ಅಧಿಕಾರವಧಿಯಲ್ಲಿ ಕ್ಷೇತ್ರದಲ್ಲಿ ಆದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕಾರ್ಯಕರ್ತರು ಜನರಿಗೆ ತಿಳಿಸಬೇಕು ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕರೆ ನೀಡಿದರು.

ತಾಲೂಕಿನ ಮೂಗೂರು ಗ್ರಾಮದ ವಾಲ್ಮೀಕಿ ಸಮುದಾಯ ಭವನದಲ್ಲಿ ಶುಕ್ರವಾರ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಈಗಿನ ಶಾಸಕರು ಜನರು ನಂಬುತ್ತಾರೆ ಎಂದು ನಮ್ಮ ಸರ್ಕಾರದಲ್ಲಿನ ಯೋಜನೆ ಮತ್ತು ಅನುದಾನವನ್ನು ತಾವೇ ತಂದಿದ್ದು ಎಂದು ಹೇಳಿಕೊಳ್ಳುತ್ತಾ ಪ್ರಚಾರ ಪಡೆಯುತ್ತಿದ್ದಾರೆ ಎಂದು ಟೀಕಿಸಿದರು.

ತಾಲೂಕು ಕೇಂದ್ರವಾದ ತಿ.ನರಸೀಪುರದ ಅತಿಥಿ ಗೃಹಕ್ಕೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು 4.70 ಕೋಟಿ ರೂ. ನೀಡಿದ್ದರು. ಮೂಗೂರು ಗ್ರಾಮದ ದೇಶೀಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ 1 ಕೋಟಿ ಅನುದಾನ ಕೊಟ್ಟಿದ್ದೇವು. ಕಾಮಗಾರಿ ವೀಕ್ಷಣೆಗೆ ಬಂದವರು ಪರಿಶೀಲಿಸಿ, ಪೋಸು ಕೊಟ್ಟರು. ನಾವು ಅಭಿವೃದ್ಧಿಗೊಳಿಸಿದ ರಸ್ತೆಗಳಲ್ಲೇ ಓಡಾಡುತ್ತಾ, ಆಧುನೀಕರಣಗೊಳಿಸಿದ ನಾಲೆಗಳಿಂದ ನೀರಾವರಿ ಸೌಲಭ್ಯ ಪಡೆದು, ಕೊಳವೆಬಾವಿ ಸಂಪರ್ಕ ಪಡೆದುಕೊಂಡವರೇ ಅವರೇನು ಮಾಡಿದ್ದಾರೆ ಎಂದು



ಪ್ರಶ್ನಿಸುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದರೂ, ಜನರು ಮತ್ತು ಕಾರ್ಯಕರ್ತರತ್ತ ಗಮನ ಕೊಡುವುದನ್ನು ಕಡಿಮೆ ಮಾಡಿದ್ದರಿಂದ ಹಿನ್ನಡೆಯಾದ ಬಗ್ಗೆ ಅರಿವಿದೆ. ಈಗಲೂ ಫೋನ್ ತೆಗಿಯಲ್ಲ. ಕೈಗೆ ಸಿಗಲ್ಲ ಎಂಬುದನ್ನು ಬದಿಗಿಟ್ಟು ನಮ್ಮನ್ನು ಕ್ಷೇತ್ರಕ್ಕೆ ನಿತ್ಯವೂ ಕರೆಯಿರಿ ಬರುತ್ತೇವೆ. ಕಾರ್ಯಕರ್ತರು ನಾನು ಅಥವಾ ಸುನೀಲ್ ಬೋಸ್ ಶಾಸಕರಾಗಲು ಕೆಲಸ ಮಾಡುವುದಲ್ಲ, ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರದ ದುರಾಡಳಿತ ಕೊನೆಗಾಣಿಸಲು, ಬಡವರು ಮತ್ತು ರೈತರನ್ನು ಕಾರ್ಪೊರೇಟ್ ಕುಳಗಳಿಂದ ಕಾಪಾಡಲು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತರಬೇಕು. ರಾಮ ನವಮಿಯಲ್ಲಿ ಉಚಿತವಾಗಿ ಹಂಚುವ ಮಜ್ಜಿಗೆ ಮತ್ತು ರೈತರು ಬೆಳೆಯುವ ಕಬ್ಬಿಗೂ ಜಿಎಸ್‌ಟಿ ಕೂಡ ಬೇಕು. ಅಭಿವೃದ್ಧಿ ರಾಜಕಾರಣದ ಧರ್ಮ ದೇವರು ರಾಜಕಾರಣ ಮುನ್ನೆಲೆಗೆ ಬರುತ್ತಿರುವ ಪರಿಣಾಮ ಅರಿತು ಜಾಗೃತರಾಗಬೇಕೆಂದು ಕರೆ ನೀಡಿದರು.

ಒಂದೊಂದು ಮತವೂ ಅಮೂಲ್ಯ: ಯುವ ಮುಖಂಡ ಸುನೀಲ್ ಬೋಸ್ ಮಾತನಾಡಿ, ಸಂತೆಮರಳ್ಳಿ ಕ್ಷೇತ್ರದಲ್ಲಿ ಒಂದು ಮತ ಇಬ್ಬರು ರಾಜಕಾರಣಿಗಳ ಭವಿಷ್ಯ ನಿರ್ಧರಿಸಿದ್ದರಿಂದ ಒಂದೊಂದು ಮತವೂ ಅಮೂಲ್ಯ. ಆದ್ದರಿಂದ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಪಕ್ಷದ ಸಂಘಟನೆ ಹಿತ ದೃಷ್ಟಿಯಿಂದ ಹಾಗೂ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ಮುಂದಿನ ಡಿಸೆಂಬರ್ ಒಳಗೆ ಪಂಚಾಯಿತಿ ಮಟ್ಟದ ಕಾರ್ಯಕರ್ತರ ಸಭೆ ಪೂರ್ಣಗೊಳಿಸಬೇಕಿದೆ. ಪಕ್ಷದ ಸಂಘಟನೆ ಬಲಪಡಿಸಲು ಮುಖಂಡರು ವೈಯಕ್ತಿಕ ಪ್ರತಿಷ್ಠೆ ಬದಿಗಿಡಬೇಕೆಂದು ಮನವಿ ಮಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿದರು. ಕೆಪಿಸಿಸಿ ವೀಕ್ಷಕರಾದ ಮಂಜುಳಾ ರಾಜ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಎಂ. ಬಸವಣ್ಣ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್.ಶಿವಮೂರ್ತಿ, ಹಿರಿಯ ಮುಖಂಡರಾದ ಎಂ.ಪಿ.ಮರಿಸ್ವಾಮಿ, ದೇವಾನಂದ್, ಮಾರಶೆಟ್ಟರು, ನಾಗರಾಜು, ಗ್ರಾಪಂ ಮಾಜಿ ಸದಸ್ಯರಾದ ಮಾದೇಶ್, ಎಂ.ಬಿ.ಸಾಗರ, ಡೇರಿ ಕಾರ್ಯದರ್ಶಿ ಎಂ ನಾಗೇಂದ್ರ ಹಾಗೂ ಇನ್ನಿತರರು ಹಾಜರಿದ್ದರು.

ನನ್ನ ಸ್ಪರ್ಧೆ ಅಪೇಕ್ಷಿಸಬೇಡಿ...

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸುನೀಲ್ ಬೋಸ್ ಬದಲು ನೀವೇ ಸ್ಪರ್ಧಿಸಬೇಕು ಎಂದು ಮುಖಂಡರೊಬ್ಬರು ಪ್ರಸ್ತಾಪಿಸಿದ್ದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಡಾ. ಹೆಚ್.ಸಿ.ಮಹದೇವಪ್ಪ ಅವರು ನಂಜನಗೂಡಿಗೆ ನಾನು, ನರಸೀಪುರಕ್ಕೆ ಬೋಸ್ ಆಕಾಂಕ್ಷಿಗಳಾಗಿ ಅರ್ಜಿ ಸಲ್ಲಿಸಿದ್ದೇವೆ. ಹಾಗಾಗಿ ನನ್ನ ಸ್ಪರ್ಧೆ ಅಪೇಕ್ಷಿಸಬೇಡಿ. ಅಂತಿಮ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟಿದ್ದು. ಪಕ್ಷದ ಕಾರ್ಯಕರ್ತರು, ಮುಖಂಡರೇ ಇಂತಹ ಆಕ್ಷೇಪ ವ್ಯಕ್ತಪಡಿಸುವುದನ್ನು ವಿರೋಧಿಗಳು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳುವುದರಿಂದ ಇಂತಹ ವಿಚಾರವನ್ನು ಮತ್ತೆಲ್ಲೂ ಪ್ರಸ್ತಾಪಿಸಬಾರದೆಂದು ಮನವಿ ಮಾಡಿದರು.

ವಸತಿಗೃಹ ನಿರ್ಮಾಣಕ್ಕೆ ಸಚಿವ ಸಂಪುಟ ಅನುಮೋದನೆ

ನಂಜನಗೂಡು, ನ.18– ಇಲ್ಲಿನ ಶ್ರೀಕಂಠೇಶ್ವರ ಸ್ವಾಮಿ ದೇಗುಲದಲ್ಲಿ ವಿವಿಐಪಿ ಅತಿಥಿ ಗೃಹ ನಿರ್ಮಾಣ ಹಾಗೂ ಭಕ್ತರಿಗಾಗಿ 75 ಕೊಠಡಿಗಳ ಸುಸಜ್ಜಿತ ವಸತಿ ಗೃಹವನ್ನು 16.52 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲು ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಆ ಮೂಲಕ ಶಾಸಕ ಬಿ.ಹರ್ಷವರ್ಧನ್ ಅವಿರತ ಶ್ರಮಕ್ಕೆ ಫಲ ಸಿಕ್ಕಿದೆ.



75 ಕೊಠಡಿಗಳ ಅತಿಥಿಗೃಹ ನಿರ್ಮಾಣಕ್ಕೆ ಗುರುವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅನುಮೋದನೆ ನೀಡಿದ್ದಾರೆ. ಇನ್ನು ನಂಜನಗೂಡಿನಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲು ನ.28ಕ್ಕೆ ಆಗಮಿಸುತ್ತಿರುವ ಸಿಎಂ ಬಸವರಾಜ ಬೊಮ್ಮಾಯಿ ಈ ಯೋಜನೆಗೆ ಶಿಲಾನ್ಯಾಸ ನೆರವೇರಿಸಲಿದ್ದು, ಶೀಘ್ರ ಕಾಮಗಾರಿ ಆರಂಭಗೊಳ್ಳಲಿದೆ.

ಜಾತ್ರೆ ಹಾಗೂ ವಿಶೇಷ ದಿನಗಳಲ್ಲಿ ದೇವರ ದರ್ಶನಕ್ಕೆ ನಂಜನಗೂಡಿಗೆ ಆಗಮಿಸುತ್ತಿದ್ದ ಭಕ್ತರು ದೇವಾಲಯದ ವಸತಿ ಗೃಹಗಳಲ್ಲಿ ಕೊಠಡಿ ಲಭ್ಯವಾಗದ ಪರಿಣಾಮ ದೇವಾಲಯದ ಹೊರಾವರಣದಲ್ಲೇ ಆಶ್ರಯ ಪಡೆಯಬೇಕಿತ್ತು. ಇಲ್ಲವಾದಲ್ಲಿ ದುಬಾರಿ ಬೆಲೆ ತೆತ್ತು ಖಾಸಗಿ ವಸತಿ ಗೃಹಗಳ ಮೊರೆ ಹೋಗಬೇಕಾಗಿತ್ತು ಇದನ್ನರಿತ ಶಾಸಕ ಬಿ.ಹರ್ಷವರ್ಧನ್ 75 ಕೊಠಡಿಗಳ ವಸತಿ ಗೃಹ ನಿರ್ಮಾಣ ಮಾಡಿ ಭಕ್ತರಿಗೆ ಅನುಕೂಲ ಮಾಡಿಕೊಡಬೇಕೆಂದು ನಿರ್ಧರಿಸಿ, ಮುಜರಾಯಿ ಇಲಾಖೆ ವತಿಯಿಂದ ನೀಲಿನಕ್ಷೆ ಸಿದ್ಧಪಡಿಸಿದರು. ಅಲ್ಲದೇ ದೇಗುಲದ ಹಣದಲ್ಲೇ ಅನುದಾನ ಮಂಜೂರು ಮಾಡಿಸಿ ಪುರಾತತ್ವ ಇಲಾಖೆಯಿಂದ ನಿರ್ಮಾಣಕ್ಕೆ ಅನುಮತಿ ಪಡೆಯಲು ಸಾಕಷ್ಟು ತಾಂತ್ರಿಕ ಸಮಸ್ಯೆಗಳು ಎದುರಾದರೂ, ಶಾಸಕ ಹರ್ಷವರ್ಧನ್ ನಿರಂತರ ಶ್ರಮವಹಿಸಿ ಹಣಕಾಸು ಇಲಾಖೆಯಿಂದ ಮಂಜೂರಾತಿ ಪಡೆದು ಇದೀಗ ಸಂಪುಟ ಸಭೆ ಅನುಮೋದನೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಈಗಾಗಲೇ ದೇವಾಲಯದಲ್ಲಿ ಬೆಳ್ಳಿರಥ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಜೊತೆಗೆ ಪಾರ್ಕಿಂಗ್ ಪ್ರದೇಶದಲ್ಲಿ ಕಾಂಕ್ರಿಟ್ ನೆಲಹಾಸು ಹಾಕಲಾಗುತ್ತಿದೆ. ಇದರೊಂದಿಗೆ ವಿವಿಐಪಿ ಅತಿಥಿ ಗೃಹ ಹಾಗೂ ಭಕ್ತರಿಗೆ 75 ಕೊಠಡಿ ವಸತಿ ಗೃಹ ನಿರ್ಮಾಣಕ್ಕೆ ಮಂಜೂರಾತಿ ಲಭ್ಯವಾಗಿರುವುದು ದೇವಾಲಯ ಭಕ್ತರಿಗೆ ಹರ್ಷವನ್ನುಂಟು ಮಾಡಿದೆ.

> ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ಬೆಳ್ಳಿರಥ ಹಾಗೂ ಭಕ್ತರ ವಾಸ್ತವ್ಯಕ್ಕೆ ಹೆಚ್ಚಿನ ಕೊಠಡಿಗಳ ವಸತಿ ಗೃಹ ನಿರ್ಮಾಣ ಮಾಡಬೇಕೆಂಬುದು ಭಕ್ತರು ಹಾಗೂ ಸ್ಥಳೀಯರ ಅನೇಕ ವರ್ಷಗಳ ಬೇಡಿಕೆಯಾಗಿತ್ತು. ಈ 2 ಯೋಜನೆಯನ್ನು ಸಾಕಾರಗೊಳಿಸುತ್ತಿರುವುದು ವೈಯಕ್ತಿಕವಾಗಿ ಖುಷಿ ತಂದಿದೆ. ಮುಂಬರುವ ದಿನಗಳಲ್ಲಿ ದೇವಾಲಯದಲ್ಲಿ ಇನ್ನೂ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.
> – ಬಿ.ಹರ್ಷವರ್ಧನ್, ಶಾಸಕ.

ಬ್ರಾಹ್ಮಣರ ಬಗ್ಗೆ ಪ.ಮಲ್ಲೇಶ್ ಅವಹೇಳನ ಹೇಳಿಕೆ: ಪ್ರತಿಭಟನೆ

ಹುಣಸೂರು, ನ.18– ಬ್ರಾಹ್ಮಣರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಪ.ಮಲ್ಲೇಶ್ ವಿರುದ್ಧ ತಾಲೂಕು ಬ್ರಾಹ್ಮಣ ಸಭಾ ಮತ್ತು ವಿಪ್ರ ಮಹಿಳಾ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.



ನಗರದ ಶ್ರೀರಾಮ ಮಂದಿರದಿಂದ ಹೊರಟ ಪ್ರತಿಭಟನಾ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ಸಂವಿಧಾನ ವೃತ್ತದ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಪ.ಮಲ್ಲೇಶ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಅಧ್ಯಕ್ಷ ಸಿ.ಎಸ್.ಶ್ರೀಧರ್ ಮಾತನಾಡಿ, ಮೈಸೂರಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪ.ಮಲ್ಲೇಶ್ ತಮ್ಮ ಅವಿವೇಕತನದ ಪರಮಾವಧಿ ಮೆರೆದಿದ್ದಾರೆ. ಬ್ರಾಹ್ಮಣರು, ಬ್ರಾಹ್ಮಣ್ಯ ಮತ್ತು ವೇದ ಉಪನಿಷತ್‌ಗಳನ್ನು ಕೇವಲವಾಗಿ ಟೀಕಿಸಿರುವುದಲ್ಲದೇ ದೇಶ ಹಾಳಾಗಲು ಬ್ರಾಹ್ಮಣರೇ ಕಾರಣ. ಅವರನ್ನು ಯಾವತ್ತೂ ನಂಬಬೇಡಿ ಎಂದು ಸಭೆಯಲ್ಲಿ ಬಹಿರಂಗವಾಗಿ ವಿಷಕಾರಿದ್ದಾರೆ. ಮಲ್ಲೇಶ್ ಒಬ್ಬ ಅವಿವೇಕಿ. ಅವರು ವೇದ ಉಪನಿಷತ್ ಓದದಿದ್ದರೂ ಪರವಾಗಿಲ್ಲ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಓದಿ ತಿಳಿಯಲಿ.

ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಣತೆತ್ತ, ಆಸ್ತಿಪಾಸ್ತಿ ಕಳೆದುಕೊಂಡ ಬ್ರಾಹ್ಮಣರ ಕುರಿತು ಅರಿಯಲಿ. ಕೆಲವರಿಗೆ ಬ್ರಾಹ್ಮಣರನ್ನು ತೆಗಳಿದರೆ ಹೀರೋ ಆಗುತ್ತೇವೆ ಎನ್ನುವ ಭ್ರಮೆ ಇದೆ. ಇನ್ನು ಮುಂದೆ ಇದು ನಡೆಯಲ್ಲ. ಸಮಾಜದಲ್ಲಿ ಎಲ್ಲರೊಡಗೂಡಿ ಜೀವನ ನಡೆಸುವವರು ಬ್ರಾಹ್ಮಣರು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸುಮೋಟೋ ಅಧಿಕಾರ ಚಲಾಯಿಸಿ ಮಲ್ಲೇಶರನ್ನು ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಮುಖಂಡ ವಿ.ಎನ್.ದಾಸ್ ಮಾತನಾಡಿ, ನ.21ರಂದು ಮೈಸೂರಿನಲ್ಲಿ ಪ.ಮಲ್ಲೇಶ್ ವಿರುದ್ಧ ಬೃಹತ್ ಪ್ರತಿಭಟನೆ ನಡೆಯಲಿದ್ದು ತಾಲೂಕಿನ ಸಮಸ್ತ ವಿಪ್ರ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

ಮುಖಂಡ ಗುರುರಾಜ್ ಮಾತನಾಡಿದರು. ಪ್ರತಿಭಟನೆಯಲ್ಲಿ ಕಾರ್ಯದರ್ಶಿ ನಾಗರಾಜ್, ಮುಖಂಡರಾದ ರಾಧಾಕೃಷ್ಣ, ವೇಣುಗೋಪಾಲ್, ಸುಬ್ಬಣ್ಣ, ಸಂಪತ್‌ಕುಮಾರ್, ಎಚ್.ಎಸ್.ಸಚ್ಚಿತ್, ಶಿವಕುಮಾರ್, ಅಪ್ಪಿ ನಾಗರಾಜು, ಶೇಷಾಚಲ, ಗೌರೀಶ್, ಕಮಲಾ, ನಾಗರತ್ನ, ರೂಪಾ, ಅನು, ಶೈಲಜಾ, ರಾಘವೇಂದ್ರ, ಡಾ.ರಘುಪತಿ ವಿ.ರಾವ್, ವಿ.ಪಿ.ಸಾಯಿನಾಥ್ ಇತರರು ಹಾಜರಿದ್ದರು. ಉಪ ತಹಸೀಲ್ದಾರ್ ಶಕೀಲಾ ಬಾನು ಮನವಿ ಸ್ವೀಕರಿಸಿದರು.

ಸರಗೂರಿನಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ



ಸರಗೂರು, ನ.18– ಜ್ಞಾನಾರ್ಜನೆಯಿಂದ ಸಾವಿರ ವರ್ಷಗಳ ಇತಿಹಾಸ ತಿಳಿಯಬಹುದು. ಇದಕ್ಕೆ ಗ್ರಂಥಾಲಯ ಸಹಕಾರಿ ಎಂದು ಪಪಂ ಮುಖ್ಯಾಧಿಕಾರಿ ಬಿ.ಜಿ. ಸತೀಶ್ ಅಭಿಪ್ರಾಯಪಟ್ಟರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಗ್ರಂಥಾಲಯದಿಂದ ಸರಗೂರು ಶಾಖಾ ಗ್ರಂಥಾಲಯದಲ್ಲಿ ನಡೆದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದಲ್ಲಿ ಮಾತನಾಡಿದ ಅವರು, ಗ್ರಂಥಾಲಯಕ್ಕೆ ಇಂದಿಗೂ ವಯೋವೃದ್ಧರು ಭೇಟಿ ನೀಡಿ ಪುಸ್ತಕ ಓದಲು ಬಯಸುತ್ತಾರೆ. ಇಂದಿನ ಯುವ ಪೀಳಿಗೆ ದೇಶದ ಇತಿಹಾಸ, ಪರಂಪರೆ, ವಿವಿಧ ಕವಿಗಳ ವಿಚಾರ ಇರುವ ಪುಸ್ತಕಗಳನ್ನು ಓದಿದರೆ ಬುದ್ಧಿ ವಿಕಾಸಗೊಳ್ಳಲಿದೆ. ಉಚಿತವಾಗಿ ಸಿಗುವ ಗ್ರಂಥಾಲಯ ಸೇವೆಗಳನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಿ ಎಂದರು.

ಪಪಂ ಅಧ್ಯಕ್ಷೆ ರಾಧಿಕಾ, ಗ್ರಂಥಾಲಯ ಪಿತಾಮಹ ಡಾ. ಎಸ್.ಆರ್. ರಂಗನಾಥನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಜ್ಞಾನದೇಗುಲವೆಂದರೆ ಅದುವೇ ಗ್ರಂಥಾಲಯ. ಪ್ರತಿ ಯೊಬ್ಬರೂ ಸಾರ್ವಜನಿಕ ಗ್ರಂಥಾಲಯದ ಸೌಲಭ್ಯ ಬಳಸಿಕೊಳ್ಳಿ ಎಂದರು. ಸರಗೂರು ಗ್ರಂಥಾಲಯ ಪಾಲಕ ಬಿಡಗಲು ಶಿವಣ್ಣ ಮಾತನಾಡಿದರು. ಪಪಂ ಸದಸ್ಯರಾದ ನೂರಾಳಸ್ವಾಮಿ, ಶ್ರೀನಿವಾಸ್, ಮುಖಂಡರಾದ ಸ್ವಾಮಿ, ಶ್ರೀನಾಥ್, ರಾಮು, ಪುಟ್ಟಹನುಮಯ್ಯ, ಶಿಕ್ಷಕರಾದ ಶಾಂತವ್ವ ಹಪ್ಪಣ್ಣವರ್, ಗ್ರಂಥಾಲಯ ಪ್ರಭಾರ ಪರಮೇಶ್, ಗ್ರಂಥಾಲಯ ಪಾಲಕ ಬಿಡಗಲು ಶಿವಣ್ಣ, ವಿಜಯಲಕ್ಷ್ಮಿ, ಮುತ್ತು, ಕೃಷ್ಣಯ್ಯ, ವರ್ಷ ಭಾಗವಹಿಸಿದ್ದರು.

ಕೋಟೆಯಲ್ಲಿ ರೈತ ಪರ್ವ ಸಂಘ ಉದ್ಘಾಟನೆ



ಹೆಚ್.ಡಿ.ಕೋಟೆ, ನ.18– ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ರೈತ ಪರ್ವ ಸಂಘವನ್ನು ಕರ್ನಾಟಕ ರಾಜ್ಯ ರೈತ ಪರ್ವ ರಾಜ್ಯಾಧ್ಯಕ್ಷ ಅರುಣ್ ಕುಮಾರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ ರೈತರ ಧ್ವನಿಯಾಗಿ ಅವರಿಗೆ ನ್ಯಾಯ ಒದಗಿಸಲು ಮುಂದಾಗಬೇಕು ಎಂದ ಅವರು, ಶಾಸಕ ಅನಿಲ್ ಚಿಕ್ಕಮಾದು ಅವರು ರೈತರ ಕಷ್ಟಗಳಿಗೆ ಸ್ಪಂದಿಸುವ ಮೂಲಕ ಸಾಗುವಳಿ ಚೀಟಿ ಕೊಡುತ್ತಿರುವ ರಾಜ್ಯದ ಏಕೈಕ ಶಾಸಕ ಎಂದು ಬಣ್ಣಿಸಿದರು.

ತಾಲೂಕಿನ ಕಾಡಂಚಿನ ಪ್ರದೇಶಗಳ ರೈತರು ಬೆಳೆದ ಫಸಲು ನಾಶವಾಗುತ್ತಿವೆ. ರೈತ ಬೆಳೆದ ಫಸಲಿಗೆ ಉತ್ತಮ ಬೆಲೆ ಸಿಗುತ್ತಿಲ್ಲ. ಆದ್ದರಿಂದ ಸರ್ಕಾರದಿಂದ ಸಿಗುವ ಸವಲತ್ತು ಕೊಡಿಸಲು ನಾನು ಮುಂದಾಗುತ್ತೇನೆ ಎಂದರು.

ಇದೇ ವೇಳೆ ರೈತ ಪರ್ವ ರಾಜ್ಯಾಧ್ಯಕ್ಷ ಅರುಣ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಸಂಚಾಲಕ ನವೀನ್‌ಗೌಡ ರಾಜ್ಯ ರೈತಪರ್ವ ತಾಲೂಕು ಅಧ್ಯಕ್ಷ ಮಂಜಣ್ಣ, ನಾಗರಾಜು, ನಾಗಮ್ಮ, ಸುನಿತಾ, ಚಂದ್ರಿಕಾ, ಗಿರಿಜಾಂಬ, ರತ್ನ, ಬೇಬಿ, ವನಿತಾ, ನಾಗರಾಜು, ವೀರಣ್ಣ, ಮಂಜುನಾಥ, ಬಸವಣ್ಣ, ಲೋಕೇಶ್ ಇತರರಿದ್ದರು.

ಮಕ್ಕಳಿಗೆ ಸುತ್ತಿಗೆಯಲ್ಲಿ ಹೊಡೆದ ಕುಡುಕ ತಂದೆ

ಜಯಪುರ, ನ.18– ಕುಡಿದ ಅಮಲಿನಲ್ಲಿ ವ್ಯಕ್ತಿಯೋರ್ವ ತನ್ನ ಪತ್ನಿ ಹಾಗೂ ಇಬ್ಬರು ಮಕ್ಕಳ ತಲೆಯ ಮೇಲೆ ಸುತ್ತಿಗೆಯಿಂದ ಹೊಡೆದ ಅಮಾನವೀಯ ಘಟನೆ ಜಯಪುರ ಹೋಬಳಿಯ ಉದ್ಬೂರು ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.



ಗ್ರಾಮದ ಸ್ವಾಮಿನಾಯಕ (45) ಎಂಬಾತನೇ ಕುಡಿತದ ಅಮಲಿನಲ್ಲಿ ಪತ್ನಿ ಹಾಗೂ ಮಕ್ಕಳ ಮೇಲೆ ಸುತ್ತಿಗೆಯಿಂದ ಹಲ್ಲೆ ನಡೆಸಿದವನಾಗಿದ್ದು, ಇದರಿಂದ ತೀವ್ರವಾಗಿ ಗಾಯಗೊಂಡಿರುವ ಪತ್ನಿ ಗೀತಾ, ಮಕ್ಕಳಾದ ಕುಸುಮ(13) ಮತ್ತು ಧನ್ಯಶ್ರೀ(9) ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದು, ಮಕ್ಕಳ ಸ್ಥಿತಿ ಚಿಂತಾಜನಕವಾಗಿದೆ ಎಂದು ಮೂಲಗಳು ತಿಳಿಸಿವೆ.

ಗುರುವಾರ ರಾತ್ರಿ ಕಂಠಪೂರ್ತಿ ಕುಡಿದು ಮನೆಗೆ ಬಂದ ಸ್ವಾಮಿನಾಯಕ ಪತ್ನಿ ಗೀತಾ ಜೊತೆ ಜಗಳವಾಡಿದ್ದಾನೆ. ನಂತರ ಪತ್ನಿ ಹಾಗೂ ಮಕ್ಕಳ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದಾನೆ ಪ್ರಕರಣ ದಾಖಲಿಸಿಕೊಂಡಿರುವ ಜಯಪುರ ಪೊಲೀಸರು ಆರೋಪಿಯ ಬಂಧನಕ್ಕಾಗಿ ಬಲೆ ಬೀಸಿದ್ದಾರೆ.

ಅನ್ಷು ಕುಮಾರ್ ಯಾದವ್‌ಗೆ ಪಿಹೆಚ್.ಡಿ



ಮೈಸೂರು, ನ.18– ಜೆಎಸ್‌ಎಸ್ ಮೆಡಿಕಲ್ ಕಾಲೇಜು ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎನ್.ಸುಮಾ ಅವರ ಮಾರ್ಗದರ್ಶನದಲ್ಲಿ ಅನ್ಷು ಕುಮಾರ್ ಯಾದವ್ ಸಾದರಪಡಿಸಿದ ನವಜಾತು ಶಿಶು ಆರೈಕೆ ಕುರಿತ ಸಂಶೋಧನಾ ಗ್ರಂಥವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಕಾಡೆಮಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಬನ್ನೂರಿನ ಸಮೀಪದ ತುರಗನೂರು ಗ್ರಾಪಂ ನೂತನ ಅಧ್ಯಕ್ಷ ರಾಜೇಶ್ ಅವರನ್ನು ಜೆಡಿಎಸ್ ಮುಖಂಡ ವೈ.ಎನ್.ರಾಮಸ್ವಾಮಿ ಸನ್ಮಾನಿಸಿದರು. ಬಿ.ಆರ್.ಮಂಜುನಾಥ್ ಸೇರಿದಂತೆ ಜೆಡಿಎಸ್ ಕಾರ್ಯಕರ್ತರು ಇದ್ದರು.



ನನ್ನ ಕರ್ಮಭೂಮಿಯಿಂದ ಹೊರಹೋದರೆ ರಾಜಕೀಯಕ್ಕೆ ಗುಡ್ ಬೈ

ಶಾಸಕ ಸಾ.ರಾ.ಮಹೇಶ್

ಚುಂಚನಕಟ್ಟೆ, ನ.18– ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ ನನ್ನ ರಾಜಕೀಯ ಕರ್ಮಭೂಮಿ. ಒಂದು ವೇಳೆ ಇಲ್ಲಿಂದ ಹೊರಹೋದರೆ ರಾಜಕೀಯ ಜೀವನಕ್ಕೆ ಗುಡ್ ಬೈ ಹೇಳುವುದಾಗಿ ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹಳಿಯೂರು ಬಡಾವಣೆಯಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತಾಡಿದ ಅವರು, ಕಳೆದ 14 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಕ್ಷೇತ್ರದ ಮತದಾರರಿಗೆ ಕೋಟ್ಯಾಂತರ ರೂ.ಗಳ ವೈಯಕ್ತಿಕ ನೆರವು ನೀಡಿದ್ದೇನೆ. ಯಾರ ಬಳಿಯೂ ವರ್ಗಾವಣೆಗೆ, ಗುತ್ತಿಗೆ ಕಾಮಗಾರಿಗಾಗಿ ಒಂದೂ ರೂಪಾಯಿಯನ್ನೂ ಪಡೆದಿಲ್ಲ ಇದನ್ನು ಎಲ್ಲಿ ಬೇಕಾದರೂ ಪ್ರಮಾಣೀಕರಿಸುವೆ ಎಂದರು.

ಕೆಲವೊಂದು ವಿಚಾರಗಳಲ್ಲಿ ನನಗೆ ಮತ್ತು ನನ್ನ ಕಾರ್ಯಕರ್ತರಿಗೆ ನೋವಾಗಿರುವುದು ನಿಜ. ಕೆಲವರು ನನ್ನ ವಿರುದ್ಧ ಮಾತನಾಡುತ್ತಿದ್ದಾರೆ. ಯಾರು ಏನು ಮಾತನಾಡಿದರೂ ತಲೆಕೆಡಿಸಿಕೊಳ್ಳುವುದಿಲ್ಲ. ನಾನು ತಲೆಕೆಡಿಸಿ



ಕೊಳ್ಳುವುದು ಅಭಿವೃದ್ಧಿ ಕೆಲಸಗಳಿಗೆ ಮಾತ್ರ ಎಂದರು.

50 ಮನೆ ಮಂಜೂರು: ಹಳಿಯೂರು ಗ್ರಾಪಂ ವ್ಯಾಪ್ತಿಯ 7 ಗ್ರಾಮಗಳಲ್ಲಿ ಸೂರು ಇಲ್ಲದವರಿಗೆ ಸೂರು ನೀಡಲು 50 ಮನೆಗಳನ್ನು ಮಂಜೂರು ಮಾಡಲಾಗಿದೆ. ಗ್ರಾಪಂನವರು ಸಭೆ ನಡೆಸಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಟ್ಟರೆ ತಕ್ಷಣ ಅವರಿಗೆ ಹಕ್ಕುಪತ್ರ ವಿತರಿಸುವುದಾಗಿ ತಿಳಿಸಿದರು.

5 ಲಕ್ಷ ಮಂಜೂರು: ನೂತನ ಹಾಲು ಉತ್ಪಾದಕರ ಸಹಕಾರ ಸಂಘದವರು ನಿವೇಶನ ಒದಗಿಸಿಕೊಟ್ಟರೆ ತಮ್ಮ ನಿಧಿಯಿಂದ 5 ಲಕ್ಷ ರೂ. ಮಂಜೂರು ಮಾಡುವುದಾಗಿ ಹೇಳಿದ ಶಾಸಕರು, ರೈತರು ಗುಣಮಟ್ಟದ ಹಾಲು ಸರಬರಾಜು ಮಾಡಿ ಸಂಘದ ಅಭಿವೃದ್ಧಿಗೆ ಮುಂದಾಗುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಹೆಚ್.ಆರ್. ಕೃಷ್ಣಮೂರ್ತಿ, ಉಪಾಧ್ಯಕ್ಷ ಹೆಚ್.ಕೆ.ವಿಕ್ರಮ್‌ಗೌಡ, ನಿರ್ದೇಶಕರಾದ ನಾಗರಾಜು, ಭರತ್ ರಾಜ್, ಜಯಣ್ಣ, ಕೃಷ್ಣ, ಅಜಯ್ ಕುಮಾರ್, ಚಂದ್ರ, ಮೀನಾಕ್ಷಿ, ಸುಭದ್ರಮ್ಮ, ಲಕ್ಷ್ಮಿ, ಲೀಲಾವತಿ, ಸಂಘದ ಕಾರ್ಯದರ್ಶಿ ರಾಜೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಮಹೇಶ್, ಮಾಜಿ ನಿರ್ದೇಶಕ ಕೀರ್ತಿ, ಶಿಕ್ಷಕ ಕುಚೇಲ್, ಮುಖಂಡರಾದ ಮಧುಚಂದ್ರ, ಸಂತೋಷ್, ಬಿ.ರಮೇಶ್, ರಾಘವೇಂದ್ರ, ಭಾಸ್ಕರ್ ಮಾಜಿ ತಾಪಂ ಸದಸ್ಯ ಲೋಕೇಶ್, ಮಾಜಿ ಗ್ರಾಪಂ ಸದಸ್ಯ ಶಿವಣ್ಣ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹರಿಚಿದಂಬರ್, ಹಾಲು ಒಕ್ಕೂಟದ ನೇಮಿನಾಥ್ ಮಾಕೇನಿ ಸೇರಿದಂತೆ ಮತ್ತಿತರಿದ್ದರು.

> ಈ ಬಾರಿ ನನಗೆ ಆಶೀರ್ವಾದ ಮಾಡುವ ಮೂಲಕ ನಮ್ಮ ಕುಟುಂಬ ಕಾಪಾಡಿ ಎಂದು ಕಾಂಗ್ರೆಸ್ ಅಭ್ಯರ್ಥಿ ತಾಲೂಕಿನ ಜನತೆಯಲ್ಲಿ ಕೇಳಿಕೊಳ್ಳುತ್ತಿದ್ದಾರೆ. ಆದರೆ ನಾನು ಕಳೆದ 14 ವರ್ಷದಿಂದ ಜನರ ಮಧ್ಯೆ ಇದ್ದು ಅವರ ನೋವಿಗೆ ಸ್ಪಂದಿಸುವ ಜೊತೆ ಅಭಿವೃದ್ಧಿ ಕಾರ್ಯ ಮಾಡಿದ್ದು, ಚುನಾವಣೆ ವೇಳೆ ಮತ ಕೇಳಲು ಬರುವವರನ್ನು ತಿರಸ್ಕರಿಸಿ ನನ್ನ ಅಭಿವೃದ್ಧಿ ಕಾರ್ಯ ನೋಡಿ ಜನ ಈ ಚುನಾವಣೆಯಲ್ಲಿ ಬೆಂಬಲಿಸಲಿದ್ದಾರೆ.
> – ಸಾ.ರಾ.ಮಹೇಶ್, ಶಾಸಕ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಮತ (ಕ): ಬೆ.10ಕ್ಕೆ, ಅಬ್ಬರ (ಕ): ಮ.1.05ಕ್ಕೆ, ರಾ.10.05ಕ್ಕೆ, ಕಾಲಗ ತಲೈವನ್ (ತ): ಸಂ.4ಕ್ಕೆ, ಉಂಚೈ (ಹಿಂ): ಸಂ.6.55ಕ್ಕೆ.
ಸ್ಕ್ರೀನ್ 3	ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಯಶೋಧಾ (ತೆ): ಸಂ.4.15ಕ್ಕೆ, ದೃಶ್ಯಂ–2 (ಹಿಂ): ರಾ.7.05ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ದೃಶ್ಯಂ–2 (ಹಿಂ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಮತ (ಕ): ಬೆ.11.30ಕ್ಕೆ, ಖಾಸಗಿ ಪುಟಗಳು (ಕ): ಮ.2.35ಕ್ಕೆ, ಅಬ್ಬರ (ಕ): ಸಂ.5ಕ್ಕೆ, ಗಂಧದ ಗುಡಿ (ಕ): ರಾ.8ಕ್ಕೆ, ಕಾಲಗ ತಲೈವನ್ (ತ): ರಾ.10.10ಕ್ಕೆ.
ಸ್ಕ್ರೀನ್ 4	ದೃಶ್ಯಂ–2 (ಹಿಂ): ಬೆ.10.45ಕ್ಕೆ, ರಾ.10.30ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.5ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಬ್ಬರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೃಶ್ಯಂ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಂಧದ ಗುಡಿ (ಕ) ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮ್ಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಅಬ್ಬರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಬ್ಬರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು



ಪಿರಿಯಾಪಟ್ಟಣ ತಾಲೂಕಿನ ಸುಂಡ್ವಾಳು ಗ್ರಾಮದ ಕಾಂಗ್ರೆಸ್ ಮುಖಂಡ ವೆಂಕಟೇಶ್ ಹಾಗೂ ಬೆಂಬಲಿಗರು ಶಾಸಕ ಕೆ.ಮಹದೇವ್ ನೇತೃತ್ವದಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮುಖಂಡರಾದ ಹರೀಶ್, ಶಾಂತಕುಮಾರ್, ರಾಮು, ಕುಮಾರ್, ಮಹೇಶ್ ಇನ್ನಿತರರಿದ್ದರು.

ರಾಘವ ನಿಧನ




ಹುಣಸೂರು, ನ.18– ನಗರದ ಮುತ್ತುಮಾರಮ್ಮ ದೇವಸ್ಥಾನ ಬೀದಿ ನಿವಾಸಿ ದಿ.ಮೇಸ್ತ್ರಿ ಶ್ರೀರಾಮುಲು ನಾಯ್ಡು ಅವರ ಪುತ್ರ ರಾಘವ (47) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಪಂಪ್‌ಹೌಸ್ ಬಳಿಯ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣಪತಿರಾವ್ ಘಾಟ್ಕೆ



ಗಾವಡಗೆರೆ, ನ.18– ಗ್ರಾಮದ ನಿವಾಸಿ, ಮಾಜಿ ಸೈನಿಕ ಗಣಪತಿ ರಾವ್ ಘಾಟ್ಕೆ (70) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿವೃತ್ತ ವಿಜಯಾ ಬ್ಯಾಂಕ್ ಮ್ಯಾನೇಜರ್ ಕಲ್ಯಾಟಂಡ ಎಸ್. ಚೆಂಗಪ್ಪ ನಿಧನ



ಮೈಸೂರು, ನ.18– ನಿವೃತ್ತ ವಿಜಯಾ ಬ್ಯಾಂಕ್ ಮ್ಯಾನೇಜರ್, ಮೈಸೂರಿನ ಸರಸ್ವತಿಪುರಂ 4ನೇ ಮೇನ್ ರಸ್ತೆ (ನಂ.24) ನಿವಾಸಿ ಕಲ್ಯಾಟಂಡ ಎಸ್. ಚೆಂಗಪ್ಪ (ರಾಜಾ –71) ಅವರು ಇಂದು ರಾತ್ರಿ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರು ಮೂಲತಃ ಕೊಡಗಿನ ಕಕ್ಕಬ್ಬೆಯ ಕುಂಜಿಲ ಗ್ರಾಮದವರು ಹಾಗೂ ಪ್ರಭು ಪೊನ್ನಪ್ಪ ಅವರ ಸಹೋದರ.

ಇವರ ಅಂತ್ಯಕ್ರಿಯೆ ನಾಳೆ (ನ.19) ಮಧ್ಯಾಹ್ನ 2 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಸಂಪರ್ಕಕ್ಕೆ: 9980043675)

ಗೋಪುರ ಯಾವುದಾದರೇನು ಸ್ವಾಮಿ, ಜನರಿಗೆ ನೆರಳು ಕೊಡಿ

ಶ್ರೀ ಚಾಮುಂಡೇಶ್ವರಿ ದರ್ಶನ ನಂತರ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸಲಹೆ



ಮೈಸೂರು, ನ.18 (ಆರ್‌ಕೆ)–ಪ್ರಯಾಣಿಕರ ತಂಗು ದಾಣದ ಗೋಪುರ ಯಾವ ಆಕಾರದಲ್ಲಿದ್ದರೇನು, ಜನರಿಗೆ ನೆರಳು ಕೊಡಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸಲಹೆ ನೀಡಿದ್ದಾರೆ.

ಪಂಚರತ್ನ ಯಾತ್ರೆಗೆ ಚಾಲನೆ ನೀಡುವ ಮುನ್ನ ಇಂದು ಬೆಳಗ್ಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ಶಾಸಕ ಜಿ.ಟಿ. ದೇವೇಗೌಡರೊಂದಿಗೆ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾರ್ವಜನಿಕರಿಗಾಗಿ ಬಸ್ ತಂಗುದಾಣ ನಿರ್ಮಿಸುವ ವಿಚಾರದಲ್ಲಿ ಉಂಟಾಗಿರುವ ವಿವಾದದಿಂದ ಶಾಸಕ ರಾಮದಾಸ್ ಕಣ್ಣೀರಿಟ್ಟಿರುವುದನ್ನು ಗಮನಿಸಿದ್ದೇನೆ. ಸಂಸದರ ಮಾತುಗಳನ್ನೂ ಗಮನಿಸಿದ್ದೇನೆ. ಒಬ್ಬ ಶಾಸಕರೇ ಅಸಹಾಯಕತೆಯಿಂದ ಕಣ್ಣೀರಿಟ್ಟರೆ, ಅವರಿಗೆ ಮತ ನೀಡಿದ ಜನರ ಗತಿ ಏನು? ಮಸೀದಿಯನ್ನಾದರೂ ಮಾಡಿ, ಗೋಪುರವನ್ನಾದರೂ ಮಾಡಿ, ಆದರೆ ಜನರಿಗೆ ನೆರಳು ಕೊಡಿ. ನಿಮ್ಮ ಆಂತರಿಕ ದ್ವೇಷಕ್ಕೆ ಸಾರ್ವಜನಿಕರ ತೆರಿಗೆ ಹಣದಿಂದ ನಿರ್ಮಿಸಿರುವ ಕಟ್ಟಡವನ್ನು ಕೆಡವುವ ಕೆಲಸ ಮಾಡಬೇಡಿ ಎಂದು ನುಡಿದರು.

ಪಂಚರತ್ನ ಯಾತ್ರೆಗೆ ಚಾಲನೆ ನೀಡುತ್ತಿದ್ದೇವೆ. ಜನಪರ ಯೋಜನೆಗಳನ್ನು ಅನುಷ್ಠಾನ ಮಾಡುವ ಮಹತ್ವಾಕಾಂಕ್ಷೆಯೊಂದಿಗೆ ಜೆಡಿಎಸ್ ಪಕ್ಷ ಚುನಾವಣೆಗೆ ಹೋಗುತ್ತಿದೆ. ಮಾರ್ಚ್ 2023ಕ್ಕೆ ಮೈಸೂರಲ್ಲೇ ಯಾತ್ರೆಯ ಸಮಾರೋಪ ಸಮಾರಂಭವನ್ನು ಬೃಹತ್ ಸಮಾವೇಶದ ಮೂಲಕ ಮಾಡುತ್ತೇವೆ ಎಂದು ಕುಮಾರಸ್ವಾಮಿ ತಿಳಿಸಿದರು.


100 ಮಂದಿ ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಸಿದ್ಧವಾಗಿದೆ. ಮುಂದಿನ ದಿನಗಳಲ್ಲಿ ಸೂಕ್ತ ಸಮಯ ನೋಡಿಕೊಂಡು ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ. ದೇವೇಗೌಡರು ಪಟ್ಟಿ ಬಿಡುಗಡೆ ಮಾಡುತ್ತಾರೆ ಎಂದು ಅವರು ಇದೇ ಸಂದರ್ಭ ತಿಳಿಸಿದರು. ಶಾಸಕರಾದ ಬಂಡೆಪ್ಪ ಕಾಶೆಂಪೂರ್, ಅಶ್ವಿನ್ ಕುಮಾರ್, ಸಿ.ಎಸ್.ಪುಟ್ಟರಾಜು, ಸಿ.ಎನ್. ಮಂಜೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಹಾಗೂ ಜೆಡಿಎಸ್ ಮುಖಂಡರು ಈ ಸಂದರ್ಭ ಉಪಸ್ಥಿತರಿದ್ದರು.

ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತೊಗೆಯುವವರೆಗೂ ವಿರಮಿಸುವುದಿಲ್ಲ

ನವದೆಹಲಿ: ಇಂದಿನ ಜಗತ್ತಿನಲ್ಲಿ, ಭಯೋತ್ಪಾದನೆಯ ಅಪಾಯಗಳ ಬಗ್ಗೆ ಜಗತ್ತಿಗೆ ಯಾರೂ ನೆನಪಿಸುವ ಅಗತ್ಯವಿಲ್ಲ. ಆದರೂ, ಕೆಲವು ವಲಯಗಳಲ್ಲಿ ಭಯೋತ್ಪಾದನೆಯ ಬಗ್ಗೆ ಇನ್ನೂ ಕೆಲವು ತಪ್ಪು ತಿಳುವಳಿಕೆಗಳಿವೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ದೆಹಲಿಯಲ್ಲಿಂದು ಹೇಳಿದ್ದಾರೆ.

ಅವರು 'ಭಯೋತ್ಪಾದನೆಗೆ ಹಣವಿಲ್ಲ' ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ, ಭಯೋತ್ಪಾದನೆಗೆ ಸಂಬಂಧಪಟ್ಟ ಒಂದೇ ಒಂದು ದಾಳಿಯು ಸಹ ಹಲವಾರು ಎಂದು ನಾವು ಪರಿಗಣಿಸುತ್ತೇವೆ. ಹಾಗಾಗಿ, ಭಯೋತ್ಪಾದನೆಯನ್ನು ಬೇರು ಸಮೇತ ಕಿತ್ತು ಹಾಕುವವರೆಗೂ ನಾವು ವಿರಮಿಸುವುದಿಲ್ಲ ಎಂದು ಘೋಷಿಸಿದರು.

ಭಯೋತ್ಪಾದನೆಯನ್ನು ಬೇರುಸಹಿತ ಕಿತ್ತುಹಾಕಲು ದೊಡ್ಡ, ಪೂರ್ವಭಾವಿ, ವ್ಯವಸ್ಥಿತ ಪ್ರತಿಕ್ರಿಯೆಯ ಅಗತ್ಯವಿದೆ, ನಮ್ಮ ನಾಗರಿಕರು ಸುರಕ್ಷಿತವಾಗಿರಬೇಕೆಂದರೆ,



ನಮ್ಮ ಮನೆ ಬಾಗಿಲ ತನಕ ಭಯೋತ್ಪಾದನೆ ಬರುವವರೆಗೆ ನಾವು ಕಾಯಲು ಸಾಧ್ಯವಿಲ್ಲ. ಭಯೋತ್ಪಾದಕರನ್ನು ಬೆನ್ನಟ್ಟಿಕೊಂಡು ಹೋಗಬೇಕು, ಅವರ ಬೆಂಬಲ ಜಾಲಗಳನ್ನು ಮುರಿಯಬೇಕು, ಅವರಿಗೆ ಹಣ ಸಿಗುವಂತಾಗಬಾರದು, ಅವರ ಆರ್ಥಿಕತೆಗೆ ಹೊಡೆತ ನೀಡಬೇಕು, ಆಗ ಮಾತ್ರ ಭಯೋತ್ಪಾದನೆಯನ್ನು ಕಿತ್ತೊಗೆಯಲು ಸಾಧ್ಯ ಎಂದರು.

ಭಯೋತ್ಪಾದಕರ ವಿಭಿನ್ನ ದಾಳಿಗಳಿಗೆ ಪ್ರತಿಕ್ರಿಯೆಯ ತೀವ್ರತೆಯು ಅದು ಎಲ್ಲಿ ಸಂಭವಿಸುತ್ತದೆ ಎಂಬುದರ ಆಧಾರದ ಮೇಲೆ ಬದಲಾಗುವುದಿಲ್ಲ. ಎಲ್ಲಾ ಭಯೋತ್ಪಾದಕ ದಾಳಿಗಳು ಸಮಾನ ಆಕ್ರೋಶ ಮತ್ತು ಕ್ರಮವನ್ನು ಹೊಂದಿರುತ್ತವೆ ಎಂದರು.

ಈ ಸಮ್ಮೇಳನ ಭಾರತದಲ್ಲಿ ನಡೆಯುತ್ತಿರುವುದು ಗಮನಾರ್ಹ. ಜಗತ್ತು ಭಯೋತ್ಪಾದನೆಯನ್ನು ಗಂಭೀರವಾಗಿ ಪರಿಗಣಿಸುವ ಮೊದಲೇ ನಮ್ಮ ದೇಶವು ಅದರ ಭೀಕರತೆಯನ್ನು ಎದುರಿಸಿದೆ. ದಶಕಗಳಿಂದ ವಿವಿಧ ರೂಪಗಳಲ್ಲಿ ಭಯೋತ್ಪಾದನೆ ಭಾರತವನ್ನು ನೋಯಿಸಲು ಪ್ರಯತ್ನಿಸಿದೆ ಆದರೆ ನಾವು ಭಯೋತ್ಪಾದನೆಯನ್ನು ಧೈರ್ಯದಿಂದ ಎದುರಿಸಿದ್ದೇವೆ ಎಂದರು.

ಭಯೋತ್ಪಾದಕ ಸಂಘಟನೆಗಳು ಹಲವು ಮೂಲಗಳ ಮೂಲಕ ಹಣವನ್ನು ಪಡೆಯುತ್ತವೆ ಎಂಬುದು ಎಲ್ಲರಿಗೂ ತಿಳಿದಿದೆ–ಅದಕ್ಕೆ ಕೆಲವು ರಾಜ್ಯ, ಕೆಲವು ದೇಶಗಳು ತಮ್ಮ ವಿದೇಶಾಂಗ ನೀತಿಯ ಭಾಗವಾಗಿ ಭಯೋತ್ಪಾದನೆಯನ್ನು ಬೆಂಬಲಿಸುತ್ತವೆ. ಅವು ರಾಜಕೀಯ, ಸೈದ್ಧಾಂತಿಕ ಮತ್ತು ಆರ್ಥಿಕ ಕೊಡುಗೆಗಳನ್ನು ನೀಡುತ್ತವೆ ಎಂಬುದು ಗೊತ್ತಿರುವ ವಿಚಾರ.ಆಮೂಲಾಗ್ರೀಕರಣ ಮತ್ತು ಉಗ್ರವಾದದ ಸಮಸ್ಯೆಯನ್ನು ನಾವು ಜಂಟಿಯಾಗಿ ಪರಿಹರಿಸುವುದು ಮುಖ್ಯವಾಗಿದೆ. ಆಮೂಲಾಗ್ರೀಕರಣವನ್ನು ಬೆಂಬಲಿಸುವವರಿಗೆ ಯಾವುದೇ ದೇಶದಲ್ಲಿ ಸ್ಥಾನವಿಲ್ಲ ಎಂದರು.

ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ: ತಾತ್ಕಾಲಿಕ ಆಯ್ಕೆ ಪಟ್ಟಿ ಬಿಡುಗಡೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸಮಗ್ರ ಶಿಕ್ಷಣ ಕಚೇರಿಯಲ್ಲಿ ಸಚಿವ ಬಿ.ಸಿ.ನಾಗೇಶ್ ಶುಕ್ರವಾರ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ ಮಾಡಿದ್ದೇವೆ. 1:1 ಆಧಾರದಲ್ಲಿ ಪಟ್ಟಿ ರಿಲೀಸ್ ಮಾಡಲಾಗಿದೆ. ಎಲ್ಲರ ಆರೋಪಕ್ಕೆ ಇವತ್ತು ಉತ್ತರ ನೀಡಿದ್ದೇವೆ. ಅತ್ಯುತ್ತಮವಾಗಿ ಪರೀಕ್ಷೆ ನಡೆಸಿ ಆಯ್ಕೆ ಪಟ್ಟಿ ಬಿಡುಗಡೆ ಮಾಡಿದ್ದೇವೆ ಎಂದು ತಿಳಿಸಿದ್ದಾರೆ.

15 ಸಾವಿರ ಶಿಕ್ಷಕರ ನೇಮಕಾತಿಗೆ ಪರೀಕ್ಷೆ ಮಾಡಿದ್ದೆವು. 13,363 ಜನ 1:1 ಆಧಾರದಲ್ಲಿ ಅಭ್ಯರ್ಥಿಗಳು ಪಟ್ಟಿಯಲ್ಲಿ ಇದ್ದಾರೆ. ಕಲ್ಯಾಣ ಕರ್ನಾಟಕದಲ್ಲಿ 5 ಸಾವಿರ ಹುದ್ದೆ ಇಟ್ಟಿದ್ದೇವೆ. ಆದರೆ ಅಲ್ಲಿ ಸ್ವಲ್ಪ ಕೊರತೆ ಆಗಿದೆ. 5 ಸಾವಿರ ಹುದ್ದೆ ಪೈಕಿ 4,187 ಪಟ್ಟಿ ರಿಲೀಸ್ ಆಗಿದೆ (ಕಲ್ಯಾಣ ಕರ್ನಾಟಕ). ಉಳಿದ ಭಾಗದಲ್ಲಿ 9,176 ಅಭ್ಯರ್ಥಿಗಳ ಪಟ್ಟಿ ರಿಲೀಸ್ ಮಾಡಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ.

ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಸ್ಥಾನಕ್ಕೆ ಫಾರೂಖ್ ಅಬ್ದುಲ್ಲಾ ರಾಜೀನಾಮೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಖ್ ಅಬ್ದುಲ್ಲಾ ಶುಕ್ರವಾರ ನ್ಯಾಷನಲ್ ಕಾನ್ಫರೆನ್ಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದಾರೆ. ಹೊಸ ಪೀಳಿಗೆಯವರು ಅಧ್ಯಕ್ಷ ಸ್ಥಾನ ವಹಿಸಲು ಇದು ಸೂಕ್ತ ಸಮಯವಾಗಿದೆ ಎಂದು ಅವರು ಹೇಳಿದ್ದಾರೆ. ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಡಿಸೆಂಬರ್ 5ರಂದು ಚುನಾವಣೆ ನಡೆಯಲಿದ್ದು, ಯಾವುದೇ ಕಾರಣಕ್ಕೂ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ಯುವ ಪೀಳಿಗೆ ಯವರು ಪಕ್ಷದ ಜವಾಬ್ದಾರಿ ವಹಿಸಿಕೊಳ್ಳಲು ಇದು ಸರಿಯಾದ ಸಮಯವಾಗಿದೆ ಎಂದಿದ್ದಾರೆ.

ಮಳೆಯಿಂದ ಭಾರತ–ನ್ಯೂಜಿಲೆಂಡ್ ಪಂದ್ಯ ರದ್ದು

ವೆಲ್ಲಿಂಗ್ಟನ್,ನ.18–ಭಾರತ–ನ್ಯೂಜಿಲೆಂಡ್ ನಡುವಿನ 3 ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯ ಮಳೆಯಿಂದಾಗಿ ರದ್ದಾಗಿದೆ. ಶುಕ್ರವಾರ ಸತತವಾಗಿ ತುಂತುರು ಮಳೆ ಸುರಿದ ಕಾರಣ ಟಾಸ್ ನಡೆಯದೇ ಪಂದ್ಯ ರದ್ದಾಯಿತು. ಪಂದ್ಯಕ್ಕಾಗಿ ಕಾತುರತೆಯಿಂದ ಕಾದು ಕುಳಿತಿದ್ದ ಅಭಿಮಾನಿಗಳಿಗೆ ನಿರಾಸೆ ಉಂಟಾಯಿತು. ನ್ಯೂಜಿಲೆಂಡ್ ಪ್ರವಾಸದ ಭಾಗವಾಗಿ ಭಾರತ 3 ಟಿ20 ಹಾಗೂ ಹಲವು ಏಕದಿನ ಪಂದ್ಯಗಳನ್ನು ಆಡಲಿದೆ. ಎರಡನೇ ಟಿ20 ಪಂದ್ಯ ಭಾನುವಾರ ನಡೆಯಲಿದೆ.